# ಸಮಾಜವಿಜ್ಞಾನ
# SOCIAL SCIENCE

## ಭಾಗ – 2
## PART -2

**ತರಗತಿ VI**
**STANDARD -VI**

ಕೇರಳ ಸರಕಾರ
ಶಿಕ್ಷಣ ಇಲಾಖೆ

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT), ಕೇರಳ
2016

KT 643-1/ Soc.Sci (K)-6 (Vol-2)

## ರಾಷ್ಟ್ರಗೀತೆ

ಜನ ಗಣ ಮನ ಅಧಿನಾಯಕ ಜಯ ಹೇ
ಭಾರತ ಭಾಗ್ಯ ವಿಧಾತಾ,
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ,
ವಿಂಧ್ಯ ಹಿಮಾಚಲ ಯಮುನಾ ಗಂಗಾ,
ಉಚ್ಛಲ ಜಲಧಿತರಂಗ,
ತವಶುಭ ನಾಮೇ ಜಾಗೇ,
ತವಶುಭ ಆಶಿಶ ಮಾಗೇ,
ಗಾಹೇ ತವ ಜಯ ಗಾಥಾ
ಜನ ಗಣ ಮಂಗಲದಾಯಕ ಜಯ ಹೇ
ಭಾರತ ಭಾಗ್ಯ ವಿಧಾತಾ,
ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ ಜಯ ಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ, ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ಹೆತ್ತವರನ್ನು ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

**State Council of Educational Research and Training (SCERT)**
Poojappura, Thiruvananthapuram 695012, Kerala
*Website* : www.scertkerala.gov.in, *e-mail* : scertkerala@gmail.com
Phone : 0471 - 2341883, Fax : 0471 - 2341869
Typesetting and Layout : SCERT, Printed at : KBPS, Kakkanad, Kochi-30
© Department of Education, Government of Kerala

ಪ್ರೀತಿಯ ಮಕ್ಕಳೇ,

ಸಮಾಜವಿಜ್ಞಾನವು ಸಮಾಜದತ್ತ ತೆರೆಯುವ ಬಾಗಿಲಾಗಿದೆ. ಈ ಬಾಗಿಲು ತೆರೆದರೆ ಅರಿವು ಹಾಗೂ ವಿಸ್ಮಯಗಳ ಅನಂತ ಸಾಧ್ಯತೆಗಳ ಕಡೆಗೆ ನೀವು ತಲುಪಬಹುದು. ಅಲ್ಲಿ ಚರಿತ್ರೆಯ ಸುವರ್ಣ ನಿಮಿಷಗಳಿವೆ. ಯಾತ್ರಿಕರ ಲೇಖನಗಳೂ ಇತಿಹಾಸದ ಕುರುಹುಗಳೂ ಇವೆ. ಎಂದೆಂದಿಗೂ ಅಳಿಯದ ನಮ್ಮ ದೇಶದ ಸಾಂಸ್ಕೃತಿಕ ಮುದ್ರೆಗಳಿವೆ. ಭೂಮಿ ಹೇಳುವ ಕಥೆಗಳೂ ವಿಷಯಗಳೂ ಇವೆ. ಮಣ್ಣು, ಮಳೆ, ಮನುಷ್ಯರೂ ಇದ್ದಾರೆ. ಉತ್ಪಾದನೆ ಎಂಬ ಆರ್ಥಿಕ ಚಟುವಟಿಕೆ ಹಾಗೂ ಪ್ರಜಾಪ್ರಭುತ್ವದ ಹಕ್ಕುಗಳೂ ಇವೆ. ಹೀಗೆ ಅನೇಕ ವೈವಿಧ್ಯಗಳಿಂದೊಡಗೂಡಿದ ಪ್ರಪಂಚವನ್ನು ಸಮಾಜವಿಜ್ಞಾನ ಪಠ್ಯಪುಸ್ತಕವು ನಿಮಗಾಗಿ ಪರಿಚಯಿಸುತ್ತದೆ. ಚರಿತ್ರೆಯನ್ನು ತಿಳಿಯಲು, ಪ್ರಕೃತಿಯನ್ನು ಪ್ರೀತಿಸಲು, ವೈವಿಧ್ಯಗಳನ್ನು ಅರ್ಥೈಸಲು ಜವಾಬ್ದಾರಿಯುತ ಪ್ರಜೆಯಾಗಿ ಬದಲಾಗಲು ಸಮಾಜವಿಜ್ಞಾನ ಪಠ್ಯಪುಸ್ತಕವು ನಿಮಗೆ ದಾರಿದೀಪವಾಗಬಹುದು. ಚರ್ಚೆಗಳು, ಸಂವಾದಗಳು, ಅನ್ವೇಷಣೆಗಳು, ಸಂಶೋಧನೆಗಳು ಇತ್ಯಾದಿಗಳು ನಿಮ್ಮ ತರಗತಿಗೆ ನವಚೈತನ್ಯವನ್ನೀಯಲಿ.

ಪ್ರೀತಿಪೂರ್ವಕ ಶುಭಾಶಯಗಳೊಂದಿಗೆ,

**ಡಾ.ಜೆ.ಪ್ರಸಾದ್**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ.

## TEXT BOOK DEVELOPMENT COMMITTEE

### PARTICIPANTS

**Abdul Azeez V.P.**
H.S.S.T. History, V.P.K.M.M.H.S.S. Puthoor, Pallikkal.

**Abdul Samad K.C.**
Govt. H.S.S. Vadakara,Kozhikode

**Jayakrishnan O.K.**
H.S.A., K.P.C.H.S.S. Pattannur, Kannur.

**Nisha M.S.**
U.P.S.A.,P.H.S.S. Mezhuvehi,Pathanamthitta

**Nishanth Mohan M.**
H.S.S.T, Govt. Tamil H.S.S. Chala, Thiruvananthapuram.

**Pradeepan T.**
H.S.S.T., History, G.H.S.S. Kallachi

**Faizal V.**
H.S.S.T., G.G.H.S.S. Parayanjeri, Kozhikode

**Dr. Babukuttan P.**
Senior Lecturer ,DIET Kollam.

**P.N. Muralidharan Nair**
H.S.S.T., E.N.H.S. Anikkode Kottayam

**Yousaf Kumar S.M.** H.S.S.T., Govt. Model Boys H.S.S., Attinagal, Thiruvananthapuram.

**Vijaya Kumar C.R.**, H.S.S.T. Govt. Boys H.S.S. Mithrumnala

**Shanlal A.B.**, H.S.S.T. Govt. Model Boys, H.S.S. Harippad

**H.A. Salim**, Headmaster, G.U.P.S. Kumaramchira, Shastangkotta.

### EXPERTS

**Dr. Abdul Razak P. P.** Associate Professor, Dept. of History, P.S.M.O. College, Thiroorangadi.

**Dr. Ashok Alex** Associate Professor, Department of Economics, Women's College, Thiruvananthapuram

**I.P. Joseph,** Assistant Professor (Rtd), SCERT

**Dr. N.P. Hafees Mohammed,** Co-ordinator, Department of Sociology, Calicut University.

**Dr. Priyesh M.** Assistant Professor, Dept. of Economics, University College,Thiruvananthapuram.

**Manoj Kumar P.S.,** Assistant Professor, Dept. of History, K.K.T.M. College, Kodungallur, Thrissur.

**Manoj K.V., Research Officer, SCERT.**

### ACADEMIC CO-ORDINATOR

**Chithra Madhavan, Research Officer, SCERT**

### KANNADA VERSION

### PARTICIPANTS

**Shankaranarayana Bhat N,** U.P.S.A., A.U.P.S., Dharmathadka

**Sanjeeva M,** H.S.A. , G.H.S.S. Paivalike

**Raghava** M.N., H.S.A.G.H.S.S., Mogral Puthur

**Narayana D.** Teacher Educator, DIET Kasaragod.

### LANGUAGE EXPERT

**Dr. P. Shrikrishna Bhat ,** Rtd. Professor (Kannada) Govt college, Kasaragod.

### CO-ORDINATOR OF TRANSALATION

**Dr. Faisal Mavulladathil,** Research Officer (Urdu), SCERT, Thiruvananthapuram.

# ಅನುಕ್ರಮಣಿಕೆ


| | |
|---|---|
| 07. ಮಧ್ಯಕಾಲೀನ ಭಾರತ: ಕಲೆ ಮತ್ತು ಸಾಹಿತ್ಯ | 103 |
| 08. ಮಧ್ಯಕಾಲೀನ ಪ್ರಪಂಚ | 119 |
| 09. ಮಧ್ಯಕಾಲೀನ ಕೇರಳ | 131 |
| 10. ಪ್ರಜಾಪ್ರಭುತ್ವ ಮತ್ತು ಹಕ್ಕುಗಳು | 143 |
| 11. ಸಾಮಾಜಿಕ ಜೀವನದ ವೈವಿಧ್ಯ | 157 |
| 12. ಪ್ರಕೃತಿಯ ವರದಾನ | 171 |

## ಕಲಿಕೆಯ ಸೌಲಭ್ಯಕ್ಕಾಗಿ ಕೆಲವು ಚಿಹ್ನೆಗಳನ್ನು ಈ ಪುಸ್ತಕದಲ್ಲಿ ಬಳಸಲಾಗಿದೆ.

 ಹೆಚ್ಚಿನ ಓದಿಗಾಗಿ - ಮೌಲ್ಯನಿರ್ಣಯಕ್ಕೊಳಪಡಿಸಬೇಕಾಗಿಲ್ಲ

 ಕಲಿಕಾ ಸಾಧನೆಗಳನ್ನು ನಿರ್ಣಯಿಸುವ ಪ್ರಶ್ನೆಗಳು

 ಚಟುವಟಿಕೆಗಳು


 ಕ್ರೋಡೀಕರಣ

 ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

 ಮೌಲ್ಯನಿರ್ಣಯ ಮಾಡುವ

 ಮುಂದುವರಿದ ಚಟುವಟಿಕೆಗಳು

 ಸ್ವಮೌಲ್ಯನಿರ್ಣಯ



# 7

# ಮಧ್ಯಕಾಲೀನ ಭಾರತ: ಕಲೆ ಮತ್ತು ಸಾಹಿತ್ಯ



ಕ್ರಿ.ಶ. ಸಾವಿರದ ಇನ್ನೂರ ನಲುವತ್ತಾರರಲ್ಲಿ ಚಂದ್ರಭಾಗ ನದೀಮುಖಜ ಭೂಮಿಯಲ್ಲಿ ವಿಶ್ವವಿಖ್ಯಾತವಾದ ಸೂರ್ಯದೇವಾಲಯಕ್ಕೆ ಅಡಿಪಾಯವನ್ನು ಹಾಕಿದರು. ದೂರದಲ್ಲಿರುವ ಪರ್ವತಗಳಿಂದ ಹಲವು ವಿಧದ ಕಲ್ಲುಗಳನ್ನು ತಂದರು. ನೀಲಗಿರಿಯಿಂದ ದೂರದಲ್ಲಿರುವ ದೇಶೀಯ ರಾಜ್ಯಗಳಿಂದಲೂ ಬಿಳಿ, ಕಪ್ಪು ಹಾಗೂ ನೀಲಿ ಬಣ್ಣದ ಶಿಲೆಗಳನ್ನು ತಂದರು. ದೇವಾಲಯದ ಮೇಲೆ ಗೋಪುರ ಸ್ಥಾಪಿಸಲು ಇಪ್ಪತ್ತೈದು ಅಡಿ ಎತ್ತರ ಹಾಗೂ ಐವತ್ತಾರು ಸಾವಿರ ಮಣ ಭಾರವಿರುವ ಶಿಲೆಗಳನ್ನು ನೂರಾರು ಮೈಲು ದೂರಕ್ಕೆ ಜಲಮಾರ್ಗವಾಗಿ ತಂದು ಇನ್ನೂರು ಅಡಿ ಎತ್ತರದಲ್ಲಿ ಗೋಪುರವನ್ನು ದೇವಾಲಯದ ಮೇಲೆ ಸ್ಥಾಪಿಸಿದರು.... ಸಾವಿರದ ಇನ್ನೂರು ಶಿಲ್ಪಿಗಳು ಸ್ವಂತ ಸುಖಭೋಗಗಳನ್ನೂ ಆಗ್ರಹಗಳನ್ನೂ ತ್ಯಜಿಸಿ “ಕೊನಾರ್ಕದ ಗೋಪುರವನ್ನು ಸ್ಥಾಪಿಸುವ ವರೆಗೆ ಹಿಂತಿರುಗಿ ಹೋಗುವುದಿಲ್ಲ” ಎಂದು ಪ್ರತಿಜ್ಞೆಗೈದರು.. ಅವರು ಹನ್ನೆರಡು ವರ್ಷಗಳ ಕಾಲ ಏಕಾಗ್ರತೆಯಿಂದ ನಿರಂತರವಾಗಿ ಕೆಲಸಮಾಡಿದರು.

ಮೇಲೆ ನೀಡಿರುವುದು ಒಡಿಸ್ಸಾದ ಹೆಸರಾಂತ ಸಾಹಿತಿಯಾದ ಪ್ರತಿಭಾರಾಯ್ ಅವರು 'ಶಿಲಾಪದ್ಮಂ' ಎಂಬ ಕಾದಂಬರಿಯಲ್ಲಿ ಕೊನಾರ್ಕದ ಸೂರ್ಯದೇವಾಲಯದ ನಿರ್ಮಾಣದ ಕುರಿತು ನೀಡಿದ ವಿವರಣೆಯಾಗಿದೆ.

ಇದರಿಂದ ಯಾವೆಲ್ಲ ಮಾಹಿತಿಗಳನ್ನು ಕಂಡುಕೊಳ್ಳಬಹುದು?

- ದೇವಾಲಯದ ನಿರ್ಮಾಣಕ್ಕೆ ಅಗತ್ಯವಾದ ವಿವಿಧ ಬಣ್ಣದ ಶಿಲೆಗಳನ್ನು ಭಾರತದ ವಿವಿಧ ಭಾಗಗಳಿಂದ ತರಲಾಗಿದೆ.
- 
- 

ಮಧ್ಯಕಾಲೀನ ಭಾರತದಲ್ಲಿ ಕೊನಾರ್ಕದ ಸೂರ್ಯದೇವಾಲಯ ಅಲ್ಲದೆ ಇನ್ನೂ ಅನೇಕ ಕಟ್ಟಡಗಳು ಇದ್ದುವು. ಅವುಗಳ ನಿರ್ಮಾಣ ಹಾಗೂ ವಿಶೇಷತೆಗಳ ಕುರಿತು ಒಂದು ಅನ್ವೇಷಣೆ ನಡೆಸೋಣವೆ?

ಪಲ್ಲವರು ದಕ್ಷಿಣ ಭಾರತದಲ್ಲಿ ಕಾಂಚೀಪುರವನ್ನು ಕೇಂದ್ರವಾಗಿರಿಸಿ ಆಡಳಿತ ನಡೆಸಿದ ರಾಜರಾಗಿದ್ದರು. ಮಹಾಬಲಿಪುರವು ಅವರ ಪ್ರಧಾನ ಬಂದರು ನಗರವಾಗಿತ್ತು. ಪಲ್ಲವ ರಾಜನಾದ ನರಸಿಂಹವರ್ಮನ ಕಾಲದಲ್ಲಿ ಅಲ್ಲಿ ನಿರ್ಮಿಸಿದ ದೇವಾಲಯಗಳನ್ನು ಪಂಚರಥಗಳು ಎಂದು ಕರೆಯುತ್ತಾರೆ.



ಮಹಾಬಲಿಪುರದ ಪಂಚರಥಗಳು

ಅವುಗಳು ಪ್ರತಿಯೊಂದೂ ಏಕಶಿಲೆಯಲ್ಲಿ ನಿರ್ಮಿಸಿದವುಗಳಾಗಿವೆ. ಭಾರತದ ಹಲವು ಭಾಗಗಳಲ್ಲಿ ಏಕಶಿಲೆಯಿಂದ ದೇವಾಲಯಗಳನ್ನು ನಿರ್ಮಿಸಿದ್ದರು.

ಮಹಾರಾಷ್ಟ್ರದ ಎಲ್ಲೋರ ಗುಹಾದೇವಾಲಯಗಳು ಇಂತಹವುಗಳಲ್ಲಿ ಒಳಪಡುತ್ತವೆ. ಆರನೇ ಶತಮಾನದಿಂದ ಹನ್ನೆರಡನೇ ಶತಮಾನದ ವರೆಗಿನ ಕಾಲದಲ್ಲಿ ಈ ದೇವಾಲಯಗಳು ನಿರ್ಮಿಸಲ್ಪಟ್ಟವು. ಎಲ್ಲೋರದಲ್ಲಿ ಕಂಡುಬರುವುದು ಬೌದ್ಧ, ಜೈನ,

ವೈಷ್ಣವ, ಶೈವ ಮೊದಲಾದವರ ದೇವಾಲಯಗಳನ್ನು ಒಳಗೊಂಡಿರುವ ಒಂದು ಸಮುಚ್ಚಯವಾಗಿದೆ.



ಎಲ್ಲೋರದ ಗುಹಾದೇವಾಲಯಗಳು

ಏಕಶಿಲಾ ದೇವಾಲಯದ ನಿರ್ಮಾಣ ಕಾಲದ ನಂತರ ನಿರ್ಮಿಸಿದ ದೇವಾಲಯಗಳು ಹೆಚ್ಚು ಎತ್ತರದವುಗಳಾಗಿವೆ. ಇವುಗಳಲ್ಲಿ ಹೆಚ್ಚಿನವುಗಳೂ ಕೆತ್ತಿ ನಯಗೊಳಿಸಿದ ಶಿಲೆಗಳನ್ನು ಪದರುಗಳನ್ನಾಗಿಸಿ ನಿರ್ಮಿಸಿದ ದೇವಾಲಯಗಳಾಗಿವೆ.

ಚೋಳ ರಾಜನಾದ ರಾಜರಾಜನು ತಂಜಾವೂರಿನಲ್ಲಿ ನಿರ್ಮಿಸಿದ ಬೃಹದೀಶ್ವರ ದೇವಾಲಯವು ಇದಕ್ಕೆ ಉದಾಹರಣೆಯಾಗಿದೆ. ಅಸ್ಸಾಂನ ಕಾಮಾಖ್ಯ ದೇವಾಲಯದಂತಹ ಅನೇಕ ದೇವಾಲಯಗಳು ಈ ರೀತಿಯಲ್ಲಿ ನಿರ್ಮಿಸಿದವುಗಳಾಗಿವೆ.



ಅಸ್ಸಾಮಿನ ಕಾಮಾಖ್ಯ ದೇವಾಲಯ



ತಂಜಾವೂರಿನ ಬೃಹದೀಶ್ವರ ದೇವಾಲಯ

ಅನಂತರ ದೇವಾಲಯದ ಗೋಡೆಗಳನ್ನು ಶಿಲ್ಪಗಳಿಂದ ಅಲಂಕರಿಸುವ ಸಂಪ್ರದಾಯವು ವ್ಯಾಪಕವಾಯಿತು. ರಾಮಾಯಣ, ಮಹಾಭಾರತ, ಭಾಗವತ ಎಂಬಿವುಗಳ ಕಥಾ ಸಂದರ್ಭಗಳ ದೃಶ್ಯಗಳನ್ನು ದೇವಾಲಯಗಳ ಗೋಡೆಗಳಲ್ಲಿ ಕೆತ್ತಿಸಿದರು. ಅಲ್ಲದೆ ಯುದ್ಧ, ನೃತ್ಯ-ಸಂಗೀತ ರಂಗಗಳ ಶಿಲ್ಪಗಳೂ ದೇವಾಲಯದ ಗೋಡೆಗಳಲ್ಲಿ ಸ್ಥಾನಪಡೆದುವು.



ಸಂಗೀತ ರಂಗ



ಯುದ್ಧ ರಂಗ



ನೃತ್ಯ ರಂಗ



ಮಧ್ಯಪ್ರದೇಶದ ಖಜುರಾಹೋ ದೇವಾಲಯ


ಮಧ್ಯಪ್ರದೇಶದ ಖಜುರಾಹೋ ದೇವಾಲಯವು ಗೋಡೆಗಳಲ್ಲಿ ಶಿಲ್ಪಗಳಿಂದ ಅಲಂಕರಿಸುವ ರೀತಿಗೆ ಉದಾಹರಣೆಯಾಗಿದೆ.



"ಭಾರತದಲ್ಲಿ ಇಂದು ಕಾಣುವ ದೇವಾಲಯ ನಿರ್ಮಾಣ ರೀತಿಯು ವಿವಿಧ ಕಾಲಗಳಲ್ಲಿ ವಿಕಾಸ ಹೊಂದಿದುದಾಗಿದೆ." ಸಮರ್ಥಿಸಿರಿ.

ಸುಲ್ತಾನರ ಆಡಳಿತ ಕಾಲದಲ್ಲಿ ಭಾರತದಲ್ಲಿ ಒಂದು ಹೊಸ ವಾಸ್ತು ಶೈಲಿಯು ರೂಪುಗೊಂಡಿತು. ಇದನ್ನು ಇಂಡೋ-ಇಸ್ಲಾಮಿಕ್ ವಾಸ್ತುಶೈಲಿ ಎಂದು ಕರೆಯುತ್ತಾರೆ.


ಕಮಾನು


ಗುಮ್ಮಟ


ಮಿನಾರ

ವಾಸ್ತುಕಲೆಯಲ್ಲಿ ನಿಪುಣರಾದವರನ್ನು ತುರ್ಕಿ, ಪರ್ಷಿಯಾ ಮೊದಲಾದ ದೇಶಗಳಿಂದ ಭಾರತಕ್ಕೆ ಕರೆ ತಂದರು. ಅವರೊಂದಿಗೆ ಇಲ್ಲಿನ ಶಿಲ್ಪಿಗಳು, ಕಾರ್ಮಿಕರು, ಕಲ್ಲಿನ ಕೆಲಸಗಾರರು ಮೊದಲಾದವರು ನಿರ್ಮಾಣ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು. ಈ ಎರಡೂ ವಿಭಾಗದವರ ಶೈಲಿಗಳು ಒಟ್ಟು ಸೇರಿ ಇಂಡೋ-ಇಸ್ಲಾಮಿಕ್ ವಾಸ್ತುಶೈಲಿ ರೂಪುಗೊಂಡಿತು. ಈ ವಾಸ್ತುಶೈಲಿಯ ಕೆಲವು ವಿಶೇಷತೆಗಳನ್ನು ಪರಿಶೀಲಿಸೋಣ.

- ಕಮಾನುಗಳು, ಗುಮ್ಮಟಗಳು, ಮಿನಾರಗಳು ಈ ಶೈಲಿಯ ಪ್ರಧಾನ ವಿಶೇಷತೆಗಳಾಗಿದ್ದವು.
- ಕಟ್ಟಡಗಳಲ್ಲಿ ಅಲಂಕಾರಕ್ಕಾಗಿ ಹೂಗಳು ಹಾಗೂ ಸಸ್ಯಗಳ ರೂಪಗಳನ್ನು ಕೆತ್ತಿಡಲಾಯಿತು.
- ಕಟ್ಟಡಗಳ ನಿರ್ಮಾಣಕ್ಕೆ ಕುಮ್ಮಾಯ, ಕೆಂಪುಕಲ್ಲು, ಮಾರ್ಬಲ್ ಮೊದಲಾದವುಗಳನ್ನು ಉಪಯೋಗಿಸಲಾಯಿತು.


ಸಸ್ಯ ಹಾಗೂ ಹೂಗಳ ರೂಪಗಳು


ಕುತುಬ್‌ಮಿನಾರ್

- ಕಟ್ಟಡಗಳಿಗೆ ಹೊಂದಿಕೊಂಡು ವಿಶಾಲವಾದ ಹೂದೋಟಗಳನ್ನು ನಿರ್ಮಿಸಿದರು.

ಕುತುಬ್‌ಮಿನಾರ್ ಈ ವಾಸ್ತುಶೈಲಿಯಲ್ಲಿ ನಿರ್ಮಿಸಿದ ಭಾರತದ ಮೊತ್ತಮೊದಲ ನಿರ್ಮಾಣವಾಗಿದೆ.

ಸುಲ್ತಾನ್‌ಶಾಹಿಯ ಸ್ಥಾಪಕನಾಗಿದ್ದ ಕುತುಬುದ್ದೀನ್ ಐಬಕನು ಕುತುಬ್‌ಮಿನಾರ್‌ನ ನಿರ್ಮಾಣವನ್ನು ಆರಂಭಿಸಿದನು. ಇದನ್ನು ಇಲ್ತುಮಿಷ್ ಪೂರ್ತಿಗೊಳಿಸಿದನು. ಎತ್ತರದ ಗೋಪುರ ಹಾಗೂ ಗೋಪುರಕ್ಕೆ ಹೊಂದಿಕೊಂಡು ಹೊರಕ್ಕೆ ಚಾಚಿರುವ ಬಾಲ್ಕನಿಗಳು ಇದರ ವಿಶೇಷತೆಗಳಾಗಿವೆ.

ಮೊಗಲರ ಕಾಲದಲ್ಲಿ ಇಂಡೋ-ಇಸ್ಲಾಮಿಕ್ ಶೈಲಿ ಹೆಚ್ಚು ಪ್ರಚಾರ ಪಡೆಯಿತು. ಮೊಗಲ ರಾಜರು ಈ ಶೈಲಿಯಲ್ಲಿ ಅನೇಕ ಕೋಟೆ, ಆರಾಧನಾಲಯ, ಸಮಾಧಿ ಇತ್ಯಾದಿಗಳನ್ನು ನಿರ್ಮಿಸಿದರು. ಅವುಗಳಲ್ಲಿ ಕೆಲವನ್ನು ಪರಿಚಯಿಸುವ.

ದೆಹಲಿಯಲ್ಲಿರುವ ಹುಮಾಯೂನನ ಸಮಾಧಿಯು ಈ ಶೈಲಿಯಲ್ಲಿ ನಿರ್ಮಿಸಿದ್ದಾಗಿದೆ. ಸುಂದರವಾದ ಹೂದೋಟದ ಮಧ್ಯದಲ್ಲಿ ಈ ಸಮಾಧಿ ಇದೆ. ಕೆಂಪು ಬಣ್ಣದ ಮರಳುಕಲ್ಲು ಹಾಗೂ ಬೆಣ್ಣೆಕಲ್ಲಿನಿಂದ ಇದನ್ನು ನಿರ್ಮಿಸಲಾಗಿದೆ. ತಾಜ್‌ಮಹಲ್‌ನ ನಿರ್ಮಾಣಕ್ಕೆ ಈ ಸ್ಮಾರಕವನ್ನು ಮಾದರಿಯಾಗಿ ಸ್ವೀಕರಿಸಲಾಯಿತು.


ಹುಮಾಯೂನನ ಸಮಾಧಿ-ದೆಹಲಿ



ತಾಜ್‌ಮಹಲ್

ಮೊಗಲ ಚಕ್ರವರ್ತಿಯಾದ ಷಾಜಹಾನನು ತನ್ನ ಪತ್ನಿ ಮುಮ್ತಾಜ್ ಮಹಲಳ ನೆನಪಿಗಾಗಿ ಆಗ್ರಾದಲ್ಲಿ ನಿರ್ಮಿಸಿದ ತಾಜ್‌ಮಹಲ್ ಇಂಡೋ-ಇಸ್ಲಾಮಿಕ್ ಶೈಲಿಗೆ ಅತ್ಯಂತ ಉತ್ತಮ ಉದಾಹರಣೆಯಾಗಿದೆ. ಇದರ ನಿರ್ಮಾಣಕ್ಕೆ ಬಿಳಿ ಚಂದ್ರಕಾಂತ ಶಿಲೆಯನ್ನು ಉಪಯೋಗಿಸಿದ್ದಾರೆ.



ಕೆಂಪುಕೋಟೆ

ಚಿತ್ರದಲ್ಲಿ ದೆಹಲಿಯ ಕೆಂಪುಕೋಟೆಯನ್ನು ಕಾಣಬಹುದು. ಅದಕ್ಕೆ ಈ ಹೆಸರು ಬರಲು ಕಾರಣವೇನಾಗಿರಬಹುದು?

ಇದು ಮೊಗಲರ ಕಾಲದ ಕೋಟೆಗಳಲ್ಲಿ ಪ್ರಧಾನವಾದುದಾಗಿದೆ. ಇದನ್ನು ಷಾಜಹಾನ್ ಚಕ್ರವರ್ತಿಯ ಕಾಲದಲ್ಲಿ ನಿರ್ಮಿಸಲಾಯಿತು. ಕೆಂಪುಕೋಟೆಯನ್ನು ಪೂರ್ಣವಾಗಿ ಕೆಂಪು ಮರಳುಕಲ್ಲಿನಿಂದ ನಿರ್ಮಿಸಲಾಗಿದೆ.

ದೆಹಲಿಯ ಜುಮ್ಮಾ ಮಸೀದಿಯು ಷಾಜಹಾನ್ ಚಕ್ರವರ್ತಿಯ ಕಾಲದಲ್ಲಿ ಇದೇ ಶೈಲಿಯಲ್ಲಿ ನಿರ್ಮಿಸಿದ ಇನ್ನೊಂದು ನಿರ್ಮಾಣವಾಗಿದೆ. ಮಾರ್ಬಲ್ ಹಾಗೂ ಕೆಂಪುಕಲ್ಲುಗಳನ್ನು ಉಪಯೋಗಿಸಿ ಇದನ್ನು ನಿರ್ಮಿಸಲಾಗಿದೆ.



ಜುಮ್ಮಾ ಮಸೀದಿ - ದೆಹಲಿ

ಬಹಮನಿ ಸುಲ್ತಾನರ ಕಾಲದಲ್ಲಿ ನಿರ್ಮಿಸಿದ ಗೋಲಗುಮ್ಮಟ (ಬಿಜಾಪುರ), ಕುತುಬ್ ಶಾಹಿ ಸುಲ್ತಾನರ ಕಾಲದಲ್ಲಿ ನಿರ್ಮಿಸಿದ ಚಾರ್‌ಮಿನಾರ್ (ಹೈದರಾಬಾದ್) ಎಂಬಿವುಗಳು ಇಂಡೋ-ಇಸ್ಲಾಮಿಕ್ ವಾಸ್ತುಶೈಲಿಗೆ ಉದಾಹರಣೆಗಳಾಗಿವೆ.



ಮಧ್ಯಕಾಲೀನ ಭಾರತದ ಪ್ರಧಾನ ನಿರ್ಮಾಣಗಳ ಕುರಿತು ಮಾಹಿತಿಗಳನ್ನು ಸಂಗ್ರಹಿಸಿ ಕೆಳಗೆ ಕೊಟ್ಟಿರುವ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಚಿತ್ರ | ಹೆಸರು | ವಿಶೇಷತೆಗಳು |
|---|---|---|
|  | ಬೃಹದೀಶ್ವರ ದೇವಾಲಯ | ♦ ತಮಿಳುನಾಡಿನ ತಂಜಾವೂರಿನಲ್ಲಿದೆ.<br>♦ ಚೋಳ ರಾಜನಾದ ರಾಜರಾಜನು ನಿರ್ಮಿಸಿದನು.<br>♦ ಭಾರತದ ಅತ್ಯಂತ ದೊಡ್ಡ ಹಾಗೂ ಎತ್ತರವಾದ ದೇವಾಲಯಗಳಲ್ಲಿ ಒಂದು.<br>♦ ಶಿಲೆಗಳನ್ನು ಕೆತ್ತಿ ನಯಗೊಳಿಸಿ ಒಂದರಮೇಲೊಂದನ್ನಿರಿಸಿ ಬಹುಮಹಡಿಗಳಾಗಿಸಿ ನಿರ್ಮಿಸಲಾಗಿದೆ. |
|  | | ♦<br>♦<br>♦ |
|  | | ♦<br>♦<br>♦ |
|  | | ♦<br>♦<br>♦ |
|  | | ♦<br>♦<br>♦ |

ವಿಠಲಸ್ವಾಮಿ ದೇವಾಲಯ ಹಾಗೂ ಹಜಾರರಾಮ ದೇವಾಲಯಗಳು ಇದೇ ಕಾಲದಲ್ಲಿ ವಿಜಯನಗರ ರಾಜರು ದಕ್ಷಿಣಭಾರತದಲ್ಲಿ ನಿರ್ಮಿಸಿದ ಪ್ರಧಾನ ದೇವಾಲಯಗಳಾಗಿವೆ. ಹಿಂದಿನ ನಿರ್ಮಾಣಗಳಿಗಿಂತ ಇವುಗಳಲ್ಲಿ ಕಾಣುವ ಬದಲಾವಣೆಗಳು ಯಾವುವು?

ಇವುಗಳು ಶಿಲೆಗಳನ್ನು ಕೆತ್ತಿ ನಯಗೊಳಿಸಿ ಒಂದರಮೇಲೊಂದನ್ನಿಟ್ಟು ಬಹುಮಹಡಿಗಳಲ್ಲಿ ನಿರ್ಮಿಸಿದವುಗಳಾಗಿವೆ. ಇದರೊಂದಿಗೆ



ವಿಠಲ ಸ್ವಾಮಿ ದೇವಸ್ಥಾನ

- ದೇವಾಲಯಗಳಿಗೆ ಹೊಂದಿಕೊಂಡು ಮಂಟಪಗಳನ್ನು ನಿರ್ಮಿಸಿದರು.
- ಕುಸುರಿ ಕೆಲಸಗಳಿರುವ ಸ್ತಂಭಗಳನ್ನು ನಿರ್ಮಿಸಿದರು.
- ಸಣ್ಣ ಮಂದಿರಗಳನ್ನು ಸೇರಿಸಿ ದೇವಾಲಯಗಳನ್ನು ವಿಸ್ತರಿಸಿದರು.

ಹದಿನಾರನೇ ಶತಮಾನದಲ್ಲಿ ಪೋರ್ಚುಗೀಸರು ಭಾರತದಲ್ಲಿ ಒಂದು ಹೊಸ ವಾಸ್ತುಶೈಲಿಯನ್ನು ಪರಿಚಯಿಸಿದರು. ಇದನ್ನು ಗೋಥಿಕ್‌ಶೈಲಿ ಎಂದು ಕರೆಯುತ್ತಾರೆ. ಚೂಪಾದ ಗೋಪುರಗಳೂ ಕಮಾನುಗಳೂ ಇದರ ವಿಶೇಷತೆಗಳಾಗಿವೆ. ಕೊಚ್ಚಿಯ ಸೈಂಟ್ ಫ್ರಾನ್ಸಿಸ್ ಚರ್ಚ್ ಹಾಗೂ ಗೋವಾದ ಬೋಂಜೀಸಸ್ ಇಗರ್ಜಿ ಇದಕ್ಕೆ ಉದಾಹರಣೆಗಳಾಗಿವೆ.

ಮೇಲೆ ಚರ್ಚಿಸಿದ ವಾಸ್ತುಶೈಲಿಯಲ್ಲಿರುವ ನಿರ್ಮಾಣಗಳು ಭಾರತದ ಸಾಂಸ್ಕೃತಿಕ ಸಂಪನ್ನತೆ ಹಾಗೂ ವೈವಿಧ್ಯದ ಪ್ರತೀಕವಾಗಿವೆ.



ಕೊಚ್ಚಿಯ ಸೈಂಟ್‌ಫ್ರಾನ್ಸಿಸ್ ಇಗರ್ಜಿ

ಇಂಡೋ-ಇಸ್ಲಾಮಿಕ್ ವಾಸ್ತುಶೈಲಿಯಲ್ಲಿ ನಿರ್ಮಿಸಿದ ನಿರ್ಮಾಣಗಳ ಸಾಮಾನ್ಯ ವಿಶೇಷತೆಗಳನ್ನು ಕಂಡುಕೊಂಡು ಬರೆಯಿರಿ.

## ಸಂಗೀತ ಮತ್ತು ಚಿತ್ರಕಲೆ

ಮಧ್ಯಕಾಲೀನ ಭಾರತದಲ್ಲಿ ಸಂಗೀತ ಕ್ಷೇತ್ರವೂ ಅಭಿವೃದ್ಧಿಗೊಂಡಿತು. ಈ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಕರ್ನಾಟಕ ಸಂಗೀತವು ಹೆಚ್ಚು ವಿಕಾಸಹೊಂದಿತು.

ಪುರಂದರದಾಸರು ಕರ್ನಾಟಕ ಸಂಗೀತದಲ್ಲಿ ಶ್ರೇಷ್ಠರಾಗಿದ್ದರು. ಸುಲ್ತಾನ್‌ಶಾಹಿ ಹಾಗೂ ಮೊಗಲರ ಕಾಲದಲ್ಲಿ ಪರ್ಷಿಯನ್ ಸಂಗೀತದ ಪ್ರಭಾವದಿಂದಾಗಿ ಹೊಸ ಸಂಗೀತಶೈಲಿಯು ರೂಪುಗೊಂಡಿತು. ಇದನ್ನು ಹಿಂದುಸ್ಥಾನಿ ಸಂಗೀತ ಎಂದು ಕರೆಯುತ್ತಾರೆ. ಅಮೀರ್‌ಖುಸ್ರು, ತಾನ್‌ಸೇನ್ ಮೊದಲಾದವರು ಆ ಕಾಲದ ಹೆಸರಾಂತ ಸಂಗೀತಗಾರರಾಗಿದ್ದರು. ಖವ್ವಾಲಿ ಎಂಬ ಹೊಸ ಸಂಗೀತ ರೂಪವು ಈ ಕಾಲದಲ್ಲಿ ರೂಪುಗೊಂಡಿತು. ಖವ್ವಾಲಿಯ ಬೆಳವಣಿಗೆಯಲ್ಲಿ ಅಮೀರ್‌ಖುಸ್ರು ಪ್ರಧಾನ ಪಾತ್ರ ವಹಿಸಿದನು. ಹಲವು ಹೊಸ ಸಂಗೀತೋಪಕರಣಗಳು ಈ ಕಾಲದಲ್ಲಿ ರೂಪುಗೊಂಡವು. ತಬಲ, ಸಿತಾರ್ ಎಂಬಿವುಗಳು ಇದಕ್ಕೆ ಉದಾಹರಣೆಗಳಾಗಿವೆ.


ಸಿತಾರ್


ತಬಲ


ಸಂಗೀತದಂತೆಯೇ ಚಿತ್ರಕಲೆಯಲ್ಲೂ ಮಧ್ಯಕಾಲದಲ್ಲಿ ಗಮನಾರ್ಹವಾದ ಬದಲಾವಣೆಗಳು ಉಂಟಾದುವು.

ಚಿತ್ರಗಳನ್ನು ಗಮನಿಸಿರಿ.



**ಖವ್ವಾಲಿ**

ಖವ್ವಾಲಿಯು ಸೂಫಿ ಸಂತರು ವಾಸಿಸುತ್ತಿದ್ದ ಖಾನ್‌ಕಗಳಲ್ಲಿ ರೂಪುಗೊಂಡ ಒಂದು ಸಂಗೀತ ರೂಪವಾಗಿದೆ. ಉರ್ದು ಭಾಷೆಯಲ್ಲಿ ರಚಿಸಲ್ಪಟ್ಟ ಭಕ್ತಿಗೀತೆಗಳನ್ನು ವಾದ್ಯೋಪಕರಣಗಳೊಂದಿಗೆ ತಾಳಬದ್ಧವಾಗಿ ಹಾಡುವುದು ಇದರ ವಿಶೇಷತೆಯಾಗಿದೆ.


ಮೊಗಲರ ಚಿತ್ರಕಲೆ- ಬೈಬಲ್‌ನ ಸಂದರ್ಭ


ಮೊಗಲರ ಚಿತ್ರಕಲೆ- ಅರಮನೆಯ ದೃಶ್ಯಗಳು


ಮೊಗಲರ ಚಿತ್ರಕಲೆ- ರಾಮಾಯಣದ ಸಂದರ್ಭಗಳು


ಮೊಗಲರ ಚಿತ್ರಕಲೆ- ಪ್ರಕೃತಿ ದೃಶ್ಯಗಳು

ಆ ಕಾಲದಲ್ಲಿ ಚಿತ್ರರಚನೆಗೆ ಸ್ವೀಕರಿಸಿದ ಆಶಯಗಳು ಯಾವುವು?

ರಾಮಾಯಣ, ಬೈಬಲ್, ಅರಮನೆಯ ಜೀವನ, ಪ್ರಕೃತಿ ದೃಶ್ಯಗಳು ಮೊದಲಾದುವುಗಳು ಚಿತ್ರಗಳ ಆಶಯಗಳಾಗಿದ್ದುವು.

## ಸಾಹಿತ್ಯ

ಮಧ್ಯಕಾಲೀನ ಭಾರತದಲ್ಲಿ ವಾಸ್ತುವಿದ್ಯೆ, ಸಂಗೀತ, ಚಿತ್ರಕಲೆ ಎಂಬೀ ಕ್ಷೇತ್ರಗಳಲ್ಲಿ ಉಂಟಾದ ಪ್ರಗತಿಯಂತೆಯೇ ಸಾಹಿತ್ಯ ಕ್ಷೇತ್ರದಲ್ಲೂ ಪ್ರಗತಿ ಉಂಟಾಯಿತು.

ಮಧ್ಯಕಾಲದಲ್ಲಿ ಭಾರತದಲ್ಲಿ ರೂಪುಗೊಂಡ ಭಕ್ತಿ ಚಳುವಳಿ ಹಾಗೂ ಸೂಫಿ ಚಳುವಳಿಗಳು ಆ ಕಾಲದ ಸಾಹಿತ್ಯ ಪ್ರಗತಿಯಲ್ಲಿ ನಿರ್ಣಾಯಕ ಪಾತ್ರ ವಹಿಸಿದುವು.

ಭಕ್ತಿ ಚಳುವಳಿಯ ಆಗಮನವು ವಿವಿಧ ಪ್ರಾದೇಶಿಕ ಭಾಷೆಗಳನ್ನು ಎಚ್ಚೆತ್ತುಕೊಳ್ಳುವಂತೆ ಮಾಡಿತು. ಭಕ್ತಿ ಚಳುವಳಿಯ ಕವಿಗಳೆಲ್ಲರೂ ಜನಸಾಮಾನ್ಯರ ಭಾಷೆಯಲ್ಲಿ ಕವಿತೆಗಳನ್ನು ರಚಿಸಿದರು. ಇದು ಪ್ರಾದೇಶಿಕ ಭಾಷೆಗಳ ಬೆಳವಣಿಗೆಗೆ ಸಹಾಯಕವಾಯಿತು.

ಕೆಳಗಿನವುಗಳು ಈ ರೀತಿಯಲ್ಲಿ ಬೆಳೆದು ಬಂದ ಭಾಷೆಗಳಾಗಿವೆ.

- ಮಲಯಾಳ
- ತೆಲುಗು
- ಕನ್ನಡ
- ಮರಾಠಿ
- ಹಿಂದಿ
- ಬಂಗಾಳಿ
- ಗುಜರಾತಿ

### ಭಕ್ತಿ ಚಳುವಳಿ

ಭಕ್ತಿ ಚಳುವಳಿಯು ದೇವರಲ್ಲಿರುವ ಪ್ರೀತಿ ಹಾಗೂ ಭಕ್ತಿಯ ಆಧಾರದಲ್ಲಿ ದಕ್ಷಿಣ ಭಾರತದಲ್ಲಿ ರೂಪುಗೊಂಡಿತು. ದಕ್ಷಿಣ ಭಾರತದಲ್ಲಿ ಭಕ್ತಿ ಚಳುವಳಿಗೆ ನಾಯನ್ಮಾರರು, ಆಳ್ವಾರರು ಎಂಬ ಎರಡು ವಿಭಾಗಗಳಿದ್ದುವು. ನಾಯನ್ಮಾರರು ಶಿವಭಕ್ತರೂ ಆಳ್ವಾರರು ವಿಷ್ಣುಭಕ್ತರೂ ಆಗಿದ್ದರು. ಹದಿನಾಲ್ಕನೇ ಶತಮಾನದಲ್ಲಿ ಈ ಆಶಯವು ಉತ್ತರ ಭಾರತಕ್ಕೂ ವ್ಯಾಪಿಸಿತು. ಗುರುನಾನಕ್, ಕಬೀರ್‌ದಾಸ್, ತುಳಸೀದಾಸ್, ಸೂರ್‌ದಾಸ್, ತುಕಾರಾಂ, ಮೀರಾಬಾಯಿ, ಚೈತನ್ಯ ಮೊದಲಾದವರು ಉತ್ತರಭಾರತದಲ್ಲಿ ಭಕ್ತಿಚಳುವಳಿಯ ಪ್ರಧಾನ ಪ್ರಚಾರಕರಾಗಿದ್ದರು.

### ಸೂಫಿ ಚಳುವಳಿ

ಸೂಫಿ ಚಳುವಳಿಯು ಮಧ್ಯಕಾಲದಲ್ಲಿ ರೂಪುಗೊಂಡಿತು. ಸೂಫಿಗಳು ಮುಸಲ್ಮಾನರುಗಳಲ್ಲಿ ಆಡಂಬರ ಜೀವನವನ್ನು ವಿರೋಧಿಸುವವರೂ ಆಧ್ಯಾತ್ಮಿಕ ಜೀವನಕ್ಕೆ ಪ್ರಾಧಾನ್ಯವನ್ನು ನೀಡುವವರೂ ಆಗಿದ್ದರು. ಸೂಫ್ ಎಂಬ ಅರಬ್ ಪದದಿಂದ ಸೂಫಿಸಂ ಎಂಬ ಪದ ಉಂಟಾಯಿತು. ಖ್ವಾಜಾ ಮೊಯಿನುದ್ದೀನ್ ಚಿಸ್ತಿ, ನಿಜಾಮುದ್ದೀನ್ ಔಲಿಯ ಮೊದಲಾದವರು ಆ ಕಾಲದ ಸೂಫಿ ಚಳುವಳಿಯ ಪ್ರಚಾರಕರಾಗಿದ್ದರು.

ಈ ಕಾಲದ ಕೆಲವು ಪ್ರಧಾನ ಪ್ರಾದೇಶಿಕ ಭಾಷೆಗಳಲ್ಲಿ ರಚನೆಯಾದ ಸಾಹಿತ್ಯಕೃತಿಗಳು ಹಾಗೂ ಅವುಗಳ ರಚನೆಗಾರರ ಹೆಸರುಗಳನ್ನು ಕೆಳಗೆ ಕೊಡಲಾಗಿದೆ.

**ಪ್ರಾದೇಶಿಕ ಭಾಷೆಗಳು ಮತ್ತು ಕೃತಿಗಳು**

- **ಮಲಯಾಳ** – ಆಧ್ಯಾತ್ಮ ರಾಮಾಯಣ- ಎಳುತ್ತಚ್ಛನ್
- **ತಮಿಳು** – ಇರಾಮವತಾರಂ (ಕಂಬರಾಮಾಯಣಂ) - ಕಂಬರ್
- **ಹಿಂದಿ** – ರಾಮಚರಿತಮಾನಸ - ತುಳಸೀದಾಸ
- **ತೆಲುಗು** – ಮಹಾಭಾರತ - ನನ್ನಯ್ಯ
- **ಕನ್ನಡ** – ವಿಕ್ರಮಾರ್ಜುನ ವಿಜಯ (ಪಂಪಭಾರತ) -ಪಂಪ
- **ಒಡಿಯಾ** – ಒಡಿಯ ಮಹಾಭಾರತ - ಸರಳದಾಸ
- **ಮರಾಠಿ** – ಮರಾಠಿ ಭಾಗವತ - ಏಕನಾಥ
- **ಗುಜರಾತಿ** – ಗುಜರಾತಿ ಭಾಗವತ - ಪ್ರೇಮಾನಂದ
- **ಬಂಗಾಳಿ** – ಬಂಗಾಳಿ ರಾಮಾಯಣ - ಕೃತಿವಾಸ




ಪ್ರಾದೇಶಿಕ ಭಾಷೆಗಳಲ್ಲಿ ರಚಿಸಲ್ಪಟ್ಟ ಕೃತಿಗಳ ಕುರಿತೂ ಸಾಹಿತಿಗಳ ಕುರಿತೂ ಮಾಹಿತಿಗಳನ್ನು ಚಿತ್ರದಿಂದ ಸಂಗ್ರಹಿಸಿ ಪಟ್ಟಿ ಪೂರ್ತಿಗೊಳಿಸಿರಿ.

| ಪ್ರಾದೇಶಿಕ ಭಾಷೆಗಳು | ಕೃತಿಗಳು | ಸಾಹಿತಿಗಳು |
|---|---|---|
| | | |

ಸೂಫಿ ಚಳುವಳಿಯು ಉರ್ದು ಭಾಷೆಯ ಬೆಳವಣಿಗೆಯಲ್ಲಿ ಪ್ರಧಾನ ಪಾತ್ರ ವಹಿಸಿತು. ಅರಬಿ, ಪರ್ಷಿಯನ್ ಎಂಬೀ ಭಾಷೆಗಳೂ ಭಾರತೀಯ ಭಾಷೆಗಳಾದ ಖಾರಿಬೋಲಿ, ಬ್ರಜ್ ಮೊದಲಾದವುಗಳು ಸೇರಿ ಉರ್ದು ಭಾಷೆ ರೂಪುಗೊಂಡಿತು.

ಮಧ್ಯಕಾಲದಲ್ಲಿ ಅನೇಕ ಕೃತಿಗಳನ್ನು ಪರ್ಷಿಯನ್ ಭಾಷೆಗೆ ಭಾಷಾಂತರಗೊಳಿಸಿದರು. ಮೊಗಲ ಚಕ್ರವರ್ತಿಯಾಗಿದ್ದ ಅಕ್ಬರನ ಕಾಲದಲ್ಲಿ ಭಾಷಾಂತರಕ್ಕಾಗಿ ಒಂದು ಇಲಾಖೆಯು ಕಾರ್ಯವೆಸಗುತ್ತಿತ್ತು. ಆ ಕಾಲದಲ್ಲಿ ರಾಮಾಯಣ, ಮಹಾಭಾರತ ಸಹಿತ ಅನೇಕ ಸಂಸ್ಕೃತ ಕೃತಿಗಳನ್ನು ಪರ್ಷಿಯನ್ ಭಾಷೆಗೆ ಭಾಷಾಂತರಗೊಳಿಸಿದರು. ಷಾಜಹಾನ್ ಚಕ್ರವರ್ತಿಯ ಮಗನಾಗಿದ್ದ ದಾರಾಷುಕೋ ಉಪನಿಷತ್ತು ಮತ್ತು ಅಥರ್ವವೇದಗಳನ್ನು ಪರ್ಷಿಯನ್ ಭಾಷೆಗೆ ಭಾಷಾಂತರಗೊಳಿಸಿದನು. ಭಾರತದ ವಿಜ್ಞಾನ ಮತ್ತು ಸಂಸ್ಕೃತಿಯು ವಿದೇಶಗಳಿಗೆ ವ್ಯಾಪಿಸುವುದರಲ್ಲಿ ಭಾಷಾಂತರಗಳಿಗೆ ಪ್ರಧಾನ ಪಾತ್ರವಿದೆ. ಇದು ವಿದೇಶಗಳೊಳಗೆ ಸಾಂಸ್ಕೃತಿಕ ಸಮನ್ವಯ ರೂಪುಗೊಳ್ಳಲು ದಾರಿಮಾಡಿಕೊಟ್ಟಿತು.




## ಕ್ರೋಡೀಕರಣ

- ಭಾರತದ ವಾಸ್ತುಶೈಲಿಯು ವಿವಿಧ ಕಾಲಗಳಲ್ಲಿ ವಿಕಾಸಹೊಂದಿದುದಾಗಿದೆ.
- ಮಧ್ಯಕಾಲದ ನಿರ್ಮಾಣಗಳಲ್ಲಿ ವಿವಿಧ ವಾಸ್ತುಶೈಲಿಗಳ ಪ್ರಭಾವವನ್ನು ಕಾಣಬಹುದು.
- ಭಾರತದ ವಾಸ್ತುಕಲೆ, ಸಂಗೀತ, ಚಿತ್ರಕಲೆ ಮೊದಲಾದುವುಗಳು ವಿವಿಧ ಹಂತಗಳಲ್ಲಿ ವಿವಿಧ ಶೈಲಿಗಳ ಸಮ್ಮಿಲನದ ಮೂಲಕ ಬೆಳೆದು ಬಂದವುಗಳಾಗಿವೆ.
- ಭಕ್ತಿ, ಸೂಫಿ ಚಳುವಳಿಗಳು ಭಾರತದಲ್ಲಿ ಸಾಹಿತ್ಯದ ಪ್ರಗತಿ ಹಾಗೂ ಪ್ರಾದೇಶಿಕ ಭಾಷೆಗಳ ಬೆಳವಣಿಗೆಗೆ ಕಾರಣವಾಯಿತು.

## ಪ್ರಧಾನ ಕಲಿಕಾಸಾಧನೆಗಳಲ್ಲಿ ಒಳಪಡುವವುಗಳು

- ಮಧ್ಯಕಾಲೀನ ಭಾರತದ ವಾಸ್ತುಶೈಲಿಗಳ ವಿಶೇಷತೆಗಳನ್ನು ವಿಶದೀಕರಿಸುವುದು.
- ಇಂಡೋ-ಇಸ್ಲಾಮಿಕ್ ವಾಸ್ತುಶೈಲಿಯ ವಿಶೇಷತೆಗಳನ್ನು ವಿಶ್ಲೇಷಿಸುವುದು.
- ಮಧ್ಯಕಾಲೀನ ಭಾರತದಲ್ಲಿ ಸಂಗೀತ ಹಾಗೂ ಚಿತ್ರಕಲೆಯಲ್ಲಿ ಉಂಟಾದ ಬದಲಾವಣೆಗಳನ್ನು ವಿಶ್ಲೇಷಿಸುವುದು.

- ಮಧ್ಯಕಾಲೀನ ಭಾರತದ ಪ್ರಾದೇಶಿಕ ಭಾಷೆಗಳು ಹಾಗೂ ಸಾಹಿತ್ಯದ ಬೆಳವಣಿಗೆಯಲ್ಲಿ ಭಕ್ತಿ-ಸೂಫಿ ಚಳುವಳಿಗಳ ಪಾತ್ರವನ್ನು ಅವಲೋಕಿಸುವುದು.

## ಮೌಲ್ಯನಿರ್ಣಯ ಮಾಡುವ

- ಇಂಡೋ-ಇಸ್ಲಾಮಿಕ್ ವಾಸ್ತುಶೈಲಿಯ ವಿಶೇಷತೆಗಳನ್ನು ಕಂಡುಹಿಡಿಯಿರಿ.
- ಮಧ್ಯಕಾಲದ ಕೆಲವು ನಿರ್ಮಾಣಗಳು ಹಾಗೂ ಅವುಗಳನ್ನು ನಿರ್ಮಿಸಿದ ಆಡಳಿತ ಕಾಲವನ್ನೊಳಗೊಂಡ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ನಿರ್ಮಾಣಗಳು | ಕಾಲ |
|---|---|
| ಬೃಹದೀಶ್ವರ ದೇವಾಲಯ | ಚೋಳರ ಆಡಳಿತ ಕಾಲ |
| ಕುತುಬ್ ಮಿನಾರ್ | ................ |
| ಹುಮಾಯೂನನ ಸಮಾಧಿ | ................. |
| ತಾಜ್ ಮಹಲ್ | ................. |
| ಕೆಂಪುಕೋಟೆ | ................. |

## ಮುಂದುವರಿದ ಚಟುವಟಿಕೆಗಳು

- ಭಾರತದ ವಿವಿಧ ನಿರ್ಮಾಣಗಳ ಹಿಂದಿರುವ ಚಾರಿತ್ರಿಕವೂ ಸ್ವಾರಸ್ಯಕರವೂ ಆದ ವಿಷಯಗಳನ್ನು ಸಂಗ್ರಹಿಸಿರಿ.
- ಭಕ್ತಿ-ಸೂಫಿ ಚಳುವಳಿಯ ಪ್ರಧಾನ ನಾಯಕರ ಚಿತ್ರಗಳನ್ನು ಸಂಗ್ರಹಿಸಿ ಟಿಪ್ಪಣಿಯಿಂದೊಡಗೂಡಿದ ಆಲ್ಬಂ ತಯಾರಿಸಿರಿ.
- ಭಕ್ತಿ ಚಳುವಳಿಯ ಚಟುವಟಿಕೆಗಳಿಗೆ ನೇತೃತ್ವ ನೀಡಿದವರು ಹಾಗೂ ಅವರ ಚಟುವಟಿಕಾ ವಲಯಗಳನ್ನೊಳಗೊಂಡ ಇಂದಿನ ರಾಜ್ಯಗಳ ಪಟ್ಟಿ ತಯಾರಿಸಿರಿ.
- ಮೊಗಲರ ಚಿತ್ರಕಲೆಗೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸಿ ಭಿತ್ತಿಪತ್ರಿಕೆ ತಯಾರಿಸಿರಿ.

## ಸ್ವಮೌಲ್ಯನಿರ್ಣಯ

| | ಪೂರ್ಣವಾಗಿ | ಭಾಗಿಕವಾಗಿ | ಉತ್ತಮಪಡಿಸಬೇಕು |
|---|---|---|---|
| ಭಾರತದ ವಾಸ್ತುಶೈಲಿಯು ವಿವಿಧ ಕಾಲಗಳಲ್ಲಿ ಬೆಳವಣಿಗೆ ಹೊಂದಿದುದರ ಫಲವಾಗಿ ರೂಪುಗೊಂಡಿದೆ ಎಂಬುದನ್ನು ಕಂಡುಕೊಳ್ಳಲು ಸಾಧ್ಯವಿದೆ. | | | |
| ಇಂಡೋ-ಇಸ್ಲಾಮಿಕ್ ವಾಸ್ತುಶೈಲಿಯ ವಿಶೇಷತೆಗಳನ್ನು ವಿವರಿಸಲು ಸಾಧ್ಯವಿದೆ. | | | |
| ಮಧ್ಯಕಾಲೀನ ಭಾರತದ ವಾಸ್ತುಕಲೆ, ಚಿತ್ರಕಲೆ, ಸಂಗೀತ ಎಂಬೀ ಕ್ಷೇತ್ರಗಳ ಪ್ರಗತಿಯ ಕುರಿತು ಅವಲೋಕಿಸಲು ಸಾಧ್ಯವಿದೆ. | | | |
| ಮಧ್ಯಕಾಲೀನ ಭಾರತದ ನಿರ್ಮಾಣಗಳು ಭಾರತದ ಸಂಸ್ಕೃತಿಯ ಕುರುಹುಗಳಾಗಿವೆ ಎಂಬುದನ್ನು ತಿಳಿಯಲು ಸಾಧ್ಯವಿದೆ. | | | |
| ಭಕ್ತಿ – ಸೂಫಿ ಚಳುವಳಿಗಳು ಭಾರತದ ಸಾಂಸ್ಕೃತಿಕ ಕ್ಷೇತ್ರದ ಮೇಲೆ ಬೀರಿದ ಪ್ರಭಾವವನ್ನು ವಿಶ್ಲೇಷಿಸಲು ಸಾಧ್ಯವಿದೆ. | | | |

8



# ಮಧ್ಯಕಾಲೀನ ಪ್ರಪಂಚ

*ಸಿ.ಇ. ಐದನೇ ಶತಮಾನ. ಯುರೋಪಿನ ಜನರು ಪ್ರತಿದಿನವನ್ನೂ ಭಯದಿಂದಲೇ ಕಳೆಯುತ್ತಿದ್ದರು. ಉತ್ತರ ಯುರೋಪಿನ ಜರ್ಮಾನಿಕ್ ವರ್ಗದವರ ನಿರಂತರ ಆಕ್ರಮಣಗಳು ಅವರ ಭಯಕ್ಕೆ ಕಾರಣವಾಗಿತ್ತು. ದಂಡೆತ್ತಿ ಬಂದ ಆಕ್ರಮಣಕಾರಿಗಳು ನಗರಗಳನ್ನು ಕೊಳ್ಳೆಹೊಡೆದರು ಹಾಗೂ ಜನರನ್ನು ಸಾಮೂಹಿಕವಾಗಿ ಕಗ್ಗೊಲೆ ಮಾಡಿದರು. ಜನರು ರಾಜರೊಂದಿಗೆ ತಮ್ಮ ಸಂಕಷ್ಟಗಳನ್ನು ತೋಡಿಕೊಂಡರೂ ಅವರು ಅಸಹಾಯಕರಾಗಿದ್ದರು.*


*ಕೊನೆಗೆ ರಾಜರು ಒಂದು ದಾರಿಯನ್ನು ಕಂಡುಕೊಂಡರು. ಜನರ ಜೀವ ಮತ್ತು ಸೊತ್ತುಗಳಿಗೆ ಸಂರಕ್ಷಣೆ ನೀಡುವವರಿಗೆ ದೇಶದ ಭೂಮಿಯನ್ನು ಹಂಚಿಕೊಡುವುದಾಗಿ ಘೋಷಿಸಿದರು. ಧೀರರೂ ಸಮರವೀರರೂ ಆದ ಅನೇಕ ಪ್ರಭುಗಳು ಜನರ ಸಂರಕ್ಷಕರಾಗಿ ಮುಂದೆ ಬಂದರು. ಅವರು ತಮಗೆ ಪ್ರತಿಫಲವಾಗಿ ಲಭಿಸಿದ ಭೂಮಿಯನ್ನು ಬೆಂಬಲಿಗರಿಗೂ ಸೇವೆ ಮಾಡಲು ತಯಾರಾದವರಿಗೂ ಹಂಚಿದರು.*

*ಹೀಗೆ ಭೂಮಿ ಲಭಿಸಿದವರು ಇದೇ ವ್ಯವಸ್ಥೆಯಲ್ಲಿ ಇನ್ನೂ ಅನೇಕರಿಗೆ ತಮ್ಮ ಭೂಮಿಯನ್ನು ಹಂಚಿದರು. ಈ ರೀತಿಯಲ್ಲಿ ಹಂಚಿದ ಭೂಮಿಯಲ್ಲಿ ಕೃಷಿಕರಿಂದ ಹಗಲಿರುಳೆನ್ನದೆ ಕೆಲಸ ಮಾಡಿಸಿದರು. ಕೃಷಿಕರ ಜೀವನವು ಗುಲಾಮರ ಬದುಕಿಗೆ ಸಮಾನವಾಗಿತ್ತು.*

ಮೇಲೆ ನೀಡಿರುವುದು ಸಿ.ಇ. ಐದನೇ ಶತಮಾನದಿಂದ ಹದಿನೈದನೇ ಶತಮಾನದ ವರೆಗಿನ ಯುರೋಪಿನ ಚರಿತ್ರೆಗೆ ಸಂಬಂಧಿಸಿದ ಕೆಲವು ಸೂಚನೆಗಳನ್ನು ನೀಡುವ ವಿವರಣೆಯಾಗಿದೆ. ಈ ಕಾಲವನ್ನು ಪ್ರಪಂಚದ ಚರಿತ್ರೆಯಲ್ಲಿ ಮಧ್ಯಕಾಲ ಎಂದು ಕರೆಯುತ್ತಾರೆ. ಹಿಂದಿನ ಅಧ್ಯಾಯದಲ್ಲಿ ಮಧ್ಯಕಾಲೀನ ಭಾರತದ ಚರಿತ್ರೆಯನ್ನು ಚರ್ಚಿಸಿದ್ದೇವಲ್ಲವೆ. ಮೇಲಿನ ವಿವರಣೆಯಿಂದ ಮಧ್ಯಕಾಲೀನ ಯುರೋಪಿನ ಕುರಿತು ಯಾವೆಲ್ಲ ಮಾಹಿತಿಗಳನ್ನು ತಿಳಿದುಕೊಳ್ಳಬಹುದು?

- ಯುರೋಪಿನ ಜನರು ನಿರಂತರವಾಗಿ ಆಕ್ರಮಣಗಳನ್ನು ಎದುರಿಸಿದ್ದರು.
- ಆಕ್ರಮಣಗಳನ್ನು ಎದುರಿಸಲು ಮುಂದೆ ಬಂದ ಪ್ರಭುಗಳಿಗೆ ರಾಜರು ಭೂಮಿಯನ್ನು ಹಂಚಿ ನೀಡಿದ್ದರು.

ಕೆಳಗೆ ನೀಡಿರುವ ಡಯಾಗ್ರಾಂನಿಂದ ಮಧ್ಯಕಾಲೀನ ಯುರೋಪಿನ ಸಮಾಜದ ವಿವಿಧ ವಿಭಾಗಗಳನ್ನು ಪರಿಚಯಿಸೋಣ




ಈ ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯಂತ ಉನ್ನತ ಸ್ಥಾನವು ರಾಜನಿಗೆ ಇತ್ತು. ರಾಜರು ದೇಶದ ಸಮಗ್ರ ಭೂಮಿಯ ಒಡೆಯರಾಗಿದ್ದರು. ರಾಜರು ಭೂಮಿಯನ್ನು ಪ್ರಭುಗಳಿಗೆ ಹಂಚಿದರು. ಇದಕ್ಕೆ ಬದಲಾಗಿ ಪ್ರಭುಗಳು ರಾಜರಿಗೆ ಸೈನಿಕ ಸೇವೆಯನ್ನು ನೀಡಿದರು. ಪ್ರತಿಯೊಬ್ಬ ಪ್ರಭುವೂ ತನಗೆ ಲಭಿಸಿದ ಭೂಮಿಯ ಒಂದು ಭಾಗವನ್ನು ಮಧ್ಯಮ

ಪ್ರಭುಗಳು ಎಂಬ ಇನ್ನೊಂದು ವಿಭಾಗಕ್ಕೆ ನೀಡಿದರು. ಬದಲಾಗಿ ಪ್ರಭುಗಳು ಅವರಿಂದ ಸೇವೆಗಳನ್ನು ಪಡೆದರು. ಈ ರೀತಿಯಲ್ಲಿ ಭೂಮಿಯ ಒಡೆತನದ ಹಕ್ಕಿನ ಆಧಾರದಲ್ಲಿ ಮಧ್ಯಕಾಲೀನ ಯುರೋಪಿನಲ್ಲಿ ರೂಪುಗೊಂಡ ಸಾಮಾಜಿಕ ವ್ಯವಸ್ಥೆಯನ್ನು ಫ್ಯೂಡಲಿಸಂ ಎಂದು ಕರೆಯುತ್ತಾರೆ.

ಫ್ಯೂಡಲ್ ಸಮಾಜದ ಅತ್ಯಂತ ಕೆಳಸ್ತರದಲ್ಲಿದ್ದವರು ಕೃಷಿಕರಾಗಿದ್ದರು. ಸಮಾಜದಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿದ್ದವರು ಅವರೇ ಆಗಿದ್ದರು. ಪ್ರಭುಗಳ ಕೃಷಿ ಸ್ಥಳಗಳಲ್ಲೂ ಮನೆಗಳಲ್ಲೂ ಕೆಲಸಮಾಡಲು ಇವರು ನಿರ್ಬಂಧಿತರಾಗಿದ್ದರು.

ಪ್ರಭುಗಳ ವಶದಲ್ಲಿದ್ದ ವಿಶಾಲವಾದ ಪ್ರದೇಶಗಳನ್ನು 'ಮೇನರುಗಳು' (Manor) ಎಂದು ಕರೆಯುತ್ತಿದ್ದರು. ಪ್ರತಿಯೊಂದು ಮೇನರಿನಲ್ಲೂ ಕೃಷಿ ಭೂಮಿಯ ಹೊರತಾಗಿ ಮೇವಿನ ಸ್ಥಳ, ಪ್ರಭುವಿನ ಮನೆ, ಮಿಲ್ಲು, ಕೃಷಿಕರ ಗುಡಿಸಲು, ಪ್ರಾರ್ಥನಾ ಮಂದಿರ ಇತ್ಯಾದಿಗಳಿದ್ದುವು.



**ಫ್ಯೂಡಲಿಸಂ**

'ಫ್ಯೂಡ್' ಎಂಬ ಜರ್ಮನ್ ಪದದಿಂದ 'ಫ್ಯೂಡಲಿಸಂ' ಎಂಬ ಪದವು ರೂಪುಗೊಂಡಿತು. 'ಫ್ಯೂಡ್' ಎಂದರೆ 'ಒಂದು ತುಂಡು ಭೂಮಿ' ಎಂದರ್ಥ



ಫ್ಯೂಡಲ್ ಸಮಾಜದ ಕೃಷಿಕರ ಸ್ಥಿತಿಗತಿಯನ್ನು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.

## ನಗರಗಳು, ವ್ಯಾಪಾರ, ವ್ಯಾಪಾರ ಒಕ್ಕೂಟಗಳು

ಫ್ಯೂಡಲಿಸಂ ನೆಲೆನಿಂತಿದ್ದ ಮಧ್ಯಕಾಲದ ಆರಂಭದಲ್ಲಿ ವ್ಯಾಪಾರಕ್ಕೆ ದೊಡ್ಡ ಪ್ರಾಧಾನ್ಯವಿರಲಿಲ್ಲ. ಮೇನರ್‌ಗಳ ಉತ್ಪನ್ನಗಳನ್ನು ಅಲ್ಲೇ ವಿನಿಯೋಗಿಸುತ್ತಿದ್ದರು. ಪ್ರತಿಯೊಂದು ಪ್ರದೇಶದಲ್ಲಿರುವ ಸಂತೆಗಳ ಮೂಲಕ ಉತ್ಪನ್ನಗಳು ಹಾಗೂ ಕೃಷಿ ಉಪಕರಣಗಳನ್ನು ವಿನಿಮಯ ಮಾಡುತ್ತಿದ್ದರು.

ಸಿ.ಇ. ಹನ್ನೊಂದನೇ ಶತಮಾನದಲ್ಲಿ ಯುರೋಪಿನಲ್ಲಿ ಅನೇಕ ಹೊಸ ನಗರಗಳು ಬೆಳೆದುಬಂದವು. ವ್ಯಾಪಾರ ಕೇಂದ್ರಗಳೂ ಕರಕುಶಲ ಕೈಗಾರಿಕಾ ಕೇಂದ್ರಗಳೂ ನಗರಗಳಾಗಿ ಬದಲಾದುವು. ಬಂದರುಗಳನ್ನು ಕೇಂದ್ರೀಕರಿಸಿಯೂ ಕೆಲವು ನಗರಗಳು ಹುಟ್ಟಿಕೊಂಡವು. ಇಂತಹ ನಗರಗಳು ಮೊತ್ತಮೊದಲು ಇಟಲಿಯಲ್ಲಿ ರೂಪುಗೊಂಡವು.. ಏಷ್ಯದ ದೇಶಗಳು ಹಾಗೂ ಪಶ್ಚಿಮ ಯುರೋಪಿನ ದೇಶಗಳೊಂದಿಗೆ ಇಟಲಿಯ ನಗರಗಳು ವ್ಯಾಪಾರ ನಡೆಸುತ್ತಿದ್ದುವು.

ವೆನಿಸ್, ಮಿಲಾನ್, ಫ್ಲೋರೆನ್ಸ್, ಜನೋವ ಮೊದಲಾದುವುಗಳು ಇಟೆಲಿಯ ಪ್ರಧಾನ ನಗರಗಳಾಗಿದ್ದುವು. ನ್ಯೂರಂಬರ್ಗ್, ಕೋನ್‌ಸ್ಟಂಟಿನೋಪಲ್ ಎಂಬಿವುಗಳೂ ಆ ಕಾಲದ ಪ್ರಧಾನ ನಗರಗಳಾಗಿದ್ದುವು. ಭಾರತ, ಚೈನಾ ಮೊದಲಾದ ದೇಶಗಳಿಂದ ಸುಗಂಧದ್ರವ್ಯಗಳು, ರತ್ನಗಳು, ಬಟ್ಟೆಬರೆಗಳು ಮೊದಲಾದವುಗಳು ಪ್ರಧಾನವಾಗಿ ಈ ನಗರಗಳಿಗೆ ತಲುಪಿದವು. ಅಲ್ಲಿಂದ ಈ ಉತ್ಪನ್ನಗಳನ್ನು ಯುರೋಪಿನ ಇತರ ದೇಶಗಳಿಗೆ ಕೊಂಡುಹೋದರು.

ಮಧ್ಯಕಾಲದಲ್ಲಿ ಹುಟ್ಟಿಕೊಂಡ ಹೆಚ್ಚಿನ ನಗರಗಳಿಗೂ ಸ್ವಂತವಾದ ಆಡಳಿತ ವ್ಯವಸ್ಥೆ ಇತ್ತು. ಪ್ರತಿಯೊಂದು ನಗರವೂ ದೊಡ್ಡದಾದ ಆವರಣ ಗೋಡೆಗಳಿಂದ ಸಂರಕ್ಷಿಸಲ್ಪಟ್ಟಿತ್ತು. ಶುಚಿತ್ವದ ವಿಷಯದಲ್ಲಿ ಬಹಳ ಹಿಂದುಳಿದಿದ್ದ ಕಾರಣ ಈ ನಗರಗಳು ಪ್ಲೇಗ್‌ನಂತಹ ಸಾಂಕ್ರಾಮಿಕ ರೋಗಗಳ ಭೀತಿಯಲ್ಲಿದ್ದುವು.



ಮಧ್ಯಕಾಲೀನ ಯುರೋಪಿನಲ್ಲಿ ನಗರಗಳು ಹೇಗೆ ಬೆಳೆದುಬಂದುವು ಎಂಬುದನ್ನು ಅವಲೋಕಿಸಿರಿ.




**ಕರಿಮರಣ**

**"ಬೆಳಗ್ಗೆ ಒಡನಾಡಿಗಳೊಂದಿಗೆ ಉಪಾಹಾರ ಸೇವಿಸಿ ರಾತ್ರಿ ಪರಲೋಕದಲ್ಲಿ ಪೂರ್ವಜರೊಂದಿಗೆ ರಾತ್ರಿಭೋಜನ ಸೇವಿಸಬೇಕಾಗಿ ಬಂದ ಧೀರರಾದ ಪುರುಷರೂ, ಸೌಂದರ್ಯವತಿಯರಾದ ಸ್ತ್ರೀಯರೂ............... ರೋಗಬಾಧಿತರಾದ ಹತ್ತುಸಾವಿರ ಮಂದಿ ಶುಶ್ರೂಷೆ ಮಾಡಲು ಜನರಿಲ್ಲದೆ ನಿರಾಶ್ರಿತರಾಗಿ ಸತ್ತುಬಿದ್ದಿದ್ದರು. ಕೆಲವರು ಬೀದಿಗಳಲ್ಲಿ ಪ್ರಾಣಬಿಟ್ಟರೆ, ಇನ್ನು ಕೆಲವರು ಸ್ವಂತ ಮನೆಗಳಲ್ಲಿ ಕೊನೆಯುಸಿರೆಳೆದರು. ಕೊಳೆತ ಶವಗಳಿಂದ ಹೊರಸೂಸುತ್ತಿದ್ದ ದುರ್ಗಂಧದಿಂದ ಮನೆಗಳಲ್ಲಿ ಜನರು ಮೃತಪಟ್ಟ ವಿಷಯ ಹೊರಜಗತ್ತಿಗೆ ತಿಳಿಯಿತು. ಸ್ಮಶಾನದಲ್ಲಿ ಸಂಸ್ಕರಿಸಲು ಸಾಧ್ಯವಾಗದೆ ಶವಗಳು ರಾಶಿಗಳಾಗಿ ಬಿದ್ದಿದ್ದವು."**

**ಬೊಕ್ಕಾಚಿಯೋ-ದಕ್ಕಾಮರನ್**

ಮಧ್ಯಕಾಲೀನ ನಗರಗಳು ಎದುರಿಸಿದ ಅತ್ಯಂತ ದೊಡ್ಡ ಭೀತಿ ಎಂದರೆ ಪ್ಲೇಗ್ ಎಂಬ ರೋಗ. ಪ್ಲೇಗ್ ಬಾಧಿಸಿದ ಒಂದು ನಗರದ ಚಿತ್ರಣವನ್ನು ಬೊಕ್ಕಾಚಿಯೋ ನೀಡಿದ್ದಾರೆ. ಪ್ಲೇಗ್ ಭೀತಿಯನ್ನು ಪ್ರಧಾನವಾಗಿ ಎದುರಿಸಿದವುಗಳು ಬಂದರು ನಗರಗಳಾಗಿದ್ದುವು. ಹಡಗುಗಳಲ್ಲಿ ಸರಕುಗಳೊಂದಿಗೆ ಬಂದ ಇಲಿಗಳು ಪ್ಲೇಗ್ ರೋಗವನ್ನು ಹರಡಿದುವು. ಸಾವಿರಾರು ಮಂದಿಯ ಸಾವಿಗೆ ಕಾರಣವಾದ ಪ್ಲೇಗನ್ನು ಅಂದು 'ಕರಿಮರಣ' (Black death) ಎಂದು ಕರೆಯುತ್ತಿದ್ದರು. ಸಿ.ಇ. 1300 ರಲ್ಲಿ 73 ದಶಲಕ್ಷವಾಗಿದ್ದ ಯುರೋಪಿನ ಜನಸಂಖ್ಯೆ ಒಂದು ಶತಮಾನ ಕಳೆದಾಗ 45 ದಶಲಕ್ಷವಾಗಿ ಕಡಿಮೆಯಾಯಿತು.




ಮಧ್ಯಕಾಲೀನ ಯುರೋಪಿನ ನಗರಗಳು

ಭೂಪಟವನ್ನು ನಿರೀಕ್ಷಿಸಿ ಮಧ್ಯಕಾಲದಲ್ಲಿ ಬೆಳೆದುಬಂದ ನಗರಗಳು ಯಾವೆಲ್ಲ ದೇಶಗಳಲ್ಲಿವೆ ಎಂಬುದನ್ನು ಕಂಡುಹಿಡಿದು ಬರೆಯಿರಿ.

- 
- 
- 

ಯುರೋಪಿನಲ್ಲಿ ಹೊಸದಾಗಿ ಬೆಳೆದುಬಂದ ನಗರಗಳು ಕರಕುಶಲ ಕೈಗಾರಿಕೆ ಹಾಗೂ ವ್ಯಾಪಾರದ ಕೇಂದ್ರಗಳಾಗಿದ್ದುವು. ಈ ನಗರಗಳ ವ್ಯಾಪಾರಿಗಳು ಹಾಗೂ ಕರಕುಶಲ ಕೆಲಸಗಾರರು ಸೇರಿಕೊಂಡು 'ಗಿಲ್ಡುಗಳು' ಎಂಬ ಒಕ್ಕೂಟವನ್ನು ರೂಪೀಕರಿಸಿದರು. ವ್ಯಾಪಾರಿಗಳ ಹೊರತಾಗಿ ಕಬ್ಬಿಣದ ಕೆಲಸಗಾರರು, ಚಿನ್ನದ ಕೆಲಸಗಾರರು, ಚರ್ಮದ ಕೆಲಸಗಾರರು, ಮರದ ಕೆಲಸಗಾರರು ಮೊದಲಾದವರೂ ಗಿಲ್ಡುಗಳನ್ನು ರೂಪೀಕರಿಸಿದ್ದರು.

ವಿವಿಧ ರೀತಿಯ ಉತ್ಪನ್ನಗಳ ಬೆಲೆ, ಗುಣಮಟ್ಟ, ಕಾರ್ಮಿಕರ ಕೆಲಸದ ಸಮಯ ಎಂಬಿವುಗಳನ್ನು ಗಿಲ್ಡುಗಳು ನಿಶ್ಚಯಿಸುತ್ತಿದ್ದುವು.

ಮಧ್ಯಕಾಲೀನ ಯುರೋಪಿನ ಆರ್ಥಿಕ ಜೀವನದಲ್ಲಿ ಗಿಲ್ಡುಗಳ ಪ್ರಾಧಾನ್ಯವನ್ನು ಅವಲೋಕಿಸಿರಿ.

## ಮಧ್ಯಕಾಲೀನ ಯುರೋಪಿನಲ್ಲಿ ವಿಜ್ಞಾನ ಮತ್ತು ಕಲೆ

ಮಧ್ಯಕಾಲೀನ ಯುರೋಪಿನಲ್ಲಿ ವಿಜ್ಞಾನ, ಕಲೆ ಎಂಬೀ ಕ್ಷೇತ್ರಗಳಲ್ಲಿ ಗಮನಾರ್ಹವಾದ ಪ್ರಗತಿಯುಂಟಾಯಿತು. ಕ್ರೈಸ್ತರ ದೇವಾಲಯಗಳೂ ಸನ್ಯಾಸಿಗಳ ಮಠಗಳೂ ಶಿಕ್ಷಣದ ಪ್ರಧಾನ ಕೇಂದ್ರಗಳಾಗಿದ್ದುವು. ಸನ್ಯಾಸಿಗಳ ಮಠಗಳೊಂದಿಗೆ ಗ್ರಂಥಾಲಯಗಳೂ ಇದ್ದುವು. ಮುದ್ರಣ ವ್ಯವಸ್ಥೆ ಇಲ್ಲದಿದ್ದ ಆ ಕಾಲದಲ್ಲಿ ಹಲವು ಪುಸ್ತಕಗಳ ಹಸ್ತಪ್ರತಿಗಳನ್ನು ತಯಾರಿಸಿ ಸನ್ಯಾಸಿ ಮಠಗಳಲ್ಲಿ ಸಂರಕ್ಷಿಸುತ್ತಿದ್ದರು.


ಹಸ್ತಪ್ರತಿಗಳನ್ನು ತಯಾರಿಸುತ್ತಿರುವುದು (ಚಿತ್ರಗಾರನ ಕಲ್ಪನೆಯಲ್ಲಿ)

ಮಧ್ಯಕಾಲದಲ್ಲಿ ಯುರೋಪಿನಲ್ಲಿ ಅನೇಕ ವಿಶ್ವವಿದ್ಯಾನಿಲಯಗಳು ಇದ್ದುವು. ಈ ವಿಶ್ವವಿದ್ಯಾನಿಲಯಗಳು ವಿಜ್ಞಾನದ ಕೇಂದ್ರಗಳಾಗಿದ್ದುವು. ಪಟ್ಟಿಯನ್ನು ನೋಡಿ ಅವುಗಳು ಯಾವುವು ಎಂದು ಕಂಡುಹಿಡಿಯಿರಿ.

**ವಿಶ್ವವಿದ್ಯಾನಿಲಯಗಳು**

| ಇಟಲಿ | ಸ್ಪೈನ್ | ಫ್ರಾನ್ಸ್ | ಇಂಗ್ಲೆಂಡ್ |
|---|---|---|---|
| ಪಾವಿಯ | ಪಾರ್ಮ | ಪ್ಯಾರಿಸ್ | ಆಕ್ಸ್‌ಫರ್ಡ್ |
| ಪಾದುವ | ಕೋರ್ಡೋವ | ಟುಲೋಸ್ | ಕ್ಯಾಂಬ್ರಿಡ್ಜ್ |

ಮಧ್ಯಕಾಲದಲ್ಲಿ ನಿರ್ಮಿಸಿದ ಕ್ರಿಶ್ಚಿಯನ್ ದೇವಾಲಯಗಳು ಆ ಕಾಲದ ವಾಸ್ತುಶಿಲ್ಪಕಲಾಕ್ಷೇತ್ರದ ಸಾಧನೆಗಳಿಗೆ ಉದಾಹರಣೆಗಳಾಗಿದೆ. ಕಮಾನುಗಳು, ವಿಶಾಲವಾದ ಕೋಣೆಗಳೂ ಆ ಕಾಲದಲ್ಲಿ ನಿರ್ಮಿಸಿದ ದೇವಾಲಯಗಳ ವಿಶೇಷತೆಗಳಾಗಿವೆ. ಈ ನಿರ್ಮಾಣ ರೀತಿಯನ್ನು ರೋಮನೋಸಿಕ್ ಶೈಲಿ ಎಂದು ಕರೆಯುತ್ತಾರೆ. ಸಿ.ಇ. ಹನ್ನೆರಡನೇ ಶತಮಾನದಲ್ಲಿ ಗೋಥಿಕ್ ಎಂದು ಕರೆಯಲ್ಪಡುವ ಇನ್ನೊಂದು ಹೊಸ ನಿರ್ಮಾಣ ಶೈಲಿಯು ಹುಟ್ಟಿಕೊಂಡಿತು. ಚೂಪಾದ ಗೋಪುರಗಳು ಈ ಶೈಲಿಯ ವಿಶೇಷತೆಗಳಾಗಿವೆ.


ರೋಮನೋಸಿಕ್ ಶೈಲಿ


ಗೋಥಿಕ್‌ಶೈಲಿ

## ಮಧ್ಯಕಾಲೀನ ಚೈನಾ ಮತ್ತು ಅರಬ್ ಪ್ರಪಂಚ


ಇದುವರೆಗೆ ನಾವು ಮಧ್ಯಕಾಲೀನ ಯುರೋಪಿನ ಕುರಿತು ಚರ್ಚಿಸಿದೆವಲ್ಲವೆ. ಚೀನಿಯರು ಮತ್ತು ಅರಬರು ಮಧ್ಯಕಾಲದಲ್ಲಿ ವಿಜ್ಞಾನ ಮತ್ತು ಕಲಾಕ್ಷೇತ್ರಗಳಲ್ಲಿ ಗಮನಾರ್ಹವಾದ ಕೊಡುಗೆಗಳನ್ನು ನೀಡಿದವರಾಗಿದ್ದರು.

ಮುದ್ರಣಯಂತ್ರ, ಮದ್ದುಗುಂಡು ಇತ್ಯಾದಿಗಳು ಚೀನಿಯರ ಸಂಶೋಧನೆಗಳಾಗಿವೆ. ಇವುಗಳನ್ನು ಯುರೋಪಿಯನ್ನರು ಚೀನಿಯರಿಂದ ತಿಳಿದುಕೊಂಡರು. ಮುದ್ರಣ ಕಲೆಯು ವಿಜ್ಞಾನದ ಬೆಳವಣಿಗೆಗೆ ಸಹಾಯಕವಾಯಿತು. ಸಮುದ್ರಯಾನಗಳಲ್ಲಿ ದಿಕ್ಕುಗಳನ್ನು ನೋಡಲು ಸಹಾಯಕವಾಗುವ ದಿಕ್ಸೂಚಿ ಯಂತ್ರವೂ ಚೀನಿಯರ ಸಂಶೋಧನೆಯಾಗಿದೆ. ಚೀನಿಯರು ವಾಸ್ತುವಿದ್ಯೆಯಲ್ಲೂ ನಿಪುಣರಾಗಿದ್ದರು. 'ಪಗೋಡಗಳು' ಎಂದು ಕರೆಯಲ್ಪಡುವ ಬೌದ್ಧ ದೇವಾಲಯಗಳು ಅವರ ನಿರ್ಮಾಣ ಕೌಶಲ್ಯಕ್ಕೆ ಸಾಕ್ಷಿಯಾಗಿದೆ.


ಚೀನಾದ ಪಗೋಡ


ಪ್ರಾಚೀನ ಮುದ್ರಣಯಂತ್ರ

ವಿಜ್ಞಾನ -ತಂತ್ರಜ್ಞಾನ-ಕಲಾಕ್ಷೇತ್ರಗಳಲ್ಲಿ ಮಧ್ಯಕಾಲೀನ ಚೈನಾದ ಸಾಧನೆಗಳಿಗೆ ಸಂಬಂಧಿಸಿದ ಪದಸೂರ್ಯವನ್ನು ಪೂರ್ತಿಗೊಳಿಸಿರಿ.




ಅರಬರ ಪ್ರಧಾನ ಕೊಡುಗೆಗಳು ವಿಜ್ಞಾನ, ಸಾಹಿತ್ಯ ಎಂಬೀ ಕ್ಷೇತ್ರಗಳಲ್ಲಾಗಿತ್ತು. ಅಲ್‌ರಾಸಿ, ಇಬನ್‌ಸಿನ ಎಂಬವರು ವೈದ್ಯಕೀಯ ಶಾಸ್ತ್ರದ ಪ್ರತಿಭೆಗಳಾಗಿದ್ದರು. ಕಿತ್ತಾಬುಲ್‌ಹವ್ವೈ ಎಂಬುದು ಅಲ್‌ರಾಸಿಯು ರಚಿಸಿದ ವೈದ್ಯಶಾಸ್ತ್ರ ಗ್ರಂಥವಾಗಿದೆ. ಅಲ್-ಖಾನೂನ್ ಎಂಬುದು ಇಬನ್‌ಸಿನ ರಚಿಸಿದ ಪುಸ್ತಕವಾಗಿದೆ.

ಒಮರ್‌ಖಯಾಂ ರಚಿಸಿದ 'ರುಬಾಯ್ಯತ್', ಫಿರ್ದೌಸಿಯ 'ಷಾಹ್‌ನಾಮ' ಎಂಬಿವುಗಳು ಆ ಕಾಲದ ಪ್ರಧಾನ ಸಾಹಿತ್ಯ ಕೃತಿಗಳಾಗಿವೆ. ಪ್ರಸಿದ್ಧವಾದ 'ಆಯಿರತ್ತೊನ್ನು ರಾವುಗಳ್' ಅರಬರ ಮತ್ತೊಂದು ಸಾಹಿತ್ಯ ಕೃತಿಯಾಗಿದೆ.


ಪ್ರಾಚೀನ ಭಾರತವು ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಮಾಡಿದ ಸಾಧನೆಗಳನ್ನು ಅರಬರು ತಿಳಿದುಕೊಂಡು ಆ ಸಾಧನೆಗಳನ್ನು ಅವರು ಯುರೋಪಿಗೂ ತಲುಪಿಸಿದರು. ಉದಾಹರಣೆಗೆ ಸೊನ್ನೆ, ದಶಮಾಂಶ ಪದ್ಧತಿ ಇತ್ಯಾದಿಗಳು.



ವಿಜ್ಞಾನ, ಸಾಹಿತ್ಯಕ್ಷೇತ್ರಗಳಿಗೆ ಅರಬರು ನೀಡಿದ ಕೊಡುಗೆಗಳನ್ನು ಸೂಚಿಸುವ ಡಯಾಗ್ರಾಂನ್ನು ಪೂರ್ತಿಗೊಳಿಸಿರಿ.



ನಾವು ಈ ಪಾಠಭಾಗದಲ್ಲಿ ಮಧ್ಯಕಾಲದಲ್ಲಿ ಯುರೋಪ್, ಚೈನಾ ಹಾಗೂ ಅರಬ್ ದೇಶಗಳ ಕೆಲವು ಪ್ರಧಾನ ವಿಶೇಷತೆಗಳ ಕುರಿತು ಚರ್ಚಿಸಿದೆವು. ಮಧ್ಯಕಾಲದ ಕೊನೆಯಲ್ಲಿ ವ್ಯಾಪಾರ ಪ್ರಬಲವಾಯಿತು ಅಲ್ಲದೆ ವ್ಯಾಪಾರ ಸಂಬಂಧದ ಮೂಲಕ ಸಾಂಸ್ಕೃತಿಕ, ವೈಜ್ಞಾನಿಕ ಕ್ಷೇತ್ರಗಳಲ್ಲಿ ಉಂಟಾದ ಪ್ರಗತಿಯು ಇತರ ಪ್ರದೇಶಗಳಿಗೂ ತಲುಪಿತು.






## ಕ್ರೋಢೀಕರಣ

- ಫ್ಯೂಡಲಿಸಂ ಎಂಬುದು ಮಧ್ಯಕಾಲೀನ ಯುರೋಪಿನಲ್ಲಿ ರೂಪುಗೊಂಡ ಸಾಮಾಜಿಕ-ಆರ್ಥಿಕ-ರಾಜಕೀಯ ವ್ಯವಸ್ಥೆಯಾಗಿದೆ.
- ಫ್ಯೂಡಲ್ ಸಮಾಜದ ಶ್ರೇಣಿಯ ಅತ್ಯಂತ ಉನ್ನತ ಸ್ತರದಲ್ಲಿ ರಾಜ ಹಾಗೂ ಅತ್ಯಂತ ಕೆಳಸ್ತರದಲ್ಲಿ ಕೃಷಿಕರು ಇದ್ದರು.
- ಸಿ.ಇ. ಹನ್ನೊಂದನೇ ಶತಮಾನದಲ್ಲಿ ಯುರೋಪಿನಲ್ಲಿ ಅನೇಕ ನಗರಗಳು ಬೆಳೆದುಬಂದುವು.
- ವ್ಯಾಪಾರದ ಅಭಿವೃದ್ಧಿಯು ನಗರಗಳ ಆವಿರ್ಭಾವಕ್ಕೆ ಪ್ರಧಾನ ಕಾರಣವಾಯಿತು.
- ಗಿಲ್ಡುಗಳು ಮಧ್ಯಕಾಲದ ವ್ಯಾಪಾರಿಗಳ ಮತ್ತು ಕರಕುಶಲ ಕಾರ್ಮಿಕರ ಒಕ್ಕೂಟಗಳಾಗಿದ್ದುವು.

- ಮಧ್ಯಕಾಲದಲ್ಲಿ ಯುರೋಪಿನಲ್ಲಿ ಅನೇಕ ವಿಶ್ವವಿದ್ಯಾನಿಲಯಗಳು ಅಸ್ತಿತ್ವದಲ್ಲಿದ್ದವು.
- ಚೈನಾ ಮತ್ತು ಅರಬರು ವಿಜ್ಞಾನ-ಸಾಹಿತ್ಯರಂಗಗಳಲ್ಲಿ ಜಾಗತಿಕ ಸಂಸ್ಕೃತಿಗೆ ಗಣನೀಯವಾದ ಕೊಡುಗೆಗಳನ್ನು ನೀಡಿದ್ದಾರೆ.

## ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಫ್ಯೂಡಲ್ ವ್ಯವಸ್ಥೆಯ ಪ್ರಧಾನ ವಿಶೇಷತೆಗಳನ್ನು ವಿಶದೀಕರಿಸುವುದು.
- ಮಧ್ಯಕಾಲದಲ್ಲಿ ನಗರಗಳು ಬೆಳೆದುಬರಲು ಕಾರಣವಾದ ಹಿನ್ನಲೆಯನ್ನು ವಿವರಿಸುವುದು.
- ಮಧ್ಯಕಾಲದಲ್ಲಿ ಬೆಳೆದು ಬಂದ ನಗರಗಳನ್ನು ಪಟ್ಟಿಮಾಡುವುದು.
- ಮಧ್ಯಕಾಲದಲ್ಲಿ ಉಂಟಾದ ಶೈಕ್ಷಣಿಕ ಪ್ರಗತಿಯನ್ನು ವಿವರಿಸುವುದು.
- ಮಧ್ಯಕಾಲದಲ್ಲಿ ಚೈನಾದವರ ಮತ್ತು ಅರಬರ ಸಾಂಸ್ಕೃತಿಕ ಸಾಧನೆಗಳನ್ನು ತಿಳಿದುಕೊಳ್ಳುವುದು.

## ಮೌಲ್ಯನಿರ್ಣಯ ಮಾಡುವ

- ಫ್ಯೂಡಲ್ ವ್ಯವಸ್ಥೆಯಲ್ಲಿದ್ದ ಸಾಮಾಜಿಕ ವಿಭಾಗಗಳು ಯಾವುವು?
- ಫ್ಯೂಡಲ್ ಸಮಾಜದಲ್ಲಿ ಕೃಷಿಕರ ಸ್ಥಿತಿಗತಿಗಳನ್ನು ಪರಿಶೀಲಿಸಿರಿ.
- ಮಧ್ಯಕಾಲದ ನಗರಗಳ ಅಭಿವೃದ್ಧಿಯಲ್ಲಿ ವ್ಯಾಪಾರದ ಪಾತ್ರವನ್ನು ವಿಶ್ಲೇಷಿಸಿರಿ.
- ಮಧ್ಯಕಾಲದಲ್ಲಿ ನಿರ್ಮಿಸಲ್ಪಟ್ಟ ದೇವಾಲಯಗಳ ವಿಶೇಷತೆಗಳೇನು?
- ವಿಜ್ಞಾನ-ಸಾಹಿತ್ಯ ರಂಗಗಳಲ್ಲಿ ಅರಬರ ಸಾಧನೆಗಳು ಯಾವುವು?

- ವಿಜ್ಞಾನ-ತಂತ್ರಜ್ಞಾನ ಕ್ಷೇತ್ರಗಳಲ್ಲಿ ಚೈನಾದವರ ಕೊಡುಗೆಗಳ ಕುರಿತು ಟಿಪ್ಪಣಿ ತಯಾರಿಸಿರಿ.
- 'ಎ ' ಕಾಲಂಗೆ ಸರಿ ಹೊಂದುವವುಗಳನ್ನು ' ಬಿ ' ಕಾಲಂನಿಂದ ಆರಿಸಿ ಬರೆಯಿರಿ.

| ಎ | ಬಿ |
|---|---|
| ಇಟಲಿ | ಕೊರ್‌ದೋವ |
| ಚೈನ | ಷಾಹ್‌ನಾಮ |
| ಸ್ಪೈನ್ | ಜನೋವ |
| ಅಲ್‌ರಾಸಿ | ಮುದ್ರಣ ವಿದ್ಯೆ |
| ಫಿರ್‌ದೌಸಿ | ಕಿತಾಬುಲ್ ಹವೈ |

## ಮುಂದುವರಿದ ಚಟುವಟಿಕೆಗಳು

- ಫ್ಯೂಡಲ್ ಸಮಾಜದ ಶ್ರೇಣಿಯಲ್ಲಿ ಬರುವ ವಿವಿಧ ವಿಭಾಗಗಳನ್ನೂ ಅವುಗಳ ವಿಶೇಷತೆಗಳನ್ನೂ ಸೂಚಿಸುವ ಚಾರ್ಟ್ ತಯಾರಿಸಿ ಸಮಾಜ ವಿಜ್ಞಾನ ಲ್ಯಾಬ್‌ನಲ್ಲಿ ಪ್ರದರ್ಶಿಸಿರಿ.
- ಜಾಗತಿಕ ಭೂಪಟದಲ್ಲಿ ಮಧ್ಯಕಾಲದಲ್ಲಿ ನಗರಗಳು ಬೆಳೆದುಬಂದ ದೇಶಗಳನ್ನು ಗುರುತಿಸಿ ಬಣ್ಣಹಚ್ಚಿರಿ.
- ನಿಮ್ಮ ಗ್ರಂಥಾಲಯದಿಂದ 'ಆಯಿರತ್ತೊನ್ನು ರಾವುಗಳ್' ಪುಸ್ತಕವನ್ನು ಸಂಗ್ರಹಿಸಿ ಓದಿರಿ.

## ಸ್ವಮೌಲ್ಯ ನಿರ್ಣಯ

| | ಪೂರ್ಣವಾಗಿ | ಭಾಗಿಕವಾಗಿ | ಉತ್ತಮಪಡಿಸಬೇಕು |
|---|---|---|---|
| ಫ್ಯೂಡಲ್ ವ್ಯವಸ್ಥೆಯಲ್ಲಿರುವ ವಿವಿಧ ವಿಭಾಗಗಳನ್ನು ವರ್ಗೀಕರಿಸಿ ತಿಳಿಯಲು ಸಾಧ್ಯವಿದೆ. | | | |
| ಫ್ಯೂಡಲ್ ವ್ಯವಸ್ಥೆಯ ಕೃಷಿಕರ ದಯನೀಯ ಸ್ಥಿತಿಯನ್ನು ವಿಶ್ಲೇಷಿಸಲು ಸಾಧ್ಯವಿದೆ. | | | |
| ಮಧ್ಯಕಾಲದಲ್ಲಿ ಬೆಳೆದುಬಂದ ವಿಶ್ವವಿದ್ಯಾಲಯಗಳನ್ನು ಪಟ್ಟಿ ಮಾಡಲು ಸಾಧ್ಯವಿದೆ. | | | |
| ವಿಜ್ಞಾನ ಮತ್ತು ಸಾಹಿತ್ಯ ರಂಗಗಳಲ್ಲಿ ಅರಬರ ಮತ್ತು ಚೈನಾದವರ ಸಾಧನೆಗಳನ್ನು ತಿಳಿದುಕೊಳ್ಳಲು ಸಾಧ್ಯವಿದೆ. | | | |



9

# ಮಧ್ಯಕಾಲೀನ ಕೇರಳ

ಮಧ್ಯಕಾಲೀನ ಭಾರತದ ಚರಿತ್ರೆಯನ್ನು ನಾವು ಈ ಹಿಂದಿನ ಅಧ್ಯಾಯದಿಂದ ತಿಳಿದುಕೊಂಡಿರುವೆವಲ್ಲವೇ. ಆ ಕಾಲದಲ್ಲಿ ಕೇರಳದ ಜನಜೀವನ ಹೇಗಿತ್ತು? ತಾಮ್ರಶಾಸನಗಳು ಸಿ.ಇ. 9ನೇ ಶತಮಾನದಿಂದ 18ನೇ ಶತಮಾನದ ವರೆಗಿನ ಮಧ್ಯಕಾಲೀನ ಕೇರಳದ ಕುರಿತು ಮಾಹಿತಿಯನ್ನು ಒದಗಿಸುವ ಪ್ರಧಾನ ಪುರಾವೆಗಳಾಗಿವೆ. ಚಿತ್ರದಲ್ಲಿರುವುದು ಈ ರೀತಿಯ ತಾಮ್ರಶಾಸನಗಳಲ್ಲೊಂದಾಗಿದೆ.



ಯಹೂದಿ ತಾಮ್ರಶಾಸನ

**ತಾಮ್ರ ಶಾಸನಗಳು**

ತಾಮ್ರದ ಫಲಕದಲ್ಲಿ ಕೆತ್ತಿದ ಅಕ್ಷರಗಳನ್ನು ತಾಮ್ರ ಶಾಸನಗಳೆಂದು ಕರೆಯುತ್ತಾರೆ. ಇದರಲ್ಲಿ ನಾಡುವಾಳಿಗಳು ದೇವಾಲಯಗಳಿಗೆ ಮತ್ತು ವ್ಯಾಪಾರ ಒಕ್ಕೂಟಗಳಿಗೆ ಹಕ್ಕುಪತ್ರಗಳನ್ನು ನೀಡುತ್ತಿದ್ದರು. ತರಿಸಾಪಳ್ಳಿ ತಾಮ್ರ ಶಾಸನ ಯಹೂದಿ ತಾಮ್ರ ಶಾಸನ ಇದಕ್ಕೆ ಉದಾಹರಣೆಗಳಾಗಿವೆ. ಕೆಲವು ತಾಮ್ರ ಶಾಸನಗಳಲ್ಲಿ ನಾಡುವಾಳಿಗಳ ಆಡಳಿತ ಕಾಲವನ್ನು ದಾಖಲಿಸಲಾಗಿದೆ.

ಇದರಲ್ಲಿ ದಾಖಲಿಸಿದ ಬರಹಗಳು ನಿಮಗೆ ಪರಿಚಿತವಾಗಿವೆಯೇ? ಉರುಟು ಲಿಪಿ ಎನ್ನುವ ಹಳೆಯಕಾಲದ ಲಿಪಿಯಲ್ಲಿ ಇವುಗಳನ್ನು ಬರೆಯಲಾಗಿದೆ. ಮಹೋದಯಪುರವನ್ನು ಕೇಂದ್ರವಾಗಿರಿಸಿ ಮಧ್ಯಕಾಲ ಕೇರಳವನ್ನು ಆಳುತ್ತಿದ್ದ ಭಾಸ್ಕರರವಿಯು ಅಂಜುವೆಣ್ಣ ಎಂಬ ವ್ಯಾಪಾರಿ ಸಂಘಕ್ಕೆ ನೀಡಿದ ಹಕ್ಕುಗಳ ಕುರಿತು ಈ ದಾಖಲೆಯಲ್ಲಿ ಉಲ್ಲೇಖಿಸಲಾಗಿದೆ. ಮಹೋದಯಪುರ ಎಲ್ಲಿತ್ತು?

ಅಲ್ಲಿನ ಇತರ ಆಡಳಿತಾಧಿಕಾರಿಗಳು ಯಾರಾಗಿದ್ದರು? ಅಂದಿನ ಜನಜೀವನ ಹೇಗಿತ್ತು? ನಾವು ಅನ್ವೇಷಣೆ ಮಾಡೋಣ.

## ಪೆರುಮಾಳರು

ಕೇರಳವನ್ನು ಒಳಗೊಂಡಿರುವ ಪ್ರಾಚೀನ ತಮಿಳಗಂನಲ್ಲಿ ಮೂವೇಂತರರು ಎಂದು ಕರೆಯಲ್ಪಡುವ ಬುಡಕಟ್ಟು ಜನಾಂಗದ ಮುಖ್ಯಸ್ಥರ ಆಡಳಿತವು ಅಸ್ತಿತ್ವದಲ್ಲಿತ್ತು. ಆ ಕಾಲದ ಕುರಿತು ನೀವು ಹಿಂದಿನ ತರಗತಿಯಲ್ಲಿ ಕಲಿತಿರುವಿಲ್ಲವೇ. ಸಿ.ಇ. ಒಂಬತ್ತನೆಯ ಶತಮಾನದ ಹೊತ್ತಿಗೆ ಮಹೋದಯಪುರವನ್ನು ಕೇಂದ್ರವಾಗಿರಿಸಿ ರಾಜಾಡಳಿತವು ಆರಂಭವಾಯಿತು. ಇವರನ್ನು ಪೆರುಮಾಳರೆಂದು ಕರೆಯುತ್ತಿದ್ದರು. ಈಗಿನ ಕೊಡುಂಗಲ್ಲೂರ್ ಮತ್ತು ಅದರ ಸಮೀಪದ ಪ್ರದೇಶಗಳನ್ನು ಹಿಂದೆ ಮಹೋದಯಪುರ ಎಂದು ಕರೆಯುತ್ತಿದ್ದರು. ಪೆರುಮಾಳರನ್ನು ಚೇರನ್, ಚೇರಮಾನ್ ಎಂಬ ಹೆಸರಿನಿಂದಲೂ ಕರೆಯುತ್ತಿದ್ದರು. ಅವರಲ್ಲಿ ಕೆಲವು ಆಡಳಿತಗಾರರು 'ಕುಲಶೇಖರ' ಎನ್ನುವ ಬಿರುದನ್ನು ಸ್ವೀಕರಿಸಿಕೊಂಡಿದ್ದರು.

ಪೆರುಮಾಳರ ಆಡಳಿತವು ಈಗಿನ ಕೇರಳದ ಬಹುತೇಕ ಪ್ರದೇಶವನ್ನೂ ಒಳಗೊಂಡಿತ್ತು.

- ಭೂಪಟದ ಸಹಾಯದಿಂದ ಪೆರುಮಾಳರ ಸಾಮ್ರಾಜ್ಯವು ಎಲ್ಲಿಯವರೆಗೆ ವ್ಯಾಪಿಸಿತ್ತು ಎಂಬುದನ್ನು ಕಂಡುಕೊಂಡು ಆಡಳಿತವು ವ್ಯಾಪಿಸಿದ್ದ ನಾಡುಗಳನ್ನು ಪಟ್ಟಿಮಾಡಿರಿ.

ಪೆರುಮಾಳರಕಾಲದ ನಾಡುಗಳು
ಸಿ.ಇ. 800 – ಸಿ.ಇ. 1122




ಉತ್ತರದ ಕೋಲತ್ತುನಾಡಿನಿಂದ ದಕ್ಷಿಣದ ವೇನಾಡಿನ ವರೆಗೆ ಪೆರುಮಾಳರ ಆಡಳಿತವು ವ್ಯಾಪಿಸಿಕೊಂಡಿರುವುದನ್ನು ನೋಡಿದಿರಲ್ಲವೇ.

ಪೆರುಮಾಳರ ಕಾಲದ ಸಾಮಾಜಿಕ ಮತ್ತು ಆರ್ಥಿಕ ವಿಶೇಷತೆಗಳು ಯಾವುವೆಂದು ನೋಡಿರಿ.

- ಜಲಲಭ್ಯತೆಯಿರುವ ಪ್ರದೇಶಗಳಲ್ಲಿ ಕೃಷಿ ವ್ಯಾಪಕವಾಗಿತ್ತು.
- ಕೃಷಿ ಗ್ರಾಮಗಳಲ್ಲಿ ಬ್ರಾಹ್ಮಣರು ಅಧಿಕಾರ ಸ್ಥಾಪಿಸಿದರು.
- ದೇವಾಲಯಗಳು ಅಧಿಕಾರ ಕೇಂದ್ರಗಳಾಗಿ ವಿಕಾಸ ಹೊಂದಿದ್ದವು.

- ಕೃಷಿಭೂಮಿಯ ಒಡೆತನವು ಬ್ರಾಹ್ಮಣರದ್ದಾಗಿತ್ತು.
- ಕೃಷಿಭೂಮಿಯಲ್ಲಿ ದುಡಿಯುತ್ತಿದ್ದವರು ಅಡಿಯಾಳಾಗಿದ್ದರು.

ಗ್ರಾಮಗಳಲ್ಲಿ ಕೃಷಿಗೆ ಹೊರತಾಗಿ ವಿವಿಧ ಕಸುಬಿನ ಗುಂಪುಗಳಿದ್ದುವು. ಕೃಷಿಯ ಬೆಳವಣಿಗೆಯೊಂದಿಗೆ ನಾಡುಗಳು ಉಂಟಾದುವು. ಈ ನಾಡುಗಳನ್ನು ಆಳುತ್ತಿದ್ದವರನ್ನು ನಾಡುವಾಳಿಗಳೆಂದು ಕರೆಯುತ್ತಿದ್ದರು.


## ನಾಡುವಾಳಿ ಸ್ವರೂಪಗಳು

ಹನ್ನೆರಡನೇ ಶತಮಾನದಲ್ಲಿ ಪೆರುಮಾಳರ ಆಡಳಿತವು ಕೊನೆಗೊಂಡಿತು. ಅದರೊಂದಿಗೆ ಅವರ ಕೈಕೆಳಗೆ ಆಡಳಿತ ನಡೆಸುತ್ತಿದ್ದ ನಾಡುವಾಳಿಗಳು ತಾವು ಆಡಳಿತ ನಡೆಸುತ್ತಿದ್ದ ನಾಡುಗಳಲ್ಲಿ ಸ್ವತಃ ಆಡಳಿತವನ್ನು ಆರಂಭಿಸಿದರು.

- ನಾಡುವಾಳಿ ಆಡಳಿತದ ಕೈಕೆಳಗಿದ್ದ ಪ್ರದೇಶಗಳು ಸ್ವರೂಪಗಳೆಂದು ಕರೆಯಲ್ಪಟ್ಟವು.
- ನಾಡುಗಳ ನಡುವೆ ಆರ್ಥಿಕ ಮತ್ತು ಸೈನಿಕ ಶಕ್ತಿಯಲ್ಲಿ ವ್ಯತ್ಯಾಸಗಳಿದ್ದುವು.
- ಬ್ರಾಹ್ಮಣರ ಅಧಿಕಾರವು ಹೆಚ್ಚಾಯಿತು.
- ಅಧಿಕಾರಕ್ಕಾಗಿ ನಾಡುವಾಳಿಗಳು ಪರಸ್ಪರ ಹೋರಾಡಿದರು.

ಪ್ರತಿಯೊಂದು ಸ್ವರೂಪವೂ ಅವಿಭಕ್ತ ಕುಟುಂಬವಾಗಿತ್ತು. ಅವರಲ್ಲಿ ನಾಡಿನ ಆಡಳಿತಾಧಿಕಾರವಿತ್ತು. ಕುಟುಂಬದ ಹಿರಿಯನಲ್ಲಿ ಆಡಳಿತವು ನಿಕ್ಷಿಪ್ತವಾಗಿತ್ತು. ವೇನಾಡನ್ನು ಆಳುತ್ತಿದ್ದ ತೃಪ್ಪಾಪುರ ಸ್ವರೂಪ, ಕೊಚ್ಚಿಯನ್ನು ಆಳುತ್ತಿದ್ದ ಪೆರುಂಬಡಪ್ಪು ಸ್ವರೂಪ, ಕಲ್ಲಿಕೋಟೆಯನ್ನು ಆಳುತ್ತಿದ್ದ ನೆಡಿಯಿರುಪ್ಪು ಸ್ವರೂಪ, ಚಿರಕ್ಕಲ್ಲನ್ನು ಆಳುತ್ತಿದ್ದ ಕೋಲಸ್ವರೂಪ ಇತ್ಯಾದಿಗಳು ಪ್ರಧಾನವಾದ ಸ್ವರೂಪಗಳಾಗಿದ್ದವು.

ಪಟ್ಟಿಯನ್ನು ಪೂರ್ತಿಗೊಳಿಸಿರಿ.



## ವ್ಯಾಪಾರ

ಮಧ್ಯಕಾಲೀನ ಕೇರಳದಲ್ಲಿ ವಿದೇಶ ವ್ಯಾಪಾರ ಹಾಗೂ ಪ್ರಾದೇಶಿಕ ವ್ಯಾಪಾರವು ಪ್ರಗತಿಹೊಂದಿತ್ತು.

- ಆ ಕಾಲದಲ್ಲಿ ನಮ್ಮ ದೇಶದಿಂದ ಯಾವೆಲ್ಲ ಸಂಪನ್ಮೂಲಗಳನ್ನು ವಿನಿಮಯ ಮಾಡುತ್ತಿದ್ದರು?

| | |
|---|---|
| ♦ ಏಲಕ್ಕಿ | ♦ ಶುಂಠಿ |
| ♦ | ♦ |

ಇದೇ ರೀತಿ ಹೊರದೇಶಗಳಿಂದ ನಮ್ಮ ಮಾರುಕಟ್ಟೆಗಳಿಗೂ ವಸ್ತುಗಳು ಬಂದಿರಬಹುದಲ್ಲವೇ? ಅವುಗಳು ಯಾವುವು ಎಂದು ನೋಡಿರಿ.

- ಆವೆ ಮಣ್ಣಿನ ಪಾತ್ರೆಗಳು
- ಮೀನಿನ ಬಲೆಗಳು
- ರೇಶ್ಮೆ

ಆರಂಭದಲ್ಲಿ ವಸ್ತುಗಳನ್ನು ವಸ್ತುಗಳೊಂದಿಗೆ ಬದಲಾಯಿಸುವ ವಸ್ತುವಿನಿಮಯ ಪದ್ಧತಿಯ ಮೂಲಕ ವ್ಯಾಪಾರವು ನಡೆಯುತ್ತಿತ್ತು. ಅನಂತರ ನಾಣ್ಯವನ್ನು ನೀಡಿ ವಸ್ತುಗಳನ್ನು ಕೊಂಡುಕೊಳ್ಳುತ್ತಿದ್ದರು. ಅಂಜುವಣ್ಣಂ, ಮಣಿಗ್ರಾಮಂ ಮುಂತಾದ ಹೆಸರುಗಳಲ್ಲಿ ವ್ಯಾಪಾರಿ ಸಂಘಗಳು ಅಸ್ತಿತ್ವದಲ್ಲಿದ್ದವು. ವ್ಯಾಪಾರದ ಮಹತ್ವವನ್ನು ಅರಿತಿದ್ದ ಪೆರುಮಾಳರು ವ್ಯಾಪಾರಿ ಸಂಘಗಳಿಗೆ ಬೇಕಾದ ಸಹಾಯವನ್ನು ನೀಡುತ್ತಿದ್ದರು. ವ್ಯಾಪಾರ ಸುಂಕವು ರಾಜರ ಪ್ರಧಾನ ಆದಾಯಮಾರ್ಗವಾಗಿತ್ತು.



**ಅಂಜುವಣ್ಣಂ, ಮಣಿಗ್ರಾಮಂ**

ಇವುಗಳು ಸಿ.ಇ. 9 ರಿಂದ 12ನೇ ಶತಮಾನದವರೆಗೆ ಕೇರಳದಲ್ಲಿ ವ್ಯಾಪಾರ ನಡೆಸಿದ ವ್ಯಾಪಾರಿ ಸಂಘಗಳಾಗಿವೆ. ಕೇರಳದ ಕರಾವಳಿ ಪಟ್ಟಣಗಳು ಇವರ ಪ್ರಧಾನ ವ್ಯಾಪಾರ ಕೇಂದ್ರಗಳಾಗಿದ್ದವು.

## ಸಂತೆಗಳು

ಆ ಕಾಲದಲ್ಲಿ ಸಮುದ್ರ ವ್ಯಾಪಾರವು ಪ್ರಗತಿಯನ್ನು ಹೊಂದಿತ್ತು. ಇದರೊಂದಿಗೆ ವಿದೇಶಗಳಿಗೆ ರಫ್ತುಮಾಡುವ ಉತ್ಪನ್ನಗಳ ಬೇಡಿಕೆ ಹೆಚ್ಚಾಯಿತು. ಒಳನಾಡುಗಳಲ್ಲಿ ಇಂತಹ ಉತ್ಪನ್ನಗಳ ಕೃಷಿಯು ವ್ಯಾಪಿಸಿತು. ಗ್ರಾಮಗಳಲ್ಲಿ ಉತ್ಪಾದಿಸಿದ ಉತ್ಪನ್ನಗಳನ್ನು ಸಂತೆಗಳಲ್ಲಿ ತಂದು ಮಾರಿದರು. ಸಂತೆಗಳ ಅಭಿವೃದ್ಧಿಯು ಪ್ರಾದೇಶಿಕ ವ್ಯಾಪಾರವು

ಬಲಗೊಳ್ಳಲು ಸಹಾಯಕವಾಯಿತು.



ಅನಂತಪುರ, ಕೊಲ್ಲಂ, ಕೊಚ್ಚಿ, ಕಲ್ಲಿಕೋಟೆ, ಪಂದಲಾಯನಿ ಮುಂತಾದುವು ಅಂದಿನ ಪ್ರಧಾನ ಸಂತೆಗಳಾಗಿದ್ದುವು. ಕೊಲ್ಲಂ, ಕೊಚ್ಚಿ, ಕಲ್ಲಿಕೋಟೆ, ವಳಪಟ್ಟಣಂ ಮುಂತಾದವು ಅಂದಿನ ಪ್ರಧಾನ ಬಂದರುಗಳಾಗಿದ್ದುವು.

- ಕೇರಳದ ಭೂಪಟದಲ್ಲಿ ಮೇಲೆ ತಿಳಿಸಿದ ಬಂದರುಗಳು ಎಲ್ಲಿವೆ ಎಂದು ಕಂಡುಹಿಡಿಯಿರಿ.

ನೆಲಮಾರ್ಗ ಮತ್ತು ಸಮುದ್ರ ಮಾರ್ಗದ ಮೂಲಕ ಸಂತೆಗಳಿಗೆ ತಲುಪುತ್ತಿದ್ದ ವಸ್ತುಗಳು ಯಾವುವು? ಮಣಿಪ್ರವಾಳ ಕೃತಿಯಾದ 'ಉಣ್ಣುನೀಲಿ ಸಂದೇಶ'ದಲ್ಲಿ ವಿವರಿಸಿರುವುದನ್ನು ನೋಡಿರಿ.

**ಮಣಿಪ್ರವಾಳಂ**

ಮಣಿಪ್ರವಾಳವು ಮಧ್ಯಕಾಲದಲ್ಲಿ ಸಂಸ್ಕೃತ ಮತ್ತು ಪ್ರಾಚೀನ ಮಲೆಯಾಳ ಭಾಷೆಗಳು ಸೇರಿ ರೂಪುಗೊಂಡ ಒಂದು ಭಾಷಾ ಶೈಲಿಯಾಗಿದೆ. ಅನೇಕ ಗ್ರಂಥಗಳು ಈ ಶೈಲಿಯಲ್ಲಿ ರಚಿಸಲ್ಪಟ್ಟಿವೆ.

*ತಟ್ಟಂಕಟ್ಟಿಲ್ ಕಯರುವಲ ಕೈಕೆಟ್ಟಿಲ್ ಮಂಞಾಟ್ಟಿಕೋಟಂ*
*ಮೊಟ್ಟುಂ ಮುಟ್ಟಿಲ್‌ಕರಯುಮರಿಯುಂ ಪೆಟ್ಟಿಯುಂಪಟ್ಟನೂಲುಂ*
*ಅಡುಂಚ್ಚಾಡುಂ ಕುಡಯುಮಡಯುಂ*
*ಪಂಞ್ಞಿಯುಂಮುಞ್ಞಿವೇರುಂ ನೂರುಂಚೋರುಂ ಚುರಯು*
*ಮರಯುಂ ಕಾರಿರುಂಬುಂ ಕರಿಂಬುಂ*

- ಸಂತೆಯಲ್ಲಿ ಯಾವೆಲ್ಲ ವಸ್ತುಗಳು ಲಭಿಸುತ್ತಿದ್ದುವು? ಪಟ್ಟಿ ತಯಾರಿಸಿರಿ.

- ಅವುಗಳು ಇಂದೂ ನಿಮ್ಮೂರಿನಲ್ಲಿವೆಯೇ?

ಹಿಂದಿನ ಅಧ್ಯಾಯಗಳಲ್ಲಿ ಹಲವು ಸಂಚಾರಿಗಳೂ ವ್ಯಾಪಾರದ ಕುರಿತಾಗಿ ವಿವರಿಸಿರುವುದನ್ನು ನೆನಪಿಸುವಿರಲ್ಲವೇ.

ಹದಿನೈದನೆಯ ಶತಮಾನದಲ್ಲಿ ಕೇರಳಕ್ಕೆ ಬಂದ 'ಮಹ್ವಾನ್' ಎಂಬ ಚೀನಾದ ಯಾತ್ರಿಕನು ಕಲ್ಲಿಕೋಟೆ ಬಂದರು ಮತ್ತು ಅಲ್ಲಿನ ವ್ಯಾಪಾರದ ಕುರಿತಾಗಿ ಬರೆದಿರುವುದನ್ನು ಗಮನಿಸಿರಿ.

"ಚೈನಾದಿಂದ ಹಡಗೊಂದು ಬಂದಿಳಿದಾಗ ರಾಜನ ಪ್ರತಿನಿಧಿಯಾದ ಷಾಬಂದರ್‌ಕೋಯ ಮತ್ತು ಮಧ್ಯವರ್ತಿಯೊಬ್ಬ ಹಡಗಿನ ಹತ್ತಿರ ಬರುವರು. ಹಡಗಿನಲ್ಲಿರುವ ವಸ್ತುಗಳ ಪಟ್ಟಿಯನ್ನು ತಯಾರಿಸಿ ವಸ್ತುಗಳ ಬೆಲೆಯನ್ನು ಲೆಕ್ಕಮಾಡಲು ದಿನವೊಂದನ್ನು ನಿಶ್ಚಯಿಸುವರು. ಮೊದಲಿಗೆ ರೇಶ್ಮೆವಸ್ತ್ರಗಳು... ಬೆಲೆ ನಿಶ್ಚಯಿಸಿದ ಮೇಲೆ ಪ್ರತಿಜ್ಞೆಗೈಯುತ್ತಿದ್ದರು. ನಿಮ್ಮ ವಸ್ತುಗಳ ಬೆಲೆಯನ್ನು ಈಗ ನಿಶ್ಚಯಿಸಲಾಗಿದೆ. ಯಾವುದೇ ಕಾರಣಕ್ಕೂ ಅದರಲ್ಲಿ ಬದಲಾವಣೆ ಮಾಡಲು ಸಾಧ್ಯವಿಲ್ಲ..."

ಈ ರೀತಿಯಲ್ಲಿ ಮಧ್ಯವರ್ತಿಗಳು ಖಾತರಿಪಡಿಸುವ ಬೆಲೆಗೆ ಸಮಾನವಾದ ಮೌಲ್ಯವಿರುವ ವಸ್ತುಗಳನ್ನು ಹಡಗಿನ ವಸ್ತುಗಳೊಂದಿಗೆ ವಿನಿಮಯಮಾಡುತ್ತಿದ್ದರು.



ಮಹ್ವಾನನ ವಿವರಣೆಯಿಂದ ಕಲ್ಲಿಕೋಟೆಯ ವ್ಯಾಪಾರದ ಕುರಿತು ಯಾವೆಲ್ಲ ಮಾಹಿತಿಗಳು ಲಭಿಸುತ್ತವೆ? ಟಿಪ್ಪಣಿ ತಯಾರಿಸಿರಿ.

## ಭಾಷೆ, ಸಾಹಿತ್ಯ, ಕಲೆ

'ಉಣ್ಣುನೀಲಿ ಸಂದೇಶ'ದ ಕೆಲವು ವಾಕ್ಯಗಳನ್ನು ನೀವು ಓದಿದಿರಲ್ಲವೇ. ಈ ಭಾಷೆಯೂ ಸಾಹಿತ್ಯವೂ ರೂಪುಗೊಂಡದ್ದು ಯಾವಾಗ? ಕೇರಳದಲ್ಲಿ ಪ್ರಾಚೀನ ಕಾಲದಿಂದಲೇ ಮಲಯಾಳ ಭಾಷೆ ಅಸ್ತಿತ್ವದಲ್ಲಿತ್ತೇ?

- ಕೇರಳವನ್ನು ಮಲಯಾಳ ದೇಶವೆಂದೂ ಕರೆಯುತ್ತಾರೆ. ಈ ಹೆಸರು ಬರಲು ಕಾರಣವೇನಾಗಿರಬಹುದು? ಚರ್ಚಿಸಿರಿ.

ಮಲಯಾಳವು ಮೂಲತಃ ತಮಿಳಿನಿಂದ ರೂಪುಗೊಂಡ ಭಾಷೆ ಎಂದು ತಿಳಿಯಲಾಗಿದೆ. ಸಂಸ್ಕೃತ ಭಾಷೆಯೂ ಮಲಯಾಳ ಭಾಷೆಯ ವಿಕಾಸದ ಮೇಲೆ ಪ್ರಭಾವವನ್ನು ಬೀರಿದೆ. ಪ್ರಾಚೀನ ಮಲಯಾಳ ಭಾಷೆಯನ್ನು ಉರುಟು ಲಿಪಿ ಮತ್ತು ಕೋಲು ಲಿಪಿಗಳಲ್ಲಿ ಬರೆಯಲಾಗುತ್ತಿತ್ತು. ಉರುಟುಲಿಪಿಯಲ್ಲಿ ಬರೆದ ಯಹೂದಿ ತಾಮ್ರಶಾಸನವನ್ನು ನೀವು ನೋಡಿರುವಿರಲ್ಲವೇ?

'ರಾಮಚರಿತ'ವು ಮಲಯಾಳದಲ್ಲಿ ಲಭ್ಯವಾಗಿರುವ ಮೊದಲ ಕೃತಿಯಾಗಿದೆ. ಹದಿನೈದನೆಯ ಶತಮಾನದಲ್ಲಿ ಚೆರುಶ್ಶೇರಿ ಬರೆದಿರುವ ಕೃಷ್ಣಗಾಥ, ಎಳುತ್ತಚ್ಚನ್ ಬರೆದ ರಾಮಾಯಣ, ಮಹಾಭಾರತ ಮತ್ತು ಕಿಳಿಪ್ಪಾಟುಗಳು, ಕುಂಜನ್ ನಂಬ್ಯಾರರ ಕುಂಜನ್‌ಕೃತಿಗಳು ಮಲಯಾಳ ಭಾಷೆಯ ವಿಕಾಸಕ್ಕೆ ಕಾರಣವಾದವು. ಹದಿನೇಳನೆಯ ಶತಮಾನದಲ್ಲಿ ಖ್ವಾಸಿ ಮುಹಮ್ಮದ್ ಅರಬಿಯು ಮಲಯಾಳದಲ್ಲಿ ರಚಿಸಿದ 'ಮೊಹಿಯುದ್ದೀನ್ಮಾಲ' ಹಾಗೂ ಹದಿನೆಂಟನೆಯ ಶತಮಾನದಲ್ಲಿ ಅರ್ನೋಸು ಪಾದಿರಿ ರಚಿಸಿದ 'ಪುತ್ತನ್‌ಪಾನ' ಎಂಬಿವುಗಳು ಮಲಯಾಳ ಭಾಷೆಯ ಪ್ರಗತಿಗೆ ಸಹಾಯಕವಾದುವು. ಇವುಗಳಲ್ಲದೆ ವಡಕ್ಕನ್ ಪಾಟ್ಟುಗಳ್, ತೆಕ್ಕನ್ ಪಾಟ್ಟುಗಳು, ತೊಯಿಲ್ ಪಾಟ್ಟುಗಳು (ಓಬೇಲೆ ಹಾಡುಗಳು), ನಾಡನ್ ಪಾಟ್ಟುಗಳು(ಜಾನಪದ ಗೀತೆಗಳು) ಇತ್ಯಾದಿಗಳು ಜನರ ಮೇಲೆ ಪ್ರಭಾವವನ್ನು ಬೀರಿದುವು.

**ಅರಬಿ ಮಲಯಾಳಂ**

ಕೇರಳದ ಮುಸ್ಲಿಮರಲ್ಲಿ ಪ್ರಚಾರದಲ್ಲಿದ್ದ ಮಿಶ್ರಭಾಷೆ (ಸಂಕರಭಾಷೆ)ಯು ಅರಬಿ ಮಲಯಾಳವಾಗಿದೆ. ಇದನ್ನು ಬರೆಯುವುದು ಅರಬೀ ಲಿಪಿಯಲ್ಲಾಗಿದೆ.

ವಿವಿಧ ರೀತಿಯ ಪಾಟ್ಟು(ಹಾಡು) ಗಳ ಸಾಲುಗಳನ್ನು ಸಂಗ್ರಹಿಸಿರಿ. ಈ ಸಾಲುಗಳನ್ನು ತರಗತಿಯಲ್ಲಿ ಹಾಡಿರಿ.



- ಮೇಲೆ ನೀಡಿರುವ ಚಿತ್ರಗಳನ್ನು ಗಮನಿಸಿರಿ. ಇದರಲ್ಲಿ ಯಾವೆಲ್ಲ ಕಲಾರೂಪಗಳಿವೆ ಎಂದು ಹೇಳಬಹುದೆ?

ಇವುಗಳು ಮಧ್ಯಕಾಲೀನ ಕೇರಳದಲ್ಲಿ ಅಭಿವೃದ್ಧಿಗೊಂಡ ಕಲಾರೂಪಗಳಾಗಿವೆ. ಆರಾಧನಾಲಯಗಳನ್ನು ಕೇಂದ್ರೀಕರಿಸಿ ನೃತ್ಯ, ಸಂಗೀತ ಮುಂತಾದ ಕಲೆಗಳು ಬೆಳೆದುಬಂದುವು.

ಕೂತ್, ಕೂಡಿಯಾಟ್ಟಂ, ಕಥಕ್ಕಳಿ ಮುಂತಾದ ಕಲೆಗಳು ದೇವಾಲಯಗಳಿಗೆ ಹೊಂದಿಕೊಂಡಿರುವ ಕೂತ್ತಂಬಲಗಳಲ್ಲಿ ಪ್ರದರ್ಶಿಸಲ್ಪಡುತ್ತಿದ್ದುವು. ಅವುಗಳನ್ನು ಕ್ಷೇತ್ರ

ಕಲೆಗಳೆಂದು ಕರೆಯುತ್ತಾರೆ. ಬನಗಳಲ್ಲಿಯೂ ಇತರ ಆರಾಧನಾಲಯಗಳಲ್ಲಿಯೂ ನಡೆಯುವ ತೆಯ್ಯಂ (ದೈವದಕೋಲ), ತಿರ, ಕಳಂಪಾಟ್ ಇತ್ಯಾದಿಗಳು ಅನುಷ್ಠಾನ ಕಲೆಗಳಾಗಿವೆ. ಅವುಗಳು ಕ್ಷೇತ್ರಕಲೆಗಳಿಗಿಂತ ಹೆಚ್ಚು ಜನಪ್ರಿಯವಾಗಿದ್ದುವು.

- ದೇವಾಲಯಗಳಲ್ಲಿ ಕಲೆಗಳು ಪ್ರದರ್ಶನಗೊಳ್ಳುವ ವೇದಿಕೆಯನ್ನು ಯಾವ ಹೆಸರಿನಿಂದ ಕರೆಯುತ್ತಿದ್ದರು?
- ಅನುಷ್ಠಾನ ಕಲೆಗಳು ಹೆಚ್ಚು ಜನಪ್ರಿಯವಾಗಿದ್ದವು ಎನ್ನಲು ಕಾರಣಗಳೇನು?

ಇವುಗಳಲ್ಲದೆ ವಿವಿಧ ಮತವಿಭಾಗಗಳ ಅನುಷ್ಠಾನ ಮತ್ತು ಆಚರಣೆಗಳ ಭಾಗವಾಗಿಯೂ ಕೆಲವೊಂದು ಕಲೆಗಳನ್ನು ಪ್ರದರ್ಶಿಸುತ್ತಿದ್ದರು. ಒಪ್ಪನ, ಮಾರ್ಗಂಕಳಿ, ಚವಿಟ್ಟುನಾಟಕ, ಮುಂತಾದವುಗಳು ಇದಕ್ಕೆ ಉದಾಹರಣೆಗಳಾಗಿವೆ.

## ವಿಜ್ಞಾನ

ವೈಜ್ಞಾನಿಕ ರಂಗದಲ್ಲೂ ಮಧ್ಯಕಾಲದಲ್ಲಿ ಕೇರಳವು ಉನ್ನತ ಪ್ರಗತಿಯನ್ನು ಸಾಧಿಸಿತ್ತು. ಶಂಕರನಾರಾಯಣರು ಪೆರುಮಾಳ್‌ರ ಕಾಲದಲ್ಲಿ ಪ್ರಧಾನ ಜ್ಯೋತಿಶಾಸ್ತ್ರಜ್ಞರಾಗಿದ್ದರು. ಇವರು 'ಶಂಕರನಾರಾಯಣೀಯಂ' ಎಂಬ ಜ್ಯೋತಿಶ್ಯಾಸ್ತ್ರಗ್ರಂಥವನ್ನು ರಚಿಸಿದರು. ಗಣಿತಶಾಸ್ತ್ರದಲ್ಲಿ 'ಸಂಗ್ರಾಮಮಾಧವನ್' ನೀಡಿದ ಕೊಡುಗೆಗಳು ಜಗತ್ತಿನ ಗಮನ ಸೆಳೆದುವು. ಆಯುರ್ವೇದ ಗ್ರಂಥವಾದ 'ಅಷ್ಟಾಂಗ ಹೃದಯ'ವನ್ನು ಆ ಕಾಲದಲ್ಲಿ ರಚಿಸಲಾಗಿತ್ತು. ಚರಿತ್ರೆ ಕಾವ್ಯಗಳಾದ 'ಮೂಷಿಕವಂಶ' ಹಾಗೂ 'ತುಹಾಫತಲ್ ಮುಜಾಹಿದೀ' ಎಂಬಿವುಗಳು ಮಧ್ಯಕಾಲದ ಪ್ರಧಾನ ಕೃತಿಗಳಾಗಿವೆ.

ಆ ಕಾಲದಲ್ಲಿ ವಿದ್ಯಾಲಯಗಳನ್ನು 'ಶಾಲೆಗಳು' ಎಂದು ಕರೆಯುತ್ತಿದ್ದರು. ಇವುಗಳು ದೇವಾಲಯಗಳಿಗೆ ಹೊಂದಿಕೊಂಡು ಕಾರ್ಯವೆಸಗುತ್ತಿದ್ದವು. ಬೌದ್ಧ ಕೇಂದ್ರಗಳೊಂದಿಗಿರುವ ವಿದ್ಯಾಲಯಗಳನ್ನು 'ಪಳ್ಳಿ'ಗಳೆಂದು ಕರೆಯುತ್ತಿದ್ದರು.



### ಶಾಲೆಗಳು

ಕೇರಳದಲ್ಲಿ ಆರಂಭಕಾಲದಲ್ಲಿದ್ದ ವಿದ್ಯಾಲಯಗಳನ್ನು ಶಾಲೆಗಳು ಎಂದು ಕರೆಯುತ್ತಿದ್ದರು. ಇವುಗಳು ಆರಾಧನಾಲಯಗಳೊಂದಿಗೆ ಸೇರಿಕೊಂಡಿದ್ದುವು. ಕಾಂತಲೂರ್ ಶಾಲೆ, ವಿಳಿಂಜಂಶಾಲೆ, ಪಾರ್ಥಿವಶೇಖರಪುರಂ ಶಾಲೆ ಇತ್ಯಾದಿಗಳು ಶಾಲೆಗಳಿಗೆ ಉದಾಹರಣೆಗಳಾಗಿವೆ.



ವೈಜ್ಞಾನಿಕ ರಂಗದಲ್ಲಿ ಮಧ್ಯಕಾಲೀನ ಕೇರಳದ ಕೊಡುಗೆಗಳನ್ನು ಸೇರಿಸಿ ಕೆಳಗೆ ಕೊಟ್ಟಿರುವ ಡಯಾಗ್ರಂನ್ನು ಭರ್ತಿಮಾಡಿರಿ.




ಹದಿನೆಂಟನೇ ಶತಮಾನದಲ್ಲಿ ಕೇರಳದಲ್ಲಿ ವಿಭಿನ್ನವಾದ ಆರ್ಥಿಕ - ಸಾಮಾಜಿಕ ವ್ಯವಸ್ಥೆಗಳು ರೂಪುಗೊಂಡವು. ಇದರೊಂದಿಗೆ ಕೇರಳದ ಭಾಷೆ, ಕಲೆ, ವಿಜ್ಞಾನ ಮೊದಲಾದುವುಗಳು ಸ್ವಂತಿಕೆಯನ್ನು ಪಡೆದುವು.

## ಕ್ರೋಡೀಕರಣ

- ತಾಮ್ರಶಾಸನಗಳು ಮಧ್ಯಕಾಲೀನ ಕೇರಳದ ಕುರಿತು ಮಾಹಿತಿಗಳನ್ನು ನೀಡುವ ಪ್ರಧಾನ ಪುರಾವೆಗಳಾಗಿವೆ.
- ಪೆರುಮಾಳರ ಆಡಳಿತ ಕಾಲದಲ್ಲಿ ಕೇರಳವು ಪ್ರತ್ಯೇಕವಾದ ಆಡಳಿತ ವಲಯವಾಗಿ ಬೆಳೆಯಿತು.
- ಕೃಷಿ ಮತ್ತು ವ್ಯಾಪಾರವು ಪೆರುಮಾಳರ ಕಾಲದ ಪ್ರಧಾನ ಆರ್ಥಿಕ ಮೂಲವಾಗಿತ್ತು.
- ಪೆರುಮಾಳರ ಆಡಳಿತವು ಅವನತಿ ಹೊಂದಿದಾಗ ನಾಡುವಾಳಿಗಳು ಅಧಿಕಾರವನ್ನು ಗಳಿಸಿಕೊಂಡರು.
- ನಾಡುವಾಳಿ ಆಡಳಿತ ಕೇಂದ್ರವು ಸ್ವರೂಪಗಳೆಂದು ಕರೆಯಲ್ಪಡುತ್ತಿತ್ತು.

- ಆಂತರಿಕ ಮತ್ತು ವಿದೇಶಿ ವ್ಯಾಪಾರವು ಬಲಗೊಂಡಿತಲ್ಲದೆ ಹೊಸ ಮಾರುಕಟ್ಟೆಗಳೂ ಬಂದರುಗಳೂ ಬೆಳೆದು ಬಂದವು.
- ಮಲಯಾಳ ಭಾಷೆಯು ವಿಕಾಸಗೊಂಡಿತು.
- ಸಾಹಿತ್ಯ, ಕಲೆ, ವಿಜ್ಞಾನ ಇತ್ಯಾದಿ ವಲಯಗಳು ಬೆಳವಣಿಗೆಯಾದುವು.

## ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ತಾಮ್ರಶಾಸನಗಳು ಮಧ್ಯಕಾಲೀನ ಕೇರಳದ ಕುರಿತು ಮಾಹಿತಿಗಳನ್ನು ನೀಡುವ ಪ್ರಧಾನ ಪುರಾವೆಗಳಾಗಿವೆ ಎಂಬುದನ್ನು ತಿಳಿದುಕೊಂಡು ವಿವರಿಸುವುದು.
- ಪೆರುಮಾಳರ ಆಡಳಿತ ಕಾಲದಲ್ಲಿ ಕೇರಳವು ಒಂದು ಪ್ರತ್ಯೇಕ ಆಡಳಿತ ವಲಯವಾಗಿ ಬೆಳೆದುಬಂತು ಎಂದು ತಿಳಿದುಕೊಂಡು ಮಂಡಿಸುವುದು.
- ಆಂತರಿಕ - ಬಂದರು ವ್ಯಾಪಾರದ (ವಿದೇಶ ವ್ಯಾಪಾರ) ಬೆಳವಣಿಗೆ ಇತ್ಯಾದಿಗಳನ್ನು ವಿಶ್ಲೇಷಿಸುವುದು.
- ಮಲಯಾಳ ಭಾಷೆ, ಸಾಹಿತ್ಯ, ವಿಜ್ಞಾನ ಎಂಬೀ ವಲಯಗಳ ಪ್ರಗತಿಯನ್ನು ವಿಶ್ಲೇಷಿಸುವುದು.
- ಕೇರಳದ ಕಲೆಗಳನ್ನು ತಿಳಿದುಕೊಂಡು ಅವುಗಳನ್ನು ಆಸ್ವಾದಿಸುವ ಮನೋಭಾವ ರೂಪುಗೊಳ್ಳುವುದು.

## ಮೌಲ್ಯನಿರ್ಣಯ ಮಾಡುವ

- ಪೆರುಮಾಳ ಕಾಲದಲ್ಲಿದ್ದ ಅಧಿಕಾರ ರಚನೆಯ ಕುರಿತಾಗಿ ಟಿಪ್ಪಣಿ ತಯಾರಿಸಿರಿ.
- ಕೇರಳದಲ್ಲಿ ಗ್ರಾಮಗಳ ಬೆಳವಣಿಗೆ ಹಾಗೂ ಕೃಷಿಯ ವ್ಯಾಪಿಸುವಿಕೆಯು ಹೇಗೆ ಪರಸ್ಪರ ಸಂಬಂಧವನ್ನು ಹೊಂದಿದೆ? ಚರ್ಚಿಸಿರಿ.
- ಮಧ್ಯಕಾಲೀನ ಕೇರಳದಲ್ಲಿ ಆಂತರಿಕ-ಬಂದರು ವ್ಯಾಪಾರದ ಕುರಿತು ಟಿಪ್ಪಣಿ ತಯಾರಿಸಿರಿ.
- ಕೇರಳದಿಂದ ರಫ್ತಾಗುತ್ತಿದ್ದ ಮತ್ತು ಕೇರಳಕ್ಕೆ ಆಮದಾಗುತ್ತಿದ್ದ ವಸ್ತುಗಳಾವುವೆಂದು ಕಂಡುಕೊಂಡು ಪಟ್ಟಿ ತಯಾರಿಸಿರಿ.

- ಮಲಯಾಳ ಭಾಷೆ ಮತ್ತು ಸಾಹಿತ್ಯ ಕ್ಷೇತ್ರದ ಬೆಳವಣಿಗೆಯ ಕುರಿತು ಪ್ರಬಂಧ ವೊಂದನ್ನು ತಯಾರಿಸಿರಿ.

## ಮುಂದುವರಿದ ಚಟುವಟಿಕೆಗಳು

- ಕೇರಳದಲ್ಲಿ ಅಸ್ತಿತ್ವದಲ್ಲಿದ್ದ ಪಾಟ್ಟು ಸಾಹಿತ್ಯದ ಸಾಲುಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಹಾಡಿರಿ.
- ಕೇರಳೀಯ ಕಲೆಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿರಿ.

## ಸ್ವಮೌಲ್ಯನಿರ್ಣಯ

| | ಪೂರ್ಣವಾಗಿ | ಭಾಗಿಕವಾಗಿ | ಉತ್ತಮಪಡಿಸಬೇಕು |
|---|---|---|---|
| ಪೆರುಮಾಳರ ಆಡಳಿತ ಕಾಲದಲ್ಲಿ ಕೇರಳವು ಒಂದು ಪ್ರತ್ಯೇಕ ಆಡಳಿತವಲಯವಾಗಿ ಬೆಳೆದುಬಂತು ಎಂಬ ತಿಳುವಳಿಕೆಯನ್ನು ಪಡೆದೆನು. | | | |
| ಮಧ್ಯಕಾಲೀನ ಕೇರಳದಲ್ಲಿ ಕೃಷಿ, ವ್ಯಾಪಾರ, ವಾಣಿಜ್ಯ ಇತ್ಯಾದಿಗಳ ಪ್ರಗತಿಯನ್ನು ತಿಳಿದುಕೊಳ್ಳಲು ಸಾಧ್ಯವಿದೆ. | | | |
| ಪೆರುಮಾಳರ ಆಡಳಿತದ ಪತನದೊಂದಿಗೆ ಸ್ವರೂಪಗಳೂ ನಾಡುವಾಳಿಗಳೂ ಅಧಿಕಾರಕ್ಕೆ ಬಂದವು ಎಂಬುದನ್ನು ವಿಶ್ಲೇಷಿಸಲು ಸಾಧ್ಯವಿದೆ. | | | |
| ಮಧ್ಯಕಾಲದಲ್ಲಿ ಸಂತೆಗಳೂ ಬಂದರುಗಳೂ ಬೆಳವಣಿಗೆಯಾಗಲು ಕಾರಣವಾದ ಹಿನ್ನಲೆಯನ್ನು ವಿಶ್ಲೇಷಿಸಲು ಸಾಧ್ಯವಿದೆ. | | | |
| ಸಾಹಿತ್ಯ, ಕಲೆ, ಭಾಷೆ ಇತ್ಯಾದಿ ವಲಯಗಳಲ್ಲುಂಟಾದ ಪ್ರಗತಿಯನ್ನು ವಿವರಿಸಲು ನನಗೆ ಸಾಧ್ಯವಿದೆ. | | | |
| | | | |



# 10 ಪ್ರಜಾಪ್ರಭುತ್ವ ಮತ್ತು ಹಕ್ಕುಗಳು

> ದೇಶದ ಎಲ್ಲಾ ಸಾರ್ವಭೌಮಕ್ಕೆದುರಾಗಿ ನಾನು
> ಪ್ರತಿಕ್ರಿಯೆ ವ್ಯಕ್ತಪಡಿಸಿರುವೆನು ಮತ್ತು ಕಾರ್ಯನಿರ್ವಹಿಸಿರುವೆನು.
> ನಾನು ಹೋರಾಡುತ್ತಿರುವುದು ಸ್ವಾತಂತ್ರ್ಯ, ಪ್ರಜಾಪ್ರಭುತ್ವ,
> ಸಹೋದರತೆ ಮತ್ತು ಸಮಾನತೆಯಿರುವ ರಾಷ್ಟ್ರಕ್ಕಾಗಿ.
> ಇದನ್ನು ಗಳಿಸುವುದೇ ನನ್ನ ಉದ್ದೇಶವಾಗಿದೆ....
> ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನೀವೂ ನಾವೂ ಸಮಾನರು. ಅಂತಹ ಒಂದು ಸಮಾನತೆಯಿಂದ ಕೂಡಿದ ಸಂವಿಧಾನವು ರೂಪುಗೊಳ್ಳುವುದಕ್ಕೆ ನೀವು ಭಯಪಡುತ್ತೀರಿ.
>
> ನೆಲ್ಸನ್ ಮಂಡೇಲ

ದಕ್ಷಿಣ ಆಫ್ರಿಕಾದಲ್ಲಿ ಪ್ರಜಾಪ್ರಭುತ್ವ ವಿರೋಧಿ ಆಡಳಿತ ವ್ಯವಸ್ಥೆಗೆ ಎದುರಾಗಿ ಹೋರಾಟವನ್ನು ಸಂಘಟಿಸಿದ ನೆಲ್ಸನ್ ಮಂಡೇಲರ ಮಾತುಗಳನ್ನು ಓದಿದಿರಲ್ಲವೇ? ಯಾವ ರೀತಿಯ ರಾಷ್ಟ್ರ ನಿರ್ಮಾಣಕ್ಕಾಗಿ ಮಂಡೇಲರು ಹೋರಾಡಿದರು?

### ನೆಲ್ಸನ್ ಮಂಡೇಲ



ದಕ್ಷಿಣ ಆಫ್ರಿಕಾದ ಟ್ರಾನ್ಸ್‌ಕೋಯಿ ಗ್ರಾಮದಲ್ಲಿ ಕಸೋಸ್ ಎಂಬ ಬುಡಕಟ್ಟು ಸಮುದಾಯದಲ್ಲಿ 1918 ಜುಲೈ 18ರಂದು ಜನಿಸಿದರು. ದಕ್ಷಿಣ ಆಫ್ರಿಕಾದಲ್ಲಿನ ಶೇಕಡಾ 80ರಷ್ಟು ಇರುವ ನೀಗ್ರೋ ವಂಶಜರ ಹಕ್ಕುಗಳ ಸಂರಕ್ಷಣೆಗಾಗಿ ಹೋರಾಡಿದರು. ಆಫ್ರಿಕನ್ ನ್ಯಾಷನಲ್ ಕಾಂಗ್ರೆಸಿನ ಮುಂಚೂಣಿಯ ಹೋರಾಟಗಾರರಾಗಿದ್ದರು. ದೇಶದ್ರೋಹ ಆಪಾದನೆಯ ಮೇಲೆ ಜೈಲು ಸೇರಿದ್ದ ಅವರು ಇಪ್ಪತ್ತಾರು ವರ್ಷ ಏಳು ತಿಂಗಳು ಹತ್ತು ದಿವಸಗಳನ್ನು ಜೈಲಿನಲ್ಲಿ ಕಳೆದರು. 1990 ಫೆಬ್ರವರಿ ಹನ್ನೊಂದರಂದು ಜೈಲಿನಿಂದ ಹೊರಬಂದ ಅವರು 1994 ಮೇ ಹತ್ತರಂದು ದಕ್ಷಿಣ ಆಫ್ರಿಕಾದ ಅಧ್ಯಕ್ಷರಾದರು. 2013 ಡಿಸೆಂಬರ್ 5 ರಂದು ತನ್ನ 95ನೇ ವಯಸ್ಸಿನಲ್ಲಿ ಅವರು ನಿಧನರಾದರು.

ಎಲ್ಲರನ್ನು ಸಮಾನರಾಗಿ ಪರಿಗಣಿಸುವ ಪ್ರಜಾಪ್ರಭುತ್ವ ವ್ಯವಸ್ಥೆಯು ಅವರ ಕನಸಾಗಿತ್ತು. ಪ್ರಜಾಪ್ರಭುತ್ವ ಎಂದರೇನೆಂದು ಈ ಹಿಂದಿನ ತರಗತಿಗಳಲ್ಲಿ ತಿಳಿದುಕೊಂಡಿರುವಿರಲ್ಲವೇ? ಎಲ್ಲೆಲ್ಲ ಪ್ರಜಾಪ್ರಭುತ್ವ ವಿರುದ್ಧವಾದ ಸರಕಾರಗಳು ಅಸ್ತಿತ್ವದಲ್ಲಿದ್ದವೋ ಅಲ್ಲೆಲ್ಲ ಪ್ರಜಾಪ್ರಭುತ್ವ ಪರವಾದ ಹೋರಾಟಗಳು ನಡೆದಿವೆ ಎಂದು ಚರಿತ್ರೆಯಿಂದ ನಾವು ತಿಳಿದುಕೊಂಡಿರುವೆವು. ಪ್ರಜಾಪ್ರಭುತ್ವ ರೀತಿಯ ಆಡಳಿತಕ್ಕಾಗಿ ನಡೆದ ಹೋರಾಟಗಳಲ್ಲಿ ಪ್ರಧಾನವಾಗಿರುವ ಒಂದು ಉದಾಹರಣೆಯನ್ನು ಈ ಕೆಳಗೆ ಕೊಡಲಾಗಿದೆ. ಹೆಚ್ಚಿನ ಉದಾಹರಣೆಯನ್ನು ಕಂಡುಕೊಂಡು ಪಟ್ಟಿಯನ್ನು ವಿಸ್ತರಿಸಿರಿ.

- ಭಾರತದ ಸ್ವಾತಂತ್ರ್ಯ ಹೋರಾಟ
- 
- 
- 

ಪ್ರಜಾಪ್ರಭುತ್ವ ವ್ಯವಸ್ಥೆಗೆ ಹೆಚ್ಚಿನ ಮಹತ್ವವು ಲಭಿಸುತ್ತಿರುವಾಗಲೂ ಕೆಲವು ದೇಶಗಳಲ್ಲಿ ಪ್ರಜಾಪ್ರಭುತ್ವೇತರ ಸರಕಾರಗಳೂ ಅಸ್ತಿತ್ವದಲ್ಲಿವೆ. ಯಾವ ಯಾವ ವಿಶೇಷತೆಗಳು ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯನ್ನು ಉಳಿದವುಗಳಿಂದ ಪ್ರತ್ಯೇಕಿಸುತ್ತವೆ? ಬೇರೆ ಯಾವೆಲ್ಲ ರೀತಿಯ ಆಡಳಿತ ಕ್ರಮಗಳು ಜಗತ್ತಿನಲ್ಲಿ ಅಸ್ತಿತ್ವದಲ್ಲಿವೆ? ಕೆಳಗಿನ ವಾರ್ತಾಶೀರ್ಷಿಕೆಗಳನ್ನು ಪರಿಶೀಲಿಸಿರಿ.




ವಾರ್ತೆಗಳಲ್ಲಿ ಕೊಟ್ಟಿರುವ ದೇಶಗಳು ಹಾಗೂ ಅಲ್ಲಿನ ಸರಕಾರಗಳನ್ನು ಈ ಕೆಳಗಿನಂತೆ ಕ್ರಮೀಕರಿಸಬಹುದು.

| ದೇಶ | ಸರಕಾರ |
|---|---|
| ಭೂತಾನ್ | ರಾಜಾಡಳಿತ |
| ಭಾರತ | ಪ್ರಜಾಪ್ರಭುತ್ವ ಆಡಳಿತ |
| ಬ್ರೂನೈ | ಸುಲ್ತಾನ ಆಡಳಿತ |
| ಮ್ಯಾನ್ಮಾರ್ | ಸೈನಿಕ ಆಡಳಿತ |



ಇನ್ನಷ್ಟು ದೇಶಗಳನ್ನೂ ಅಲ್ಲಿನ ಸರಕಾರಗಳನ್ನೂ ಕಂಡುಕೊಂಡು ಪಟ್ಟಿಯನ್ನು ವಿಸ್ತರಿಸಿರಿ.

ಮೇಲೆ ಕೊಟ್ಟಿರುವ ಸರಕಾರಗಳೊಳಗಿನ ವ್ಯತ್ಯಾಸಗಳು ಯಾವುವು? ಭೂತಾನ್‌ನ ರಾಜ ಮತ್ತು ಬ್ರೂನೈಯ ಸುಲ್ತಾನರು ವಂಶಪರಂಪರೆಯಿಂದ ಅಧಿಕಾರಕ್ಕೆ ಬರುವರು. ಇವುಗಳು ಪ್ರಜಾಪ್ರಭುತ್ವೇತರ ಸರಕಾರಕ್ಕೆ ಉದಾಹರಣೆಯಾಗಿವೆ. ಸೈನಿಕ ಆಡಳಿತವೂ ಪ್ರಜಾಪ್ರಭುತ್ವೇತರ ಸರಕಾರದಲ್ಲಿ ಒಳಪಡುತ್ತದೆ. ಪ್ರಜಾಪ್ರಭುತ್ವೇತರ ಸರಕಾರ ಎಂಬುದು ಒಬ್ಬ ಸರ್ವಾಧಿಕಾರಿಯೋ ಸೇನೆಯ ಮುಖ್ಯಸ್ಥನೋ ರಾಜನೋ ಸುಲ್ತಾನನೋ ಸ್ವೇಚ್ಛೆಯಿಂದ ನಡೆಸುವ ಆಡಳಿತ ಕ್ರಮವಾಗಿದೆ ಎಂದು ಅರ್ಥೈಸಬಹುದು. ಭಾರತದಲ್ಲಿ ಪ್ರಜಾಪ್ರಭುತ್ವ ರೀತಿಯ ಸರಕಾರವಿದೆ ಎಂದು ನಿಮಗೆ ತಿಳಿದಿದೆಯಲ್ಲವೆ? ಜನಪ್ರತಿನಿಧಿಗಳು ನಡೆಸುವ ಆಡಳಿತವನ್ನು ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆ ಎನ್ನುವರು. ಪ್ರಜಾಪ್ರಭುತ್ವ ಮತ್ತು ಪ್ರಜಾಪ್ರಭುತ್ವೇತರ ಸರಕಾರಗಳ ವಿಶೇಷತೆಗಳನ್ನು ಕೆಳಗಿನ ಪಟ್ಟಿಯಿಂದ ಕಂಡುಕೊಳ್ಳಿರಿ.

**ಸರಕಾರ**

| ಪ್ರಜಾಪ್ರಭುತ್ವ ಸರಕಾರ | ಪ್ರಜಾಪ್ರಭುತ್ವೇತರ ಸರಕಾರ |
|---|---|
| ಜನರು ಚುನಾಯಿಸಿದ ಪ್ರತಿನಿಧಿಗಳ ಆಡಳಿತ | ಉತ್ತರಾಧಿಕಾರವು ಪರಂಪರಾಗತವಾಗಿ ಅಥವಾ ಕಸಿದುಕೊಳ್ಳುವಿಕೆಯ ಮೂಲಕ ಲಭಿಸುತ್ತದೆ. |
| ಜನರಿಗೆ ಅಭಿಪ್ರಾಯ ಸ್ವಾತಂತ್ರ್ಯ ಹಾಗೂ ಹಕ್ಕುಗಳನ್ನು ನಿಯಮಾನುಸಾರವಾಗಿ ಖಾತರಿಪಡಿಸಲಾಗುವುದು. | ಜನರಿಗೆ ಅಭಿಪ್ರಾಯ ಸ್ವಾತಂತ್ರ್ಯವೂ ಹಕ್ಕುಗಳೂ ಪರಿಮಿತವಾಗಿವೆ. |
| ಆಡಳಿತಾಧಿಕಾರಿಗಳೂ ನಿಯಮಗಳಿಗೆ ವಿಧೇಯರಾಗಿ ಕಾರ್ಯನಿರ್ವಹಿಸುತ್ತಾರೆ. | ಆಡಳಿತಾಧಿಕಾರಿಯು ನಿಯಮಗಳಿಗೆ ಅತೀತನಾಗಿರುತ್ತಾನೆ. ಯಾಕೆಂದರೆ ಅವನ ತೀರ್ಮಾನವೇ ನಿಯಮವಾಗಿರುತ್ತದೆ. |



ಪ್ರಜಾಪ್ರಭುತ್ವ ಮತ್ತು ಪ್ರಜಾಪ್ರಭುತ್ವೇತರ ಸರಕಾರಗಳ ವಿಶೇಷತೆಗಳನ್ನು ಹೋಲಿಸಿ ಟಿಪ್ಪಣಿ ತಯಾರಿಸಿರಿ.

ಪ್ರಜಾಪ್ರಭುತ್ವ ಮತ್ತು ಪ್ರಜಾಪ್ರಭುತ್ವೇತರ ಸರಕಾರಗಳ ವಿಶೇಷತೆಗಳನ್ನು ತಿಳಿದುಕೊಂಡಿರಲ್ಲವೇ? ಜಗತ್ತಿನ ಹೆಚ್ಚಿನ ದೇಶಗಳಲ್ಲಿ ಪ್ರಜಾಪ್ರಭುತ್ವ ಆಡಳಿತ ಕ್ರಮವಿದೆ. ಇತರ ಆಡಳಿತ ಕ್ರಮಗಳಿಗಿಂತ, ಪ್ರಜಾಪ್ರಭುತ್ವ ಆಡಳಿತ ಕ್ರಮದಲ್ಲಿರುವ ಹಿರಿಮೆಗಳು ಇದಕ್ಕೆ ಕಾರಣಗಳಾಗಿವೆ.

## ಪ್ರಜಾಪ್ರಭುತ್ವ ಸರಕಾರದ ಹಿರಿಮೆಗಳು

- ಜನಾಭಿಪ್ರಾಯಕ್ಕೆ ಮನ್ನಣೆ
- ವ್ಯಕ್ತಿ ಸ್ವಾತಂತ್ರ್ಯ ಸಂರಕ್ಷಣೆ
- ಆಡಳಿತಾಧಿಕಾರಿಗಳೂ ಜನರೂ ಒಂದೇ ನಿಯಮಗಳಿಗೆ ವಿಧೇಯರಾಗಿರುವರು.
- ಆಡಳಿತಾಧಿಕಾರಿಗಳು ಜನರಿಗೆ ಋಣಿಯಾಗಿರುವರು.



ಯಾವ ರೀತಿಯ ಆಡಳಿತಕ್ರಮವಿರುವ ದೇಶದಲ್ಲಿ ವಾಸಿಸಲು ನೀವು ಇಷ್ಟಪಡುವಿರಿ? ಕಾರಣವನ್ನು ವಿಶದೀಕರಿಸಿರಿ.

ಪ್ರಜಾಪ್ರಭುತ್ವ ಸರಕಾರಗಳನ್ನೂ ಪ್ರಜಾಪ್ರಭುತ್ವೇತರ ಸರಕಾರಗಳನ್ನೂ ಪರಿಚಯಿಸಿದಿರಲ್ಲವೆ? ಕೆಳಗೆ ನೀಡಿರುವ ಹೇಳಿಕೆಗಳನ್ನು ಪರಿಶೀಲಿಸಿ, ಪ್ರಜಾಪ್ರಭುತ್ವ ಆಡಳಿತ ಕ್ರಮಕ್ಕೆ ಸಂಬಂಧಿಸಿದವುಗಳನ್ನು ☑ ಗುರುತಿನಿಂದಲೂ ಅಲ್ಲದವುಗಳನ್ನು ☒ಗುರುತಿನಿಂದಲೂ ಸೂಚಿಸಿರಿ.

- ನಿರ್ದಿಷ್ಟವಾದ ಸಮಯಗಳ ಅಂತರದಲ್ಲಿ ಚುನಾವಣೆಯು ನಡೆಯುವುದು. ☐
- ವಂಶಪರಂಪರೆಯಿಂದ ಹಸ್ತಾಂತರಿಸಲ್ಪಡುವ ಆಡಳಿತ ಕ್ರಮ ☐
- ಜನಪ್ರತಿನಿಧಿಗಳ ಆಡಳಿತ ☐
- ರಾಜ/ಸುಲ್ತಾನ/ಸೇನೆಯ ಮುಖ್ಯಸ್ಥನ ಆಡಳಿತ ☐
- ವ್ಯಕ್ತಿ ಸ್ವಾತಂತ್ರ್ಯ ಇರುತ್ತದೆ. ☐
- ನ್ಯಾಯಾಲಯಕ್ಕೆ ನಿಯಂತ್ರಣ ☐
- ಜನಾಭಿಪ್ರಾಯಕ್ಕೆ ಮನ್ನಣೆ ☐

ಪ್ರಜಾಪ್ರಭುತ್ವ ಸರಕಾರವು ಜನರಿಗೆ ಖಾತರಿಪಡಿಸುವ ಹಕ್ಕುಗಳು ಈ ಆಡಳಿತ ಕ್ರಮವನ್ನು ಇತರ ಆಡಳಿತ ಕ್ರಮಗಳಿಂದ ಪ್ರತ್ಯೇಕಿಸುತ್ತದೆ. ಪ್ರಜೆಗಳಿಗೆ ಪ್ರಜಾಪ್ರಭುತ್ವ


ರೀತಿಯ ಜೀವನ ಸಾಧ್ಯವಾಗಬೇಕಾದರೆ ನಾಗರಿಕ ಹಕ್ಕುಗಳನ್ನು ಖಾತರಿಪಡಿಸಬೇಕು. ಪ್ರಜಾಪ್ರಭುತ್ವ ದೇಶವಾದ ಭಾರತದಲ್ಲಿ ನಮಗೆ ಸಂವಿಧಾನವು ನೀಡಿರುವ ಕೆಲವು ಹಕ್ಕುಗಳನ್ನು ಕೆಳಗೆ ಕೊಡಲಾಗಿದೆ.

- ಜೀವಿಸುವ ಹಕ್ಕು
- ಶೈಕ್ಷಣಿಕ ಹಕ್ಕು
- ಅಭಿಪ್ರಾಯ ಸ್ವಾತಂತ್ರ್ಯ
- ಸಂಘಟಿಸುವ ಸ್ವಾತಂತ್ರ್ಯ

ಈ ಹಕ್ಕುಗಳು ಎಲ್ಲಾ ದೇಶಗಳ ಜನರಿಗೆ ಲಭಿಸುತ್ತಿವೆಯೇ? ಹಕ್ಕುಗಳು ಫಲಪ್ರದವಾಗಿ ಸಂರಕ್ಷಿಸಲ್ಪಡುವುದು ಪ್ರಜಾಪ್ರಭುತ್ವ ದೇಶಗಳಲ್ಲಿ ಮಾತ್ರವಾಗಿದೆ. ಕೆಳಗೆ ನೀಡಿರುವ ಬ್ಲೋಗ್ ವಾಕ್ಯಗಳನ್ನು ಗಮನಿಸಿರಿ.ಸ್ವ




ಬಾಲ್ಯಕಾಲದಿಂದಲೇ ಯುದ್ಧಭೂಮಿಯಲ್ಲಿ ಬದುಕಬೇಕಾಗಿ ಬಂದ 16 ವರ್ಷದ ಪ್ಯಾಲೆಸ್ತೀನ್ ಹುಡುಗಿಯೊಬ್ಬಳ ಬ್ಲಾಗ್ ಪುಟವನ್ನು ಮೇಲೆ ಕೊಡಲಾಗಿದೆ. ಕನಸು ಕಾಣಲೂ ಅವಕಾಶ ನೀಡದಂತೆ ಯುದ್ಧವು ಫರಾ ಬಕರ್‌ನ ಎಲ್ಲಾ ನಿರೀಕ್ಷೆಗಳನ್ನು ನಾಶಮಾಡಿತು. ಇದೇ ರೀತಿಯಲ್ಲಿ ಸ್ವಾತಂತ್ರ್ಯ, ಶಾಂತಿ, ಹಕ್ಕುಗಳು ಎಂಬ ಪದಗಳ ಅರ್ಥವನ್ನೇ ತಿಳಿಯದ ಅನೇಕ ಜನರು ಈ ಜಗತ್ತಿನಲ್ಲಿರುವರು. ಹಕ್ಕುಗಳೆಂದರೇನು? ಒಬ್ಬ ಪೌರನಿಗೆ ಉತ್ತಮ ಜೀವನವನ್ನು ನಡೆಸಲೂ ತನ್ನ ಶಕ್ತಿ ಸಾಮರ್ಥ್ಯವನ್ನು ವಿಕಾಸಗೊಳಿಸಲೂ ಸಹಾಯಕವಾಗುವ ರೀತಿಯಲ್ಲಿ ಅವನಿಗೆ ಸಮಾಜವೂ ದೇಶವೂ ಖಾತರಿಪಡಿಸುವ ಸಂದರ್ಭಗಳೇ ಹಕ್ಕುಗಳಾಗಿವೆ.



ಹಕ್ಕುಗಳ ಸಂರಕ್ಷಣೆಗೆ ಅಗತ್ಯವಾದ ಎಲ್ಲಾ ರೀತಿಯ ಕ್ರಮಗಳನ್ನು ಎಲ್ಲಾ ದೇಶಗಳ ಸರಕಾರಗಳು ಕೈಗೊಳ್ಳುತ್ತವೆ. ಪ್ರತಿಯೊಂದು ರಾಷ್ಟ್ರದ ಸರಕಾರವು ತನ್ನ ಸಂವಿಧಾನದಲ್ಲಿ ಪ್ರಜೆಗಳಿಗೆ ಖಾತರಿಪಡಿಸಿದ ಹಕ್ಕುಗಳ ಪಟ್ಟಿಯನ್ನು ಹಕ್ಕು ಪತ್ರ ಎಂದು ಕರೆಯುತ್ತಾರೆ. ಭಾರತದಲ್ಲಿ ಇದನ್ನು ಮೂಲಭೂತ ಹಕ್ಕುಗಳು ಎಂದು ಕರೆಯುತ್ತಾರೆ.

## ಮಾನವಹಕ್ಕುಗಳು




### ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ಘೋಷಣೆ

"ಎಲ್ಲಾ ಮಾನವರೂ ಸ್ವತಂತ್ರರಾಗಿ ಜನಿಸುತ್ತಾರೆ. ಸ್ಥಾನ ಮತ್ತು ಹಕ್ಕುಗಳಲ್ಲಿ ಸಮಾನತೆ ಪಡೆಯುತ್ತಾರೆ. ಅವರು ಬುದ್ಧಿ ಮತ್ತು ಆತ್ಮಸಾಕ್ಷಿಯಿಂದ ಅನುಗ್ರಹೀತರಾಗಿ ಪರಸ್ಪರ ಸಹೋದರತೆಯನ್ನು ಬೆಳೆಸಲು ಬದ್ಧರಾಗುತ್ತಾರೆ."

ಹಕ್ಕುಗಳ ಸಂರಕ್ಷಣೆಗಾಗಿ ವಿವಿಧೆಡೆಗಳಲ್ಲಿ ಪ್ರಯತ್ನಗಳು ಸಾಗುತ್ತಿರುವಂತೆಯೇ, ಇನ್ನೊಂದೆಡೆ ಮೇಲೆ ಸೂಚಿಸಿದಂತೆ ಹಕ್ಕುಗಳ ಉಲ್ಲಂಘನೆಯು ನಡೆಯುತ್ತಿದೆ. ಆಧುನಿಕ ಜಗತ್ತಿನಲ್ಲಿ ಹಕ್ಕುಗಳನ್ನು ಸಾಮಾನ್ಯವಾಗಿ ಮಾನವಹಕ್ಕುಗಳು ಎಂಬರ್ಥದಲ್ಲಿ ನಿರ್ವಹಿಸಲಾಗುತ್ತಿದೆ. ಮನುಕುಲದ ಸದಸ್ಯ ಎಂಬ ನೆಲೆಯಲ್ಲಿ ಎಲ್ಲರಿಗೂ ಸಮಾನವಾಗಿ ಸಿಗಬೇಕಾದ ಅವಕಾಶಗಳು ಮಾನವಹಕ್ಕುಗಳಾಗಿವೆ. 1948 ಡಿಸೆಂಬರ್ ಹತ್ತರಂದು ನಡೆದ ಅಂತಾರಾಷ್ಟ್ರೀಯ ಮಾನವಹಕ್ಕುಗಳ ಘೋಷಣೆಯಲ್ಲಿ ಸೇರಿಸಿಕೊಂಡಿರುವ ಕೆಲವು ಮಾನವಹಕ್ಕುಗಳನ್ನು ಕೆಳಗೆ ನೀಡಲಾಗಿದೆ.

- ಜೀವಿಸುವ ಹಕ್ಕು
- ಸ್ವಾತಂತ್ರ್ಯದ ಹಕ್ಕು
- ಸಂಘಟಿಸುವ ಸ್ವಾತಂತ್ರ್ಯ
- ಉದ್ಯೋಗದ ಹಕ್ಕು
- ಸಂಸ್ಕೃತಿ, ಭಾಷೆ, ಲಿಪಿಯನ್ನು ಸಂರಕ್ಷಿಸುವ ಸ್ವಾತಂತ್ರ್ಯ

ಮಾನವಹಕ್ಕು ಸಂರಕ್ಷಣೆಗಾಗಿ ಭಾರತ ಸರಕಾರವು ರಾಷ್ಟ್ರೀಯ ಮಟ್ಟದಲ್ಲಿ ಅನೇಕ ಕ್ರಮಗಳನ್ನು ಕೈಗೊಂಡಿದೆ. ಇವುಗಳಲ್ಲಿ ರಾಷ್ಟ್ರೀಯ ಮಾನವಹಕ್ಕುಗಳ ಆಯೋಗ ಮತ್ತು ರಾಜ್ಯ ಮಾನವಹಕ್ಕುಗಳ ಆಯೋಗದ ರೂಪೀಕರಣವು ಪ್ರಧಾನವಾದವುಗಳಾಗಿವೆ.



ಜೀವಿಸುವ ಹಕ್ಕು ಎಂದರೆ ಘನತೆಯಿಂದ ಕೂಡಿದ ಜೀವನ ಎಂದರ್ಥ. ಶುದ್ಧ ವಾಯು, ಶುದ್ಧಜಲ, ಅಗತ್ಯವಿರುವ ಪೋಷಕಾಹಾರ ಇವುಗಳು ಜೀವಿಸುವ ಹಕ್ಕಿನಲ್ಲಿ ಒಳಗೊಂಡಿವೆ.



ಮಾನವಹಕ್ಕು ದಿನಾಚರಣೆಗೆ ಸಂಬಂಧಿಸಿ ಶಾಲಾ ಅಸೆಂಬ್ಲಿಯಲ್ಲಿ ಮಂಡಿಸಲು ಭಾಷಣವೊಂದನ್ನು ತಯಾರಿಸಿರಿ.

## ರಾಷ್ಟ್ರೀಯ ಮಾನವಹಕ್ಕುಗಳ ಆಯೋಗ

ಮಾನವಹಕ್ಕುಗಳ ಆಯೋಗದ ರೂಪೀಕರಣವು ಮಾನವಹಕ್ಕುಗಳ ಸಂರಕ್ಷಣೆಗಾಗಿ, ರಾಷ್ಟ್ರೀಯ ಮಟ್ಟದಲ್ಲಿ ಕೈಗೊಂಡ ಪ್ರಧಾನ ತೀರ್ಮಾನವಾಗಿದೆ. 1993ರಲ್ಲಿ ಪಾರ್ಲಿಮೆಂಟ್ ಜಾರಿಗೊಳಿಸಿದ ಮಾನವಹಕ್ಕು ಸಂರಕ್ಷಣಾ ನಿಯಮದ ಆಧಾರದಲ್ಲಿ ಈ ಆಯೋಗವನ್ನು ರೂಪಿಸಲಾಗಿದೆ. ಈ ಆಯೋಗದಲ್ಲಿ ಅಧ್ಯಕ್ಷನನ್ನು ಒಳಗೊಂಡಂತೆ ಐದು ಮಂದಿ ಸದಸ್ಯರಿರುವರು. ಸುಪ್ರೀಂಕೋರ್ಟಿನ ಓರ್ವ ನಿವೃತ್ತ ಮುಖ್ಯನ್ಯಾಯಾಧೀಶರು ಈ ಆಯೋಗದ ಅಧ್ಯಕ್ಷರಾಗಿರುವರು.



ಜಸ್ಟಿಸ್ ರಂಗನಾಥ ಮಿಶ್ರ
(ಪ್ರಥಮ ಚೆಯರ್‌ಮೇನ್)

### ರಾಷ್ಟ್ರೀಯ ಮಾನವಹಕ್ಕು ಆಯೋಗದ ಜವಾಬ್ದಾರಿಗಳು

ಮಾನವಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದ ದೂರುಗಳನ್ನು ಅನ್ವೇಷಣೆ ಮಾಡುವುದು.

ಕಾರಾಗೃಹಗಳನ್ನು ಸಂದರ್ಶಿಸಿ ಅಲ್ಲಿ ಖೈದಿಗಳಿಗಿರುವ ಜೀವನ ಸೌಕರ್ಯದ ಕುರಿತು ಮಾಹಿತಿಯನ್ನು ಸಂಗ್ರಹಿಸಿ ಶಿಫಾರಸು ನೀಡುವುದು.

ಮಾನವಹಕ್ಕುಗಳ ಸಂರಕ್ಷಣೆಗಾಗಿ ಯೋಗ್ಯವಾದ ಸಲಹೆ ಸೂಚನೆಗಳನ್ನು ನೀಡುವುದು.

ಮಾನವಹಕ್ಕುಗಳ ಸಂರಕ್ಷಣೆಗಾಗಿ ಕೆಲಸಮಾಡುವ ಸ್ವಯಂಸೇವಾ ಸಂಘಟನೆಗಳನ್ನು ಪ್ರೋತ್ಸಾಹಿಸುವುದು.

## ರಾಜ್ಯ ಮಾನವಹಕ್ಕುಗಳ ಆಯೋಗ

ಪ್ರತಿಯೊಂದು ರಾಜ್ಯದಲ್ಲಿಯೂ ರಾಜ್ಯ ಮಾನವಹಕ್ಕುಗಳ ಆಯೋಗವನ್ನು ರೂಪಿಸಲಾಗಿದೆ. ಕೇರಳ ರಾಜ್ಯ ಮಾನವಹಕ್ಕುಗಳ ಆಯೋಗವು 1998ರಲ್ಲಿ ರೂಪುಗೊಂಡಿತು. ಓರ್ವ ಅಧ್ಯಕ್ಷ ಮತ್ತು ಇಬ್ಬರು ಸದಸ್ಯರನ್ನು ಈ ಆಯೋಗವು ಒಳಗೊಂಡಿದೆ. ರಾಷ್ಟ್ರೀಯ ಮಾನವಹಕ್ಕು ಆಯೋಗದಲ್ಲಿ ನಿಕ್ಷಿಪ್ತವಾದ ಜವಾಬ್ದಾರಿಗಳೇ ರಾಜ್ಯ ಮಾನವಹಕ್ಕು ಆಯೋಗಕ್ಕೂ ಇದೆ. ಮಾನವಹಕ್ಕುಗಳು ನಿಷೇಧಿಸಲ್ಪಟ್ಟ ಸಂದರ್ಭಗಳಲ್ಲಿ ಈ ಆಯೋಗದ ಮೊರೆಹೋಗಬಹುದು.

## ಮಕ್ಕಳ ಹಕ್ಕುಗಳು






ಮಕ್ಕಳ ಕೆಲವು ಹಕ್ಕುಗಳನ್ನು ಮೇಲೆ ಕೊಡಲಾಗಿದೆ. ಮಕ್ಕಳಿಗೆ ವಿಶೇಷವಾದ ಹಕ್ಕುಗಳನ್ನು ನೀಡಲು ಕಾರಣಗಳೇನು? ಮಕ್ಕಳ ಹಕ್ಕುಗಳು ಯಾವುವು? ಬಾಲ್ಯಕಾಲದ ಶಾರೀರಿಕವೂ ಮಾನಸಿಕವೂ ಆದ ಪ್ರತ್ಯೇಕತೆಗಳು ಮಕ್ಕಳನ್ನು ವಿಶೇಷ ಪರಿಗಣನೆಗೆ ಅರ್ಹರನ್ನಾಗಿಸುತ್ತವೆ. ಆದ್ದರಿಂದಲೇ ಮಕ್ಕಳ ಹಕ್ಕು ಸಂರಕ್ಷಣೆಯು ಅತೀ ಪ್ರಧಾನವಾಗಿದೆ. ಶಿಕ್ಷಣವು ಮಕ್ಕಳ ಪ್ರಧಾನ ಹಕ್ಕಾಗಿದೆ. 2009ರಲ್ಲಿ ಪಾರ್ಲಿಮೆಂಟ್ ಜಾರಿಗೊಳಿಸಿದ ಶಿಕ್ಷಣ ಹಕ್ಕು ನಿಯಮ (ಆರ್.ಟಿ.ಇ. ಆಕ್ಟ್)ವು ಇದನ್ನು ಬೊಟ್ಟುಮಾಡಿ ತೋರಿಸುತ್ತದೆ.

6ರಿಂದ 14ವರ್ಷ ಪ್ರಾಯದ ವರೆಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಖಾತರಿಪಡಿಸಬೇಕು. ಕಲಿಕಾ ವಾತಾವರಣ ಮತ್ತು ಮೂಲಭೂತ ಸೌಕರ್ಯಗಳು ಮಕ್ಕಳ ಹಕ್ಕುಗಳಾಗಿವೆ.

ಶಿಕ್ಷಣದ ಹಕ್ಕು ಮಕ್ಕಳ ಹಕ್ಕೆಂದು ಅರ್ಥವಾಯಿತಲ್ಲವೇ. ಇನ್ನಷ್ಟು ಹಕ್ಕುಗಳನ್ನು ಸೇರಿಸಿ ಪಟ್ಟಿಯನ್ನು ಪೂರ್ತಿಗೊಳಿಸಿರಿ.

- ಕಷ್ಟವನ್ನು ಎದುರಿಸುವ, ಸಂರಕ್ಷಣೆಯನ್ನು ಪಡೆಯುವ ಹಾಗೂ ಸಂಪೂರ್ಣ ಪ್ರಗತಿಯನ್ನು ಹೊಂದುವ ಹಕ್ಕು.
- ಮಾನಸಿಕ ಹಾಗೂ ದೈಹಿಕ ದೌರ್ಜನ್ಯಗಳಿಂದ ಸಂರಕ್ಷಣೆ ಮತ್ತು ಶುಶ್ರೂಷೆ ಪಡೆಯುವ ಹಕ್ಕು
- 
- 
- 

### ಮಕ್ಕಳ ಹಕ್ಕುಗಳ ಒಪ್ಪಂದ

"ಮಾನವರು ಉತ್ತಮವಾದುದೆಲ್ಲವನ್ನೂ ಮಕ್ಕಳಿಗೆ ಒದಗಿಸಲು ಜವಾಬ್ದಾರರಾಗಿರುವರು. ಸಂತೋಷ, ಪರಸ್ಪರ ಸಹಮತದಿಂದ ಕೂಡಿದ ಗೃಹವಾತಾವರಣದಲ್ಲಿ, ಶಿಶುವಾತ್ಸಲ್ಯವನ್ನು ಅನುಭವಿಸಿ ಬೆಳೆಯುವುದು ಹಾಗೂ ಸ್ವಾತಂತ್ರ್ಯ, ಶಾಂತಿ, ಸಮಾಧಾನ, ಸಹಿಷ್ಣುತೆ, ಸಮಾನತೆ, ಸಹಾನುಭೂತಿ ಎಂಬೀ ಆಶಯಗಳ ಅಂತಃಸತ್ವವನ್ನು ಮನದಟ್ಟುಮಾಡಿಕೊಂಡು ಬೆಳವಣಿಗೆಯನ್ನು ಹೊಂದಬೇಕು."





ಮಕ್ಕಳ ಹಕ್ಕುಗಳ ಘೋಷಣೆಯು ನೆಲೆನಿಂತಿರುವಾಗಲೇ ಇನ್ನೊಂದೆಡೆಯಲ್ಲಿ ಅವರು ವಿವಿಧ ರೀತಿಯಲ್ಲಿ ಶೋಷಣೆಗೆ ಒಳಗಾಗುತ್ತಿದ್ದಾರೆ.

ಮಕ್ಕಳ ಹಕ್ಕುಗಳನ್ನು ಸಂರಕ್ಷಿಸುವುದಕ್ಕಾಗಿ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದಲ್ಲಿ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ. ರಾಷ್ಟ್ರೀಯ ಮಕ್ಕಳ ಹಕ್ಕುಗಳ ಆಯೋಗ ಮತ್ತು ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ರೂಪೀಕರಣವು ಇವುಗಳಲ್ಲಿ ಅತ್ಯಂತ ಪ್ರಧಾನವಾದವುಗಳಾಗಿವೆ.

### ಕೈಲಾಸ ಸತ್ಯಾರ್ಥಿ



2014ರಲ್ಲಿ ಮಲಾಲಳೊಂದಿಗೆ ಶಾಂತಿಗಿರುವ ನೋಬೆಲ್ ಪ್ರಶಸ್ತಿಯನ್ನು ಪಡೆದುಕೊಂಡರು. ಇವರು ಬಚ್‌ಪನ್ ಬಚಾವೊ ಆಂದೋಲನ ಎಂಬ ಸಂಘಟನೆಯ ಮೂಲಕ ಬಾಲಕಾರ್ಮಿಕತನದ ವಿರುದ್ಧ ಕಾರ್ಯನಿರ್ವಹಿಸುತ್ತಿದ್ದಾರೆ.

**ಮಲಾಲ ಯೂಸಫ್ ಝಾಯಿ**



ಹೆಣ್ಮಕ್ಕಳ ಶಿಕ್ಷಣಕ್ಕೆ ಬೇಕಾಗಿ ಹೋರಾಡಿದ ಕಾರಣ ಇವರಿಗೆ 17ನೇ ವಯಸ್ಸಿನಲ್ಲಿ ಶಾಂತಿಗಿರುವ ನೋಬೆಲ್ ಪ್ರಶಸ್ತಿ ಲಭಿಸಿತು.

ಮಕ್ಕಳ ಹಕ್ಕುಗಳು ಉಲ್ಲಂಘನೆಯಾದ ಸಂದರ್ಭದಲ್ಲಿ ಮಕ್ಕಳ ಹಕ್ಕುಗಳ ಆಯೋಗವನ್ನು ಸಮೀಪಿಸುವುದಕ್ಕೂ ದೂರು ನೀಡುವುದಕ್ಕೂ ಅವಕಾಶವಿದೆ.

## ಮಹಿಳೆಯರ ಹಕ್ಕುಗಳು




ಮೇಲೆ ನೀಡಿರುವ ವಾರ್ತಾತುಣುಕುಗಳನ್ನು ಗಮನಿಸಿರಿ. ಇವುಗಳು ಮಹಿಳೆಯರ ಹಕ್ಕುಗಳ ಸಂರಕ್ಷಣೆಗಾಗಿರುವ ಕೆಲವು ಕ್ರಮಗಳಾಗಿವೆ. ಮಹಿಳೆಯರ ಮೇಲಿನ ಪಕ್ಷಪಾತವನ್ನು ಕೊನೆಗೊಳಿಸುವ ಸಲುವಾಗಿ ಮತ್ತು ಮಹಿಳೆಯರ ಅಭಿವೃದ್ಧಿಯನ್ನು ಗುರಿಯಾಗಿಟ್ಟುಕೊಂಡು 1979ರಲ್ಲಿ ಮಹಿಳಾ ಪಕ್ಷಪಾತ ನಿರ್ಮೂಲನ ಒಪ್ಪಂದವನ್ನು ವಿಶ್ವಸಂಸ್ಥೆಯು ಅಂಗೀಕರಿಸಿತು. ಯಾವೆಲ್ಲಾ ವಿಶೇಷ ಹಕ್ಕುಗಳನ್ನು ಮಹಿಳೆಯರಿಗೆ ನೀಡಲಾಗಿದೆ ಎಂದು ಕೆಳಗಿನ ಚಾರ್ಟಿನಿಂದ ಕಂಡುಕೊಳ್ಳಿರಿ.

ಸಮಾನ ಕೆಲಸಕ್ಕೆ ಸಮಾನವೇತನ

ರಾಜಕೀಯ - ಆರ್ಥಿಕ-ಸಾಮಾಜಿಕ ಕ್ಷೇತ್ರದಲ್ಲಿ ಸಮಾನ ಪರಿಗಣನೆ.

ವಿದ್ಯಾರ್ಥಿವೇತನ ಮತ್ತು ಕಲಿಕಾಸಹಾಯವನ್ನು ಪಡೆಯುವಲ್ಲಿ ಸಮಾನ ಅವಕಾಶ

ಎಲ್ಲಾ ರೀತಿಯಲ್ಲೂ ಪುರುಷರಿಗೆ ಸಮಾನವಾದ ಪರಿಗಣನೆಯು ಮಹಿಳೆಯರಿಗೂ ಲಭಿಸಬೇಕಾದುದು ಅವರ ಹಕ್ಕಾಗಿದೆ. ಮಹಿಳೆಯರ ಹಕ್ಕು ಸಂರಕ್ಷಣೆಗಾಗಿ ರಾಷ್ಟ್ರೀಯ ಮಟ್ಟದಲ್ಲಿ ರಾಷ್ಟ್ರೀಯ ಮಹಿಳಾ ಆಯೋಗವೂ ರಾಜ್ಯಮಟ್ಟದಲ್ಲಿ ರಾಜ್ಯ ಮಹಿಳಾ ಆಯೋಗವೂ ಕಾರ್ಯವೆಸಗುತ್ತದೆ. ಮಹಿಳೆಯರ ಮೇಲಿನ ದೌರ್ಜನ್ಯ, ಹಕ್ಕುಗಳ ನಿಷೇಧ ಇತ್ಯಾದಿ ದೂರುಗಳನ್ನು ಈ ಆಯೋಗಗಳಿಗೆ ನೀಡಬಹುದು. ದೂರುಗಳನ್ನು ದಾಖಲಿಸಿ, ಅನ್ವೇಷಿಸಿ, ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವುದು ಈ ಆಯೋಗದ ಜವಾಬ್ದಾರಿಯಾಗಿದೆ.



ಮಹಿಳೆಯರ ಹಕ್ಕು ನಿಷೇಧದ ಕುರಿತಾದ ವಾರ್ತೆಗಳನ್ನೂ ಚಿತ್ರಗಳನ್ನೂ ಸೇರಿಸಿ ಕೊಲಾಷ್ ತಯಾರಿಸಿರಿ.

## ಹಕ್ಕುಗಳು ಮತ್ತು ಕರ್ತವ್ಯಗಳು

ನಮಗೆ ಹಕ್ಕುಗಳು ಮಾತ್ರವಿರುವುದೇ? ಪ್ರತಿಯೊಂದು ಹಕ್ಕಿಗೂ ಸಂಬಂಧಿಸಿ ಕರ್ತವ್ಯಗಳೂ ನಮಗಿವೆ.

ಕೆಳಗಿನ ಚಾರ್ಟನ್ನು ನಿರೀಕ್ಷಿಸಿರಿ


KT 643-5/ Soc.Sci (K)-6 (Vol-2)

| ಹಕ್ಕುಗಳು | ಕರ್ತವ್ಯಗಳು |
|---|---|
| ಸ್ವಾತಂತ್ರ್ಯ ನನ್ನ ಹಕ್ಕಾಗಿದೆ. | ನಾನು ಅನುಭವಿಸುವ ಸ್ವಾತಂತ್ರ್ಯವನ್ನು ಮತ್ತೊಬ್ಬರಿಗೂ ಒದಗಿಸಬೇಕಾದುದು ನನ್ನ ಕರ್ತವ್ಯವಾಗಿದೆ. |
| ಮಗು ಎಂಬ ಕಾರಣದಿಂದ ಸಂರಕ್ಷಣೆಯು ನನ್ನ ಹಕ್ಕಾಗಿದೆ | ನನ್ನನ್ನು ಸಂರಕ್ಷಿಸುವುದು ತಂದೆತಾಯಿಯರ ಕರ್ತವ್ಯವಾಗಿದೆ. |
| ವೃದ್ಧಾಪ್ಯದಲ್ಲಿ ಸಂರಕ್ಷಣೆಯು ತಂದೆತಾಯಿಯರ ಹಕ್ಕಾಗಿದೆ | ವೃದ್ಧಾಪ್ಯದಲ್ಲಿ ತಂದೆ ತಾಯಿಯರನ್ನು ಸಂರಕ್ಷಿಸುವುದು ನನ್ನ ಕರ್ತವ್ಯವಾಗಿದೆ. |
| ಶಿಕ್ಷಣ ಮತ್ತು ಅದಕ್ಕಿರುವ ಮೂಲ ಸೌಕರ್ಯದ ಲಭ್ಯತೆಯು ನನ್ನ ಹಕ್ಕಾಗಿದೆ | ಶಾಲಾನಿಯಮಗಳನ್ನು ಪಾಲಿಸುವುದು ನನ್ನ ಕರ್ತವ್ಯವಾಗಿದೆ. |
| ಹಕ್ಕುಗಳು ಉಲ್ಲಂಘಿಸಲ್ಪಟ್ಟಾಗ ಅದಕ್ಕೆ ಪರಿಹಾರ ದೊರಕಬೇಕಾದುದು ನನ್ನ ಹಕ್ಕಾಗಿದೆ. | ದೇಶಸೇವೆ ಮತ್ತು ಸಾಮಾಜಿಕ ಸೇವೆಯು ನನ್ನ ಕರ್ತವ್ಯವಾಗಿದೆ. |

ಕೆಲವೊಂದು ಹಕ್ಕುಗಳನ್ನೂ ಕರ್ತವ್ಯಗಳನ್ನೂ ಮೇಲೆ ನೀಡಲಾಗಿದೆ. ಕರ್ತವ್ಯಗಳಿಲ್ಲದೆ ಹಕ್ಕುಗಳಿಗೆ ಅಸ್ತಿತ್ವವಿಲ್ಲ.



ಹಕ್ಕು ಮತ್ತು ಕರ್ತವ್ಯಗಳ ನಡುವಿನ ಪರಸ್ಪರ ಸಂಬಂಧವನ್ನು ಅವಲೋಕಿಸಿರಿ.



## ಕ್ರೋಡೀಕರಣ

- ಸರಕಾರವನ್ನು ಪ್ರಜಾಪ್ರಭುತ್ವ ಮತ್ತು ಪ್ರಜಾಪ್ರಭುತ್ವೇತರ ಸರಕಾರಗಳೆಂದು ವರ್ಗೀಕರಿಸಬಹುದು.
- ಪ್ರಜಾಪ್ರಭುತ್ವ ಸರಕಾರವನ್ನು ಇತರ ಸರಕಾರಗಳಿಂದ ಪ್ರತ್ಯೇಕಿಸುವ ಪ್ರಧಾನ ಘಟಕವು ಅವುಗಳು ಖಾತರಿಪಡಿಸುವ ಹಕ್ಕುಗಳಾಗಿವೆ.
- ಸಂವಿಧಾನದಲ್ಲಿ ಸೇರಿಸಿ ಸರಕಾರವು ಜನರಿಗೆ ಖಾತರಿಪಡಿಸುವ ಹಕ್ಕುಗಳ ಪಟ್ಟಿಯೇ 'ಹಕ್ಕುಪತ್ರ'.
- ಆಧುನಿಕ ಕಾಲದಲ್ಲಿ ಹಕ್ಕುಗಳು ಸಾಮಾನ್ಯವಾಗಿ ಮಾನವಹಕ್ಕುಗಳೆಂದು ಕರೆಯಲ್ಪಡುತ್ತಿವೆ.
- ಮಕ್ಕಳ ಹಕ್ಕುಗಳಿಗೆ ಮತ್ತು ಮಹಿಳಾ ಹಕ್ಕುಗಳಿಗೆ ಪ್ರತ್ಯೇಕವಾದ ಪರಿಗಣನೆಯನ್ನು ನೀಡಲಾಗಿದೆ.
- ಹಕ್ಕುಗಳೊಂದಿಗೆ ನಮಗೆ ಕರ್ತವ್ಯಗಳೂ ಇವೆ.

## ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಪ್ರಜಾಪ್ರಭುತ್ವ ಮತ್ತು ಪ್ರಜಾಪ್ರಭುತ್ವೇತರ ಸರಕಾರಗಳ ನಡುವಿನ ವ್ಯತ್ಯಾಸಗಳನ್ನು ವಿವರಿಸುವುದು.
- ಪ್ರಜಾಪ್ರಭುತ್ವ ಸರಕಾರದ ಹಿರಿಮೆಗಳನ್ನು ಪಟ್ಟಿಮಾಡುವುದು.
- ಪ್ರಜಾಪ್ರಭುತ್ವ ಸರಕಾರ ಮತ್ತು ಹಕ್ಕುಗಳ ನಡುವಿರುವ ಪರಸ್ಪರ ಸಂಬಂಧವನ್ನು ತಿಳಿಯುವುದು.
- ಹಕ್ಕುಪತ್ರವನ್ನು ವಿವರಿಸುವುದು.
- ಹಕ್ಕುಗಳ ಸಂರಕ್ಷಣೆಗೆ ರಾಷ್ಟ್ರಮಟ್ಟದಲ್ಲಿ ಕೈಗೊಂಡ ಕ್ರಮಗಳನ್ನು ಅವಲೋಕಿಸುವುದು.
- ಹಕ್ಕು ಮತ್ತು ಕರ್ತವ್ಯಗಳ ನಡುವಿನ ಸಂಬಂಧವನ್ನು ವಿಶ್ಲೇಷಿಸುವುದು.

## ಮೌಲ್ಯನಿರ್ಣಯ ಮಾಡುವ

- ಪ್ರಜಾಪ್ರಭುತ್ವ ಮತ್ತು ಪ್ರಜಾಪ್ರಭುತ್ವೇತರ ಸರಕಾರಗಳ ವಿಶೇಷತೆಗಳನ್ನು ಹೋಲಿಸಿರಿ.
- ಪ್ರಜಾಪ್ರಭುತ್ವ ಸರಕಾರಗಳ ಹಿರಿಮೆಗಳು ಯಾವುವು?

- ಮಾನವಹಕ್ಕುಗಳು ಎಂದರೇನು? ಮಾನವಹಕ್ಕುಗಳ ಸಂರಕ್ಷಣೆಗಾಗಿ ಕೈಗೊಂಡಿರುವ ಪ್ರಧಾನ ಕ್ರಮಗಳು ಯಾವುವು?
- ಹಕ್ಕು ಮತ್ತು ಕರ್ತವ್ಯಗಳ ನಡುವಿನ ಪರಸ್ಪರ ಸಂಬಂಧಗಳನ್ನು ಸ್ಪಷ್ಟಪಡಿಸಿರಿ.

## ಮುಂದುವರಿದ ಚಟುವಟಿಕೆಗಳು

- ಮಾನವ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದ ವಾರ್ತೆಗಳು ಮತ್ತು ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿರಿ.
- ನೀವು ಅನುಭವಿಸುವ ಹಕ್ಕುಗಳನ್ನು ಬರೆದು ಅದಕ್ಕೆ ಸಂಬಂಧಿಸಿದ ಕರ್ತವ್ಯಗಳಾವುವು ಎಂದು ಪಟ್ಟಿಮಾಡಿರಿ.
- ಪ್ರಜಾಪ್ರಭುತ್ವೇತರ ಸರಕಾರಗಳಿರುವ ಇನ್ನೂ ಹೆಚ್ಚಿನ ದೇಶಗಳನ್ನು ಕಂಡುಕೊಂಡು ಪಟ್ಟಿ ತಯಾರಿಸಿರಿ.

## ಸ್ವಮೌಲ್ಯನಿರ್ಣಯ

| | ಪೂರ್ಣವಾಗಿ | ಭಾಗಿಕವಾಗಿ | ಉತ್ತಮಪಡಿಸಬೇಕು |
|---|---|---|---|
| ಪ್ರಜಾಪ್ರಭುತ್ವ ಮತ್ತು ಪ್ರಜಾಪ್ರಭುತ್ವೇತರ ಸರಕಾರಗಳ ವಿಶೇಷತೆಗಳನ್ನು ಹೋಲಿಸಲು ಸಾಧ್ಯವಿದೆ. | | | |
| ಪ್ರಜಾಪ್ರಭುತ್ವ ಸರಕಾರಗಳ ಹಿರಿಮೆಗಳನ್ನು ಹೇಳಲು ಸಾಧ್ಯವಿದೆ. | | | |
| ಪ್ರಜಾಪ್ರಭುತ್ವ ಸರಕಾರ ಮತ್ತು ಹಕ್ಕುಗಳಿಗಿರುವ ಪರಸ್ಪರ ಸಂಬಂಧವನ್ನು ತಿಳಿದುಕೊಳ್ಳಲು ಸಾಧ್ಯವಿದೆ. | | | |
| ಹಕ್ಕುಪತ್ರವನ್ನು ನಿರ್ವಚಿಸಲು ಸಾಧ್ಯವಿದೆ. | | | |
| ಮಾನವಹಕ್ಕುಗಳ ಸಂರಕ್ಷಣೆಗೆ ರಾಷ್ಟ್ರ ಮತ್ತು ರಾಜ್ಯ ಮಟ್ಟಗಳಲ್ಲಿ ಕೈಗೊಂಡ ಕ್ರಮಗಳನ್ನು ವಿವರಿಸಲು ಸಾಧ್ಯವಿದೆ. | | | |
| ಹಕ್ಕು ಮತ್ತು ಕರ್ತವ್ಯಗಳ ನಡುವಿನ ಪರಸ್ಪರ ಸಂಬಂಧಗಳನ್ನು ಸ್ಪಷ್ಟಪಡಿಸಲು ಸಾಧ್ಯವಿದೆ. | | | |



11

# ಸಾಮಾಜಿಕ ಜೀವನದ ವೈವಿಧ್ಯ







ಈ ಮೂರು ಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿರಿ. ಇವುಗಳು ಯಾವೆಲ್ಲ ಜನ ವಿಭಾಗಗಳಿಗೆ ಸಂಬಂಧಿಸಿದ ಚಿತ್ರಗಳಾಗಿವೆ?

ಕೇರಳದ ಜನಸಮುದಾಯದ ಮೂರು ವಿಭಾಗಗಳ ಜೀವನಕ್ಕೆ ಸಂಬಂಧಿಸಿದ ಈ ಚಿತ್ರಗಳು ಅವರ ಜೀವನ ವಿಧಾನದ ಕೆಲವು ವಿಶೇಷತೆಗಳನ್ನು ಪ್ರತಿಬಿಂಬಿಸುತ್ತವೆ. ಈ ರೀತಿಯ ವಿಭಿನ್ನ ಪರಿಸರ ಹಾಗೂ ಜೀವನ ವಿಧಾನವಿರುವ ಜನ ವಿಭಾಗಗಳ ಕುರಿತು ಅನ್ವೇಷಣೆ ಮಾಡೋಣವೇ? ಆ ಮೂಲಕ ನಾವು ಸಮಾಜದ ವೈವಿಧ್ಯವನ್ನು ಕಂಡುಕೊಳ್ಳಲು ಪ್ರಯತ್ನಿಸುವ.

## ಬುಡಕಟ್ಟು ಸಮುದಾಯ



ಇದು ಕೇರಳದ ಒಂದು ಬುಡಕಟ್ಟು ಸಮುದಾಯಕ್ಕೆ ಸಂಬಂಧಪಟ್ಟ ಚಿತ್ರವಾಗಿದೆ. ಬುಡಕಟ್ಟು ಸಮುದಾಯದವರಿಗೆ ತಮ್ಮದೇ ಆದ ಜೀವನ ವಿಧಾನಗಳಿವೆ. ಇವರು ನಮ್ಮ ದೇಶದ ಪ್ರಾಚೀನ ಕಾಲದಲ್ಲಿದ್ದ ಸಮಾಜದ ತಲೆಮಾರಿನವರಾಗಿದ್ದಾರೆ. ಇಂದು ಇವರು ಸಾಮಾನ್ಯವಾಗಿ ಕಾಡುಗಳಲ್ಲೋ ಬೆಟ್ಟಗುಡ್ಡಗಳ ತುದಿಗಳಲ್ಲೋ ವನಾಂತರಗಳಲ್ಲೋ ಅನ್ಯರ ಸಂಪರ್ಕವಿಲ್ಲದ ಕಣಿವೆಗಳಲ್ಲೋ ವಾಸಿಸುತ್ತಾರೆ. ಕೇರಳದ ವಿವಿಧ ಬುಡಕಟ್ಟುಗಳ ಕುರಿತಾಗಿ ನೀವು ಕೇಳಿರುವಿರಲ್ಲವೆ? ಯೋಚಿಸಿ ಕೆಲವು ಬುಡಕಟ್ಟುಗಳ ಹೆಸರುಗಳನ್ನು ಕಂಡುಹಿಡಿಯಿರಿ.

**ಬುಡಕಟ್ಟು**

ಬುಡಕಟ್ಟು ಸಮುದಾಯವೆಂದರೆ ಒಂದು ಸಾರ್ವಜನಿಕ ಪ್ರದೇಶದಲ್ಲಿ ವಾಸವಾಗಿದ್ದುಕೊಂಡು ತಮ್ಮದೇ ಆದ ಭಾಷೆಯನ್ನಾಡುವ ಜನವಿಭಾಗವಾಗಿದೆ. ಅವರು ವಿಶೇಷವಾದ ಆಚಾರ ಅನುಷ್ಠಾನಗಳನ್ನು ಪಾಲಿಸುತ್ತಾರೆ.

- ಪಣಿಯರು
- ಕುರುಚಿಯರು
- 
- 
- 
- 
- 

### ಬುಡಕಟ್ಟು ಸಮುದಾಯದ ವಿಶೇಷತೆಗಳು

**ಕೇರಳದ ಬುಡಕಟ್ಟು ಸಮುದಾಯಗಳು**

1976ರಲ್ಲಿ ತಿದ್ದುಪಡಿ ಮಾಡಿದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ನಿಯಮದ ಅನುಸಾರ ಕೇರಳದ ವಿವಿಧ ಭಾಗಗಳಲ್ಲಾಗಿ 35 ಬುಡಕಟ್ಟು ವಿಭಾಗಗಳಿವೆ. ವಿವಿಧ ಜಿಲ್ಲೆಗಳಲ್ಲಾಗಿ ಚದುರಿಹೋಗಿರುವ ಪಣಿಯ ಸಮುದಾಯದವರು ಇವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಇನ್ನು ಬುಡಕಟ್ಟು ಸಮುದಾಯದವರ ಸಾಮಾಜಿಕ ಜೀವನದ ವಿಶೇಷತೆಗಳನ್ನು ತಿಳಿಯುವ.

- ಬುಡಕಟ್ಟು ವಿಭಾಗದವರು ಸಾಮಾನ್ಯವಾಗಿ ಮಲೆನಾಡು ಪ್ರದೇಶಗಳಲ್ಲೋ ವನಾಂತರಗಳಲ್ಲೋ ಗುಡ್ಡಬೆಟ್ಟಗಳ ಮೇಲೆಯೋ ಸಂಪರ್ಕವಿಲ್ಲದ ಕಣಿವೆಗಳಲ್ಲೋ ವಾಸಿಸುತ್ತಾರೆ. ಇವರ ಜೀವನ ವಿಧಾನವು ಇತರ ಸಮಾಜಗಳಿಗಿಂತ ಭಿನ್ನವಾಗಿದೆ.

- ವನ ಸಂಪನ್ಮೂಲಗಳನ್ನು ಸಂಗ್ರಹಿಸಿಯೂ ಪರಂಪರಾಗತ ರೀತಿಯಲ್ಲಿ ಕೃಷಿಮಾಡಿಯೂ ಬುಡಕಟ್ಟು ಸಮುದಾಯದವರು ಜೀವನ ನಡೆಸುತ್ತಾರೆ. ಇವರಲ್ಲಿ ಹಲವರು ಪರಂಪರಾಗತ ಕುಲಕಸುಬುಗಳನ್ನೇ ಮಾಡುತ್ತಾರೆ.
- ಪ್ರತಿಯೊಂದು ಬುಡಕಟ್ಟು ಸಮಾಜಕ್ಕೂ ತಮ್ಮದೇ ಆದ ಒಂದು ಭಾಷೆ ಇತ್ತು. ಈ ಭಾಷೆಗಳು ತಮ್ಮದೇ ಆದ ಲಿಪಿಗಳಿಲ್ಲದ ಆಡು ಭಾಷೆಗಳಾಗಿದ್ದವು.

ಕೇರಳದ ಬುಡಕಟ್ಟು ವಿಭಾಗವಾದ ಮಲಯ ಸಮುದಾಯವು ಬಳಸುವ ಕೆಲವು ಪದಗಳನ್ನು ಗಮನಿಸಿರಿ.

| | | |
|---|---|---|
| ವೇಂಡಿಯಾರ್ | : | ಹೆಂಡತಿ |
| ವೇತ್ತಾರ್ | : | ಗಂಡ |
| ಅಪ್ಪನ್ | : | ತಂದೆ |
| ಪೇಪ್ಪನ್ | : | ಅಜ್ಜ |
| ಮೋಳಾರ್ | : | ಮಗಳು |
| ಮೋನಾರ್ | : | ಮಗ |
| ಅಚ್ಚೀ | : | ಅಕ್ಕ |
| ಚಾಟ್ಟನ್ | : | ಅಣ್ಣ |

ಇವು ಕುಟುಂಬ ಸಂಬಂಧಗಳನ್ನು ಸೂಚಿಸುವ ಪದಗಳಾಗಿವೆ. ಇವುಗಳಿಗೆ ನಾವು ಇಂದು ಉಪಯೋಗಿಸುವ ಹಲವು ಪದಗಳೊಂದಿಗೆ ಸಾಮ್ಯ ಇದೆಯಲ್ಲವೇ?

ಬುಡಕಟ್ಟು ವಿಭಾಗದವರಿಗೆ ವಿಶೇಷತೆಗಳಿಂದೊಡಗೂಡಿದ ಅವರದ್ದೇ ಆದ ಜೀವನ ವಿಧಾನವಿದೆ. ಇವರು ಪ್ರಕೃತಿಗೆ ಹೊಂದಿಕೊಂಡು ಜೀವಿಸುವವರಾಗಿದ್ದಾರೆ. ಅವರ ಸಾಮಾಜಿಕ ಜೀವನವನ್ನು ರೂಪಿಸುವುದರಲ್ಲಿ ಭೌಗೋಳಿಕ ವಿಶೇಷತೆಗಳಿಗೆ ಪ್ರಧಾನ ಪಾತ್ರವಿದೆ.



1 ..........................................



2 ..........................................



3 ..........................................

ಚಿತ್ರಗಳನ್ನು ಗಮನಿಸಿರಿ.

ಬುಡಕಟ್ಟು ವಿಭಾಗದವರು ಈ ಉಪಕರಣಗಳನ್ನು ಯಾವುದಕ್ಕೆಲ್ಲಾ ಉಪಯೋಗಿಸಿರಬಹುದು? ಪ್ರತಿಯೊಂದು ಉಪಯೋಗವನ್ನು ಚಿತ್ರದ ಕೆಳಗೆ ಬರೆಯಿರಿ. ಬುಡಕಟ್ಟು ವಿಭಾಗದವರ ಈ ಉಪಕರಣಗಳು ಅವರ ಪರಿಸರಕ್ಕೆ ಸಂಬಂಧಪಟ್ಟವುಗಳು ಎಂದು ತಿಳಿದಿರಲ್ಲವೇ.



ಬುಡಕಟ್ಟು ಸಮುದಾಯದವರು ಕೌಟುಂಬಿಕ ಸಂಬಂಧಗಳಿಗೆ ಪ್ರಾಧಾನ್ಯವನ್ನು ನೀಡಿದ್ದರು. ಬುಡಕಟ್ಟು ಸಮುದಾಯದವರು ಅವರ ಚರಿತ್ರೆ ಮತ್ತು ತಿಳುವಳಿಕೆಗಳನ್ನು ಬರೆದಿಡುತ್ತಿರಲಿಲ್ಲ. ಇದರಿಂದಾಗಿ ಬುಡಕಟ್ಟು ಸಮುದಾಯದವರ ಜನಪದ ಗೀತೆ, ತಿಳುವಳಿಕೆ, ಐತಿಹ್ಯ ಇತ್ಯಾದಿಗಳು ಇತರರಿಗೆ ಪರಿಚಿತವಲ್ಲ. ಅವರ ಕಲಾರೂಪಗಳು ಹಾಗೂ ಅನುಷ್ಠಾನಗಳು ಬದಲಾವಣೆಗಳಿಗೊಳಗಾದರೂ ಇಂದಿಗೂ ಅಸ್ತಿತ್ವದಲ್ಲಿವೆ.

ಕೇರಳದ ಒಂದು ಬುಡಕಟ್ಟು ವಿಭಾಗವಾದ ಮಲವೇಡರ ಒಂದು ಪ್ರಕೃತಿಗೀತೆಯನ್ನು ಗಮನಿಸಿರಿ.

**ಇಚ್ಚಚ್ಚಮೆಂದು ಚೆಯ್ತೆ ಲೇಲಾ**
**ಒರು ವೀಂತ್ತು ಚತ್ತು ಪೋಯೇ ಲೇಲಾ**
**ಚತಮ್ಮೀಂತ್ತು ಎಂದು ಚೆಯ್ದೆ ಲೇಲಾ**
**ಒರು ಪರಂದು ರಾಂಜಿಪೋಯೇ ಲೇಲಾ**
**ಆಮೀಂತ್ತು ಎಂದು ಚೆಯ್ದೇ ಲೇಲಾ**
**ಇರುಳುಮರಿಂದು ಪೋಯೇ ಲೇಲಾ**
**ಅಮ್ಮರಮೆಂದು ಚೆಯ್ದೇ ಲೇಲಾ**
**ಚೆರುಮೀಂತ್ತುತಾನುಂ ಪೋಯೇ ಲೇಲಾ**
**ಕಲಂಬುಯೇಲ್ ತಾಂದು ಪೋಯೇ ಲೇಲಾ**
**ಕಲಂಬುಯೇಲ್ ತಾಂದು ಪೋಯೇ ಲೇಲಾ**



ಕೇರಳದ ಬುಡಕಟ್ಟು ಸಮುದಾಯಗಳಲ್ಲಿ ಪ್ರಚಾರದಲ್ಲಿರುವ ಇಂತಹ ಪದ್ಯಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಹಾಡಿರಿ.



ಬುಡಕಟ್ಟು ಸಮುದಾಯದವರು ಒಟ್ಟಾಗಿ ವಾಸಿಸುವ ಪ್ರದೇಶವನ್ನು 'ಊರ್' ಎನ್ನುತ್ತಾರೆ. ಪ್ರತಿಯೊಂದು 'ಊರ್' ಗೆ ಒಬ್ಬ ನೇತಾರನಿರುತ್ತಿದ್ದನು. ಇವನನ್ನು 'ಊರುಮೂಪ್ಪನ್' ಎಂದು ಗೌರವದಿಂದ ಕರೆಯುತ್ತಾರೆ. 'ಊರ್'ನ ಆಡಳಿತದ ನೇತೃತ್ವವನ್ನು ವಹಿಸುವುದು ಮೂಪ್ಪನೋ ಮೂಪ್ಪನನ್ನೊಳಗೊಂಡಿರುವ ಹಿರಿಯ ಸದಸ್ಯರ ಸಮಿತಿಯೋ ಆಗಿತ್ತು. ವಿವಾಹ, ವಿವಾಹ ವಿಚ್ಛೇದನ, ಇತರ ವ್ಯಾಜ್ಯಗಳು, ಅನುಷ್ಠಾನ ಕ್ರಮದ ಬಗ್ಗೆ ತೀರ್ಮಾನಗೊಳ್ಳುವ ಪರಮಾಧಿಕಾರವು ಮೂಪ್ಪ ಅಥವಾ ಹಿರಿಯ ಸದಸ್ಯರ ಸಮಿತಿಗೆ ಇತ್ತು. ನಿಮ್ಮ ಸಮೀಪ ಪ್ರದೇಶದಲ್ಲಿ ಬುಡಕಟ್ಟು ಜನರು ವಾಸವಾಗಿರುವ 'ಊರ್' ಇದ್ದರೆ ಸಂದರ್ಶಿಸಿ ಅವರ ಜೀವನ ವಿಧಾನದ ವಿಶೇಷತೆಗಳನ್ನು ಕಂಡುಕೊಳ್ಳಲು ಪ್ರಯತ್ನಿಸಿರಿ.

## ಗ್ರಾಮ ಸಮಾಜ

ಇದು ಹನ್ನೊಂದು ವರ್ಷ ಪ್ರಾಯದ ಮೀನಳು ತನ್ನ ಸ್ವಂತ ಪ್ರದೇಶವನ್ನು ಆಶಯವಾಗಿರಿಸಿ ಚಿತ್ರದ ರಚನೆ ಮಾಡಿದ್ದಾಳೆ. ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಿರಿ. ಚಿತ್ರದಲ್ಲಿ ಮೀನಳು ದಾಖಲಿಸಿದ ವಿಶೇಷ ಜೀವನ ಕ್ರಮಗಳು ಯಾವುವು? ಬರೆಯಿರಿ.



- **ಕೃಷಿ ಸಂಬಂಧಿತ ಚಟುವಟಿಕೆಗಳು**

  ....................................................................................................

  ....................................................................................................

  ....................................................................................................

  ....................................................................................................

- **ಇತರ ವಿಷಯಗಳು**

  ....................................................................................................

  ....................................................................................................

  ....................................................................................................

  ....................................................................................................

ಈ ವಿಶೇಷತೆಗಳಿಂದ ಮೀನಳ ಸಮಾಜದ ಕುರಿತಾಗಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆಯೇ? ಈ ಸಮಾಜವನ್ನು ನೀವು ಏನೆಂದು ಕರೆಯುವಿರಿ? ನೀವು ವಾಸವಾಗಿರುವ ಸಮಾಜದ ಪ್ರಧಾನ ವಿಶೇಷತೆಗಳನ್ನು ಕಂಡುಕೊಂಡು ಪಟ್ಟಿ ಮಾಡಿರಿ.

-
-
-
-
-
-
-

ಪರಂಪರಾಗತ ಗ್ರಾಮ ಸಮಾಜದ ವಿಶೇಷತೆಗಳು ಯಾವುವೆಂದು ಪರಿಶೀಲಿಸುವ.

- ಗ್ರಾಮ ಪ್ರದೇಶದಲ್ಲಿ ವಾಸಿಸುವವರು ಪರಸ್ಪರ ಹತ್ತಿರದಿಂದ ಬಲ್ಲವರಾಗಿರುತ್ತಾರೆ. ಅವರೊಳಗೆ ಬಹಳ ಹತ್ತಿರದ ಆತ್ಮೀಯತೆಯಿರುತ್ತದೆ.
- ಗ್ರಾಮೀಣ ಜನರ ಉಡುಗೆಗಳು ಸರಳವಾಗಿರುತ್ತವೆ. ಜೀವನ ಕ್ರಮವು ಸಂಕೀರ್ಣವಲ್ಲ.
- ಪರಂಪರಾಗತ ಸಮಾಜದಲ್ಲಿ ಪ್ರಧಾನವಾದುದು ಕೃಷಿ ಹಾಗೂ ಅದಕ್ಕೆ ಸಂಬಂಧಿಸಿದ ಕಸುಬುಗಳಾಗಿವೆ.
- ಕೈಕಸುಬುಗಳು, ಜಾನುವಾರು ಸಾಕಣೆ, ಕರಕುಶಲ ವಸ್ತು ತಯಾರಿ ಮೊದಲಾದವುಗಳು ಗ್ರಾಮೀಣ ಜನತೆಯ ಉಪಜೀವನಮಾರ್ಗಗಳಾಗಿವೆ.

ಗ್ರಾಮಗಳಲ್ಲಿ ಅಸ್ತಿತ್ವದಲ್ಲಿದ್ದ ಕೆಲವು ಕಸುಬುಗಳನ್ನು ಕಂಡುಕೊಳ್ಳಲು ಸಾಧ್ಯವೇ?

- ಮಣ್ಣಿನ ಪಾತ್ರೆ ನಿರ್ಮಾಣ
-
-
-
-
-

- ಪರಂಪರಾಗತ ಗ್ರಾಮಗಳಲ್ಲಿ ಅವಿಭಕ್ತ ಕುಟುಂಬಗಳಿಗೆ ಹೆಚ್ಚಿನ ಪ್ರಾಧಾನ್ಯವಿದೆ.
- ಕೆಲವು ಗ್ರಾಮೀಣ ಅವಿಭಕ್ತ ಕುಟುಂಬಗಳಿಗೆ ಅವರದ್ದೇ ಆದ ಕುಲಕಸುಬುಗಳಿದ್ದುವು.
- ನೆರೆಹೊರೆ ಸಂಬಂಧಕ್ಕೆ ಗ್ರಾಮಗಳು ಪ್ರಾಧಾನ್ಯವನ್ನು ನೀಡುತ್ತವೆ. ಸುಖದುಃಖಗಳಲ್ಲಿ ಅವರು ಭಾಗಿಗಳಾಗುತ್ತಾರೆ. ಸಾಮಾನ್ಯವಾಗಿ ಸಮಾರಂಭಗಳಲ್ಲೂ ಉತ್ಸವಗಳಲ್ಲೂ ಎಲ್ಲರೂ ಭಾಗವಹಿಸುತ್ತಾರೆ.
- ಗ್ರಾಮೀಣರು ಪರಸ್ಪರ ಸಹಾಯ ಸಹಕಾರಗಳನ್ನು ಮಾಡುತ್ತಾರೆ.
- ಗ್ರಾಮೀಣ ಜೀವನದಲ್ಲಿ ಉತ್ಸವಗಳಿಗೆ ಬಹಳಷ್ಟು ಪ್ರಾಧಾನ್ಯವಿದೆ. ಕೊಯ್ಲು ಉತ್ಸವಗಳು ಗ್ರಾಮದ ಪ್ರಧಾನ ಆಚರಣೆಗಳಾಗಿದ್ದುವು.

ಭಾರತ ಇಂದೂ ಗ್ರಾಮಗಳ ದೇಶವಾಗಿದೆ. ಆದರೆ ಹಲವು ಗ್ರಾಮಗಳು ಪಟ್ಟಣಗಳಾಗಿಯೋ ನಗರಗಳಾಗಿಯೋ ಪರಿವರ್ತನೆಗೊಳ್ಳುತ್ತಿವೆ. ಹಿಂದಿನ ಕಾಲದ ಗ್ರಾಮಗಳ ವಿಶೇಷತೆಗಳು ಕಣ್ಮರೆಯಾಗುತ್ತಿರುವುದೂ ಕಂಡುಬರುತ್ತಿದೆ.

## ಬದಲಾಗುತ್ತಿರುವ ಗ್ರಾಮಗಳು

ಗ್ರಾಮಗಳಲ್ಲಿ ಉಂಟಾಗುತ್ತಿರುವ ಬದಲಾವಣೆಗಳನ್ನು ಗುರುತಿಸಲು ಸಾಧ್ಯವಾಗುತ್ತಿದೆಯೇ? ಮೇಲೆ ಚರ್ಚಿಸಿದ ಪರಂಪರಾಗತ ಗ್ರಾಮಗಳ ವಿಶೇಷತೆಗಳಿಂದ ಯಾವೆಲ್ಲ ಬದಲಾವಣೆಗಳು ಇಂದಿನ ಗ್ರಾಮಗಳಲ್ಲಿ ಕಂಡುಬರುತ್ತಿವೆ? ಗ್ರಾಮಗಳಲ್ಲಿ ಹೆಚ್ಚಿನವುಗಳೂ ಹಳೆಯ ರೂಪಗಳಲ್ಲಿಯೇ ಅಸ್ತಿತ್ವದಲ್ಲಿಲ್ಲ.

ಗ್ರಾಮಗಳು ಪಟ್ಟಣಗಳಾಗಿಯೂ ಪಟ್ಟಣಗಳು ನಗರಗಳಾಗಿಯೂ ಕೆಲವು ನಗರಗಳು ಮಹಾನಗರಗಳಾಗಿಯೂ ಬದಲಾಗುತ್ತಿವೆ. ನಗರಗಳು ಗ್ರಾಮೀಣರನ್ನು ಉದ್ಯೋಗ, ವಿದ್ಯಾಭ್ಯಾಸ ಮೊದಲಾದ ವಿಷಯಗಳ ಮೂಲಕ ಆಕರ್ಷಿಸುತ್ತವೆ. ಮುಂಬೈ, ದೆಹಲಿ, ಕೋಲ್ಕತ್ತ, ಚೆನ್ನೈ, ಬೆಂಗಳೂರು, ಕೊಚ್ಚಿ ಮೊದಲಾದ ನಗರಗಳಿಗೆ ದೊಡ್ಡ ಪ್ರಮಾಣದಲ್ಲಿ ವಲಸೆ ಹೋಗುತ್ತಾರೆ.



ನಿಮ್ಮ ಗ್ರಾಮ/ಸಮೀಪದಲ್ಲಿರುವ ಗ್ರಾಮಗಳನ್ನು ನಿರೀಕ್ಷಿಸಿ ಮೇಲೆ ಚರ್ಚಿಸಿದ ಪರಂಪರಾಗತ ಗ್ರಾಮಗಳ ವಿಶೇಷತೆಗಳಿಗಿಂತ ಹೇಗೆ ಭಿನ್ನವಾಗಿವೆ ಎಂದು ಕಂಡುಹಿಡಿದು ಟಿಪ್ಪಣಿ ತಯಾರಿಸಿರಿ.

## ನಗರ ಸಮಾಜ

ನೀವು ಯಾವುದಾದರೂ ಒಂದು ಮಹಾನಗರವನ್ನು ಸಂದರ್ಶಿಸಿರುವಿರಾ?

ಆರನೇ ತರಗತಿಯಲ್ಲಿ ಕಲಿಯುತ್ತಿರುವ ಶೀನಾಳು ಗೆಳತಿ ಅರ್ಚನಳಿಗೆ ಕಳುಹಿಸಿದ ಪತ್ರವನ್ನು ಓದಿರಿ.

ಪ್ರೀತಿಯ ಅರ್ಚನಳಿಗೆ,

ನಾನು ಬೆಂಗಳೂರು ನಗರದಿಂದ ಪತ್ರ ಬರೆಯುತ್ತಿದ್ದೇನೆ. ಇಂದು ಬೆಂಗಳೂರು ಭಾರತದಲ್ಲಿ ಒಂದು ಪ್ರಧಾನ ನಗರವಾಗಿ ಬದಲಾಗಿದೆ. ಕಳೆದ ಅರ್ಧ ಶತಮಾನದಿಂದ ಈ ಪ್ರದೇಶವು ಈ ರೀತಿಯಲ್ಲಿ ಮಹಾನಗರವಾಗಿ ಬದಲಾಯಿತು. ಇದು ಅತಿ ಕಡಿಮೆ ಸಮಯದಲ್ಲಿ ಮಹಾನಗರವಾಗಿ ಪರಿವರ್ತನೆಗೊಂಡ ಪ್ರದೇಶವಾಗಿದೆ. ಎಲ್ಲೆಲ್ಲೂ ಗಗನ ಚುಂಬಿ ಕಟ್ಟಡಗಳು ಮಹಾನಗರಗಳನ್ನು ಕಾಂಕ್ರೀಟ್ ಕಾಡುಗಳೆಂದು ಕರೆಯುವುದು ಎಷ್ಟು ಸತ್ಯವಲ್ಲವೆ. ಕಟ್ಟಡದ ಕೆಳಗೆ ನಿಂತು ಮೇಲೆ ನೋಡಿದರೆ ಅದರ ತುದಿ ಕಾಣಲು ಅಸಾಧ್ಯ.

ರಸ್ತೆಗಳಲ್ಲಿ ಹೆಚ್ಚಿನವುಗಳೂ ಎರಡು ಪಥಗಳನ್ನು ಹೊಂದಿರುವವುಗಳಾಗಿವೆ. ಆ ಕಡೆಗೂ ಈ ಕಡೆಗೂ ಹೋಗುವ ವಾಹನಗಳು ಒಂದೊಂದು ಪಥದಲ್ಲಿ ಚಲಿಸುತ್ತವೆ. ಎಲ್ಲಾ ಸಮಯಗಳಲ್ಲೂ ವಾಹನಗಳ ನಿರಂತರವಾದ ಸಂಚಾರವು ಕಂಡುಬರುತ್ತದೆ. ಆದುದರಿಂದ ಎಲ್ಲಾ ಕಡೆಗಳಲ್ಲೂ ರಸ್ತೆಯನ್ನು ಅಡ್ಡದಾಟಲು ಸಾಧ್ಯವಿಲ್ಲ. ಬಿಳಿಗೆರೆಗಳಿರುವಲ್ಲಿ, ಸಿಗ್ನಲ್ ಬೆಳಕು ನೋಡಿಯೇ ರಸ್ತೆಯನ್ನು ಅಡ್ಡದಾಟಲು ಸಾಧ್ಯ. ಇಲ್ಲದಿದ್ದಲ್ಲಿ ಅನಾಹುತವಾಗಬಹುದು.

ವಾಹನಗಳ ಹೆಚ್ಚಳ ಇಲ್ಲಿನ ಪರಿಸರ ಮಲಿನೀಕರಣಕ್ಕೆ ಕಾರಣವಾಗಿದೆ. ವಾಹನಗಳು, ಕೈಗಾರಿಕೆಗಳು ಶುದ್ಧಗಾಳಿಯನ್ನು ಕಣ್ಮರೆಯಾಗಿಸುತ್ತದೆ. ಶುದ್ಧಜಲಕ್ಷಾಮವು ಬೆಂಗಳೂರಿನ ಪ್ರಧಾನ ಸಮಸ್ಯೆಗಳಲ್ಲಿ ಒಂದಾಗಿದೆ.

ನಗರದಲ್ಲಿ ಫ್ಲಾಟುಗಳು ಮಾತ್ರವೇ ಕಂಡುಬರುತ್ತವೆ. ಹೆಚ್ಚಿನವರು ದೊಡ್ಡ ಬಂಗಲೆ ಹಾಗೂ ಫ್ಲಾಟುಗಳಲ್ಲಿ ವಾಸಿಸುತ್ತಾರೆ. ಒಂದೇ ಫ್ಲಾಟಿನಲ್ಲಿ ಇನ್ನೂರಕ್ಕೂ ಹೆಚ್ಚಿನ ಕುಟುಂಬಗಳು ವಾಸಿಸುತ್ತವೆ ಎಂದು ಕೇಳಿಬರುತ್ತದೆ. ದೊಡ್ಡ ಕಾಲೇಜು ಹಾಗೂ ಶಾಲೆಗಳು ಧಾರಾಳವಾಗಿ ಇಲ್ಲಿ ಇವೆ.

ಬೆಂಗಳೂರು ನಗರದಲ್ಲಿ ಹೂದೋಟಗಳು, ಪಾರ್ಕುಗಳು ಇವೆ ಎಂಬುದು ಸತ್ಯ. ಪ್ರದರ್ಶನಾಲಯಹಾಗೂ ಮ್ಯೂಸಿಯಂಗಳನ್ನು ಎಷ್ಟು ನೋಡಿದರೂ ಸಾಕಾಗದು. ಸತ್ಯಹೇಳುವುದಾದರೆ ಇನ್ನೂ ಕೆಲಕಾಲ ಈ ನಗರದಲ್ಲಿ ಸುತ್ತಾಡಬೇಕೆಂಬ ಬಯಕೆಯಾಗುತ್ತಿದೆ. ಅರ್ಚನ, ನಿನಗೂ ಬರಬೇಕೆಂಬ ಆಸೆಯಿದೆಯೇ?

ಸ್ನೇಹಪೂರ್ವಕ

ಶೀನಾ

ಬೆಂಗಳೂರು

16 ಮೇ 2014

ಶೀನಾಳ ಪತ್ರ ಓದಿದಾಗ ಒಂದು ನಗರದ ಚಿತ್ರಣ ನಿಮ್ಮ ಮನಸ್ಸಿನಲ್ಲಿ ಮೂಡಿಬಂತಲ್ಲವೇ? ನಗರಗಳ ವಿಶೇಷತೆಯ ಚಾರ್ಟನ್ನು ನಾವು ತಯಾರಿಸುವ.

- ವೈವಿಧ್ಯಗಳ ಕೇಂದ್ರ
  - ಹಲವು ಭಾಷೆಗಳನ್ನಾಡುತ್ತಾರೆ.
  - ಹಲವು ವೇಷಭೂಷಣಗಳನ್ನು ಧರಿಸುತ್ತಾರೆ.
  - ವಿವಿಧ ಆಹಾರ ಕ್ರಮಗಳನ್ನು ಅನುಸರಿಸುತ್ತಾರೆ.
- ಹಲವು ವಿಧದ ಉದ್ಯೋಗಗಳು
  - ಕೈಗಾರಿಕೆ ಹಾಗೂ ವ್ಯಾಪಾರಕ್ಕೆ ಸಂಬಂಧಿಸಿದ ಉದ್ಯೋಗಗಳು.
  - ಉದ್ಯೋಗವು ವಿವಿಧ ಆರ್ಥಿಕ, ಸಾಮಾಜಿಕ ವಿಭಾಗಗಳನ್ನು(classes) ರೂಪಿಸುತ್ತವೆ.
  - ಕಾರ್ಮಿಕ ಸಂಘಟನೆಗಳು ರೂಪುಗೊಳ್ಳುತ್ತವೆ.
- ದೊಡ್ಡ ಕಟ್ಟಡಗಳ ಕೇಂದ್ರ
  - ಫ್ಲಾಟುಗಳು
  - ಮಾಲ್‌ಗಳು
  - ಸೂಪರ್ ಮಾರ್ಕೆಟುಗಳು
  - ಬಂಗ್ಲೆಗಳು
- ನಾಗರಿಕ ಜೀವನ ವಿಧಾನಗಳು
  - ಫ್ಯಾಷನ್‌ಗಳು
  - ಆಧುನಿಕ ಜೀವನ ಶೈಲಿಗಳು
  - ವೈವಿಧ್ಯಪೂರ್ಣವಾದ ಜೀವನ ಶೈಲಿ
- ಹೆಚ್ಚು ಜನಸಾಂದ್ರತೆ
- ಕೊಳೆಗೇರಿಗಳು

## ನಗರದ ಸಮಸ್ಯೆಗಳು




ನಗರವು ಹಲವರನ್ನು ಆಕರ್ಷಿಸುತ್ತದೆ ಆದರೂ ಕೆಲವರು ನಗರವನ್ನು ಇಷ್ಟಪಡದಿರಲು ಕಾರಣಗಳಿವೆಯಲ್ಲವೇ? ಈ ಚಿತ್ರವನ್ನು ನೋಡಿರಿ.

ಇದು ನಗರದಲ್ಲಿನ ವಾಹನ ಸಂಚಾರದ ಸಮಸ್ಯೆಯನ್ನು ತೋರಿಸುವ ಚಿತ್ರವಾಗಿದೆ. ವಾಹನಗಳ ಹೆಚ್ಚಳವು ವಾಯುಮಾಲಿನ್ಯಕ್ಕೆ ಕಾರಣವಾಗುವುದರೊಂದಿಗೆ ಹಲವು ವಿಧದ ರೋಗಗಳಿಗೂ ದಾರಿಮಾಡಿಕೊಡುತ್ತದೆ.

ಆದರೆ ನಗರದಲ್ಲಿ ಹಲವು ವಿಧದ ಸೌಕರ್ಯಗಳಿವೆ ಎಂಬುದು ಸತ್ಯ. ನಗರಗಳು ಹಲವು ವಿಧದ ಸಮಸ್ಯೆಗಳ ಕೇಂದ್ರಗಳಾಗಿವೆ ಎಂಬುದನ್ನು ನೀವು ತಿಳಿದಿರುವಿರಾ?

ನಗರ ಜೀವನವು ಕೆಲವರಿಗೆ ಕಷ್ಟಕರವಾಗಿದೆ. ಸುಖ ಸೌಕರ್ಯಗಳಲ್ಲಿ ಜೀವನವನ್ನು ಆನಂದಿಸುವ ಮೇಲ್ವರ್ಗದವರು ಹಾಗೂ ಕೊಳೆಗೇರಿಗಳಲ್ಲೂ ಹಾದಿಬೀದಿಗಳಲಿಯೂ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿ ವಾಸಿಸುವವರೂ ನಗರಗಳಲ್ಲಿದ್ದಾರೆ. ನಗರದ ಹಲವು ಸಮಸ್ಯೆಗಳು ಎಲ್ಲರನ್ನೂ ಬಾಧಿಸುತ್ತವೆ. ಅವುಗಳು ಯಾವುವೆಂದು ಕಂಡುಹಿಡಿಯುವ.



ನಗರಗಳ ವಿವಿಧ ಸಮಸ್ಯೆಗಳ ಕುರಿತಾದ ಪತ್ರಿಕಾವಾರ್ತೆಗಳನ್ನು ಸಂಗ್ರಹಿಸಿರಿ. ಟ್ರಾಫಿಕ್ ಜಾಮ್, ಕೊಳೆಗೇರಿಗಳು, ಮಾದಕ ಪದಾರ್ಥಗಳ ಉಪಯೋಗ, ಅಪರಾಧಗಳು ಇತ್ಯಾದಿಗಳ ಕುರಿತಾಗಿರುವ ಪತ್ರಿಕಾ ವಾರ್ತೆಗಳ ಸಹಾಯದಿಂದ ಕೊಳಾಷ್ ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.

ನಗರಗಳಲ್ಲಿ ಹಾಗೂ ಗ್ರಾಮಗಳಲ್ಲಿರುವ ಸಮಸ್ಯೆಗಳಿಗೆ ಪರಿಹಾರಗಳೇನು? ಗುಂಪುಗಳಲ್ಲಿ ಚರ್ಚಿಸಿರಿ. ಚರ್ಚೆಗಾಗಿ ಈ ಚಾರ್ಟ್‌ನ್ನು ಉಪಯೋಗಿಸಿರಿ.

**ನಗರದಲ್ಲಿನ ಸಮಸ್ಯೆಗಳು - ಪರಿಹಾರೋಪಾಯಗಳು**

- ಅಚ್ಚುಕಟ್ಟಾದ ಯೋಜನೆ
- ಪರಿಸರ ಸಮಸ್ಯೆಗಳನ್ನುಂಟುಮಾಡದ ನಿರ್ಮಾಣ ಚಟುವಟಿಕೆಗಳು
- ವಸತಿ ನೀತಿ
- ಜೀವನವನ್ನು ಸುಗಮಗೊಳಿಸಲು ಅಗತ್ಯವಿರುವ ಮೂಲಭೂತ ಸೌಕರ್ಯಗಳು

ನೀವು ನೀಡುವ ಸಲಹೆಗಳು ಯಾವುವು?

- 
- 
- 
- 

## ವಿವಿಧ ಜೀವನಕ್ರಮಗಳು

- ಬುಡಕಟ್ಟು ಸಮುದಾಯ
  - ವಿಶೇಷತೆಗಳು
- ಗ್ರಾಮ ಸಮಾಜ
  - ಪರಂಪರಾಗತ ಗ್ರಾಮದ ವಿಶೇಷತೆಗಳು
  - ಗ್ರಾಮ ಸಮಾಜದಲ್ಲಿ ಉಂಟಾದ ಬದಲಾವಣೆಗಳು
- ನಗರ ಸಮಾಜ
  - ವಿಶೇಷತೆಗಳು
  - ನಾಗರಿಕ ಸಮಸ್ಯೆಗಳು
  - ಪರಿಹಾರ ಮಾರ್ಗಗಳು



## ಕ್ರೋಢೀಕರಣ

- ಹೆಚ್ಚಿನ ಬುಡಕಟ್ಟು ಸಮುದಾಯದವರು ಗುಡ್ಡಬೆಟ್ಟಗಳಲ್ಲೂ ವನಪ್ರದೇಶಗಳಲ್ಲೂ ವಾಸಿಸುತ್ತಾರೆ.
- ಬುಡಕಟ್ಟು ಸಮುದಾಯದವರಿಗೆ ತಮ್ಮದೇ ಆದ ಸಂಸ್ಕೃತಿ ಹಾಗೂ ಜೀವನ ಕ್ರಮವಿದೆ.
- ಬುಡಕಟ್ಟು ಸಮುದಾಯದ ಭಾಷೆ ಹಾಗೂ ಸಂಸ್ಕೃತಿಗಳು ಬಾಯ್ದೆರೆಯಾಗಿ ಮುಂದುವರೆದು ಬಂದುದಾಗಿವೆ.

- ಪ್ರಾಥಮಿಕ ಸಂಬಂಧಗಳು, ಕೃಷಿ ಆಧಾರಿತ ಕಸುಬುಗಳು, ಕುಟುಂಬ ನೆರೆಹೊರೆ ಸಂಬಂಧಗಳ ಪ್ರಾಧಾನ್ಯ, ಉತ್ಸವಗಳ ಪ್ರಭಾವ ಇತ್ಯಾದಿಗಳು ಗ್ರಾಮದ ವಿಶೇಷತೆಗಳಾಗಿವೆ.
- ಸಾಮಾಜಿಕ ವೈವಿಧ್ಯ, ಉದ್ಯೋಗದ ವಿಭಜನೆ, ಸಾಮಾಜಿಕ ಚಲನ ಸಾಮರ್ಥ್ಯ ಮೊದಲಾದುವುಗಳು ನಗರ ಸಮಾಜದ ವಿಶೇಷತೆಗಳಾಗಿವೆ.
- ಕೊಳೆಗೇರಿಗಳು, ಮಲಿನೀಕರಣ, ಟ್ರಾಫಿಕ್ ಜಾಮ್ ಇತ್ಯಾದಿಗಳು ನಗರ ಸಮಾಜ ಎದುರಿಸುತ್ತಿರುವ ಪ್ರಧಾನ ಸಮಸ್ಯೆಗಳಾಗಿವೆ.
- ಅಚ್ಚುಕಟ್ಟಾದ ಯೋಜನೆಯ ಮೂಲಕ ನಗರಗಳ ಹೆಚ್ಚಿನ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯ.



## ಪ್ರಧಾನ ಕಲಿಕಾಸಾಧನೆಗಳಲ್ಲಿ ಒಳಪಡುವವುಗಳು

- ಬುಡಕಟ್ಟು ಸಮುದಾಯದ ವಿಶೇಷತೆಗಳನ್ನು ಗುರುತಿಸಿ ವಿವರಿಸುವುದು.
- ಗ್ರಾಮ ಸಮಾಜದ ವಿಶೇಷತೆಗಳನ್ನು ಗುರುತಿಸಿ ವಿಶ್ಲೇಷಣೆ ಮಾಡುವುದು.
- ಗ್ರಾಮ ಸಮಾಜದಲ್ಲಿ ಉಂಟಾಗುವ ಬದಲಾವಣೆಯನ್ನು ಗುರುತಿಸಿ ವಿವರಿಸುವುದು.
- ನಗರ ಸಮಾಜದ ವಿಶೇಷತೆಗಳನ್ನು ಗುರುತಿಸಿ ಗ್ರಾಮ ಸಮಾಜದೊಂದಿಗೆ ಹೋಲಿಸಿ ವಿಶ್ಲೇಷಿಸುವುದು.
- ನಗರ ಸಮಾಜ ಎದುರಿಸುತ್ತಿರುವ ಸಮಸ್ಯೆಗಳನ್ನು ಗುರುತಿಸುವುದರೊಂದಿಗೆ ಪರಿಹಾರೋಪಾಯಗಳನ್ನು ಸೂಚಿಸಲು ಸಾಧ್ಯವಾಗುವುದು.



## ಮೌಲ್ಯನಿರ್ಣಯ ಮಾಡುವ

- ಬುಡಕಟ್ಟು ಸಮುದಾಯದ ವಿಶೇಷತೆಗಳು ಯಾವುವು?
- ಗ್ರಾಮ ಸಮಾಜದಲ್ಲಿ ಉಂಟಾದ ಬದಲಾವಣೆಯನ್ನು ಗುರುತಿಸಿ ವಿವರಿಸಿರಿ.
- 'ನಗರ ಜೀವನ ನರಕ ಜೀವನಕ್ಕೆ ಸಮಾನ' ಈ ಹೇಳಿಕೆಯನ್ನು ನೀವು ಒಪ್ಪುವಿರಾ? ನಿಮ್ಮ ಉತ್ತರವನ್ನು ಸಮರ್ಥಿಸಿರಿ.

- ಗ್ರಾಮ ಸಮಾಜದ ಹಾಗೂ ನಗರ ಸಮಾಜದ ವಿಶೇಷತೆಗಳನ್ನು ಹೋಲಿಸಿ ಪಟ್ಟಿ ತಯಾರಿಸಿರಿ.

| ಗ್ರಾಮ ಸಮಾಜ | ನಗರ ಸಮಾಜ |
|---|---|
| ♦ | ♦ |
| ♦ | ♦ |
| ♦ | ♦ |
| ♦ | ♦ |



## ಮುಂದುವರಿದ ಚಟುವಟಿಕೆಗಳು

- ನಿಮ್ಮ ಸಮೀಪದ ಒಂದು ನಗರವನ್ನು ಸಂದರ್ಶಿಸಿ ಅಲ್ಲಿರುವ ಸಾಮಾಜಿಕ ಸಮಸ್ಯೆಗಳ ಕುರಿತಾದ ಒಂದು ವರದಿಯನ್ನು ತಯಾರಿಸಿರಿ.

  ಸೂಚಕಗಳು

  - ಟ್ರಾಫಿಕ್ ಜಾಮ್
  - ಕೊಳೆಗೇರಿ
  - ವಸತಿ ಸೌಕರ್ಯದ ಕೊರತೆ
  - ಜಲಕ್ಷಾಮ

- ಬುಡಕಟ್ಟು ಸಮುದಾಯದ ಕಲಾರೂಪಗಳು, ಹಾಡು ಇತ್ಯಾದಿಗಳನ್ನು ಸಂಗ್ರಹಿಸಿ ಸಂಚಿಕೆ ತಯಾರಿಸಿರಿ.

## ಸ್ವಮೌಲ್ಯನಿರ್ಣಯ

| | ಪೂರ್ಣವಾಗಿ | ಭಾಗಿಕವಾಗಿ | ಉತ್ತಮ ಪಡಿಸಬೇಕು |
|---|---|---|---|
| ಬುಡಕಟ್ಟು ಸಮುದಾಯದ ವಿಶೇಷತೆಗಳನ್ನು ವಿವರಿಸಲು ಸಾಧ್ಯವಿದೆ. | | | |
| ಗ್ರಾಮ ಸಮಾಜದ ವಿಶೇಷತೆಗಳನ್ನು ವಿವರಿಸಲು ಸಾಧ್ಯವಿದೆ. | | | |
| ನಗರ ಸಮಾಜದ ವಿಶೇಷತೆಗಳನ್ನು ಗುರುತಿಸಲು ಸಾಧ್ಯವಿದೆ. | | | |
| ಇಂದು ಗ್ರಾಮಗಳಲ್ಲಿ ಉಂಟಾದ ಬದಲಾವಣೆಗಳನ್ನು ಗುರುತಿಸಿ ಪಟ್ಟಿಮಾಡಲು ಸಾಧ್ಯವಿದೆ. | | | |
| ಗ್ರಾಮ ಹಾಗೂ ನಗರ ಸಮಾಜಗಳೊಳಗಿನ ವ್ಯತ್ಯಾಸಗಳನ್ನು ಗುರುತಿಸಲು ಸಾಧ್ಯವಿದೆ. | | | |
| ನಗರ ಸಮಾಜವು ಎದುರಿಸುತ್ತಿರುವ ಸಮಸ್ಯೆಗಳನ್ನು ಕಂಡುಕೊಳ್ಳಲು ಸಾಧ್ಯವಿದೆ. | | | |
| ನಗರದ ಸಮಸ್ಯೆಗಳನ್ನು ಪರಿಹರಿಸಲಿಕ್ಕಿರುವ ಸಲಹೆಗಳನ್ನು ನೀಡಲು ಸಾಧ್ಯವಿದೆ. | | | |



# 12 ಪ್ರಕೃತಿಯ ವರದಾನ

ಫೆಸಿಫಿಕ್ ಸಾಗರದಲ್ಲಿರುವ ಕೇವಲ ೨೧ ಚದರ ಕಿಲೋಮೀಟರ್ ಮಾತ್ರ ವಿಸ್ತೀರ್ಣವಿರುವ ನೌರು **(nouru)** ಎಂಬ ಸಣ್ಣ ದ್ವೀಪವನ್ನು ಜಗತ್ತಿನ ಅತ್ಯಂತ ಸಂಪನ್ನವಾದ ದೇಶ ಎಂದು ವಿಶ್ವ ವಿಖ್ಯಾತ ನೇಶನಲ್ ಜಿಯೋಗ್ರಫಿಕ್ ೧೯೭೬ರಲ್ಲಿ ಈ ರೀತಿಯಲ್ಲಿ ವ್ಯಾಖ್ಯಾನಿಸಿತು. ಒಂದು ಕಾಲದಲ್ಲಿ ಹಚ್ಚ ಹಸಿರಿನಿಂದ ತುಂಬಿದ್ದ ಈ ದಿಗಲಲಲರಲ್ಲಿ ಜರ್ಮನಿಯು ಇಲ್ಲಿ ವಸಾಹತನ್ನು ಸ್ಥಾಪಿಸಿ ಪೋಸ್ಪೇಟಿನ ಖನನವನ್ನು ಆರಂಭಿಸುವುದರೊಂದಿಗೆ ದಿಯಿತು. ಒಂದನೇ ಜಾಗತಿಕ ಯುದ್ಧದ ಅನಂತರ ಬ್ರಿಟನ್, ಆಸ್ಟ್ರೇಲಿಯ, ನ್ಯೂಜಿಲೇಂಡ್ ಎಂಬೀ ದೇಶಗಳು ಇಲ್ಲಿ ಖನನವನ್ನು ಆರಂಭಿಸಿದುವು. ಪೋಸ್ಪೇಟ್ ಖನನದಿಂದಾಗಿ ನೌರು ಒಂದು ಸಂಪನ್ನ ದೇಶವಾಗಿ ಬದಲಾಯಿತು. ಆದರೆ ಅತಿಯಾದ ಪೋಸ್ಪೇಟ್ ಖನನವು ಅಲ್ಲಿನ ಸಸ್ಯ ಸಂಪತ್ತನ್ನು ನಾಶಗೊಳಿಸಿತು. ಇದರೊಂದಿಗೆ ಪಕ್ಷಿಗಳೂ ಜಂತುಗಳೂ ನಾಮಾವಶೇಷವಾದುವು. ನೌರುವಿನ ಸ್ಥಿತಿಯೇ ಬದಲಾಯಿತು. ಪೋಸ್ಪೇಟಿನ ನಿಕ್ಷೇಪವೂ ಬಹುಬೇಗನೆ ಖಾಲಿಯಾಯಿತು. ಹೀಗೆ ನೌರು ಒಂದು ಬಡ ದೇಶವಾಯಿತು. ... ಎಲ್ಲಾ ಅರ್ಥದಲ್ಲೂ....

ಪೋಸ್ಪೇಟ್ ಎಂಬ ಖನಿಜ ಸಂಪನ್ಮೂಲದಿಂದ ಒಮ್ಮೆ ಸಂಪನ್ನವಾಗಿದ್ದು ಅನಂತರ ಅದೇ ಖನಿಜ ಸಂಪತ್ತಿನ ಅಮಿತ ಶೋಷಣೆಯಿಂದ ಬಡದೇಶವಾದ ನೌರುವಿನ ಕುರಿತು ಓದಿದಿರಲ್ಲವೆ? ನೌರುವಿನ ಚರಿತ್ರೆಯನ್ನು ಓದಿದಾಗ ನಿಮ್ಮ ಮನಸ್ಸಿನಲ್ಲೂ ಕೆಳಗೆ ನೀಡಿರುವ ಪ್ರಶ್ನೆಗಳು ಉದಯಿಸಿರಬಹುದಲ್ಲವೆ?

***ಸಂಪನ್ಮೂಲಗಳು ಎಂದರೇನು?***

***ಸಂಪನ್ಮೂಲಗಳ ಶೋಷಣೆಯು ಹೇಗೆ ನಡೆಯುತ್ತದೆ?***

***ಸಂಪನ್ಮೂಲಗಳನ್ನು ಸಂರಕ್ಷಿಸಬೇಕಾಗಿದೆಯೇ?***

ಸಂಪನ್ಮೂಲಗಳು, ಸಂಪನ್ಮೂಲಗಳ ಶೋಷಣೆ, ಸಂಪನ್ಮೂಲಗಳ ಸಂರಕ್ಷಣೆ ಎಂಬಿವುಗಳ ಕುರಿತು ಹೆಚ್ಚಿನ ತಿಳುವಳಿಕೆ ಪಡೆಯಲು ಈ ಅಧ್ಯಾಯವು ನಿಮಗೆ ಸಹಾಯಕವಾಗಬಹುದು.

ಪ್ರಕೃತಿಯಲ್ಲಿ ಕಂಡುಬರುವವುಗಳೂ ಮಾನವನಿಗೆ ಉಪಯೋಗಕಾರಿಗಳೂ ಆದ ವಸ್ತುಗಳನ್ನು ಸಂಪನ್ಮೂಲಗಳೆಂದು ಕರೆಯುತ್ತೇವೆ. ಪ್ರಕೃತಿಯಿಂದ ಲಭ್ಯವಾಗುವ ಕೆಲವು ಸಂಪನ್ಮೂಲಗಳ ಚಿತ್ರಗಳನ್ನು ಕೆಳಗೆ ಕೊಡಲಾಗಿದೆ.

ಪ್ರಕೃತಿಯಿಂದ ನೇರವಾಗಿ ಲಭಿಸುವವುಗಳು ಹಾಗೂ ಉಪಯೋಗಕ್ಕೆ ಯೋಗ್ಯವೂ ಆದ ಇಂತಹ ಸಂಪನ್ಮೂಲಗಳು ಪ್ರಾಕೃತಿಕ ಸಂಪನ್ಮೂಲಗಳಾಗಿವೆ.


ಶಿಲೆಗಳು


ಜಲ


ಮಣ್ಣು


ಗಾಳಿ


ಖನಿಜಗಳು


ಸೂರ್ಯಪ್ರಕಾಶ

ನಮ್ಮ ಪ್ರಕೃತಿಯು ವಾಯು, ಸೂರ್ಯಪ್ರಕಾಶ, ಗಾಳಿ, ಮರಗಳು, ಜಲ, ಹೀಗೆ ಎಣಿಸಲು ಸಾಧ್ಯವಿಲ್ಲದಷ್ಟು ಸಂಪನ್ಮೂಲಗಳಿಂದ ಸಂಪದ್ಭರಿತವಾಗಿದೆ.



ಪ್ರಾಕೃತಿಕ ಸಂಪನ್ಮೂಲಗಳಿಗೆ ಎಷ್ಟು ಉದಾಹರಣೆಗಳನ್ನು ಬರೆಯಲು ನಿಮಗೆ ಸಾಧ್ಯವಿದೆ? ಅವುಗಳಿಂದಿರುವ ಪ್ರಯೋಜನಗಳನ್ನೂ ಬರೆಯಿರಿ.

ನೀವು ಕಂಡುಕೊಂಡ ಸಂಪನ್ಮೂಲಗಳಲ್ಲಿ ಕೆಲವು ಜೀವವಿರುವವುಗಳು, ಇನ್ನು ಕೆಲವು ಜೀವವಿಲ್ಲದವುಗಳೂ ಆಗಿವೆ. ಜೀವವಿರುವ ಸಂಪನ್ಮೂಲಗಳನ್ನು ಜೈವಿಕ ಸಂಪನ್ಮೂಲಗಳೆಂದೂ ಜೀವವಿಲ್ಲದವುಗಳನ್ನು ಅಜೈವಿಕ ಸಂಪನ್ಮೂಲಗಳೆಂದೂ ಕರೆಯುತ್ತೇವೆ.

ಭೂಮಿಯಲ್ಲಿ ಸಂಶೋಧನೆ ಮಾಡಿ ಮಾನವನು ಕಂಡುಕೊಂಡು ಬಳಸಿದ ಪ್ರಾಕೃತಿಕ ಸಂಪನ್ಮೂಲಗಳಲ್ಲಿ ಕೆಲವು ಎಂದೆಂದಿಗೂ ಲಭಿಸುವವುಗಳಾಗಿವೆ. ಆದರೆ ಇನ್ನು ಕೆಲವು ಸಂಪನ್ಮೂಲಗಳು ಉಪಯೋಗಿಸುವುದಕ್ಕೆ ಅನುಸಾರವಾಗಿ ಬರಿದಾಗುವವುಗಳಾಗಿವೆ. ಕೆಳಗೆ ನೀಡಿರುವ ಸಂಪನ್ಮೂಲಗಳನ್ನು ಪ್ರಕೃತಿಯಿಂದ ಲಭಿಸುವವುಗಳು ಹಾಗೂ ಉಪಯೋಗಕ್ಕನುಸಾರವಾಗಿ ಮುಗಿದು ಹೋಗುವವುಗಳು ಎಂಬುದಾಗಿ ವರ್ಗೀಕರಿಸಿ ಪಟ್ಟಿ 12.1ರಲ್ಲಿ ಬರೆಯಿರಿ.


ಗಾಳಿ


ಕಲ್ಲಿದ್ದಲು


ಜಲ


ನೈಸರ್ಗಿಕ ಅನಿಲ


ಸೂರ್ಯಪ್ರಕಾಶ



ಅರಣ್ಯ



ಪೆಟ್ರೋಲಿಯಂ


ಮಣ್ಣು


ಕಬ್ಬಿಣ




ಚಿತ್ರ 12.1

## ಹೆಚ್ಚುತ್ತಿರುವ ಆವಶ್ಯಕತೆಗಳು, ಬರಿದಾಗುತ್ತಿರುವ ಸಂಪನ್ಮೂಲಗಳು

ಪ್ರಾಕೃತಿಕ ಸಂಪನ್ಮೂಲಗಳನ್ನು ತನಗಾಗಿ ಮಾತ್ರವಿರುವವುಗಳೆಂದು ತಿಳಿದು ಮಾನವನು ಯಥೇಷ್ಟವಾಗಿ ಬಳಸಿಕೊಳ್ಳುತ್ತಿದ್ದಾನೆ. ಜನಸಂಖ್ಯೆಯ ಹೆಚ್ಚಳ, ವಿಜ್ಞಾನ-ತಂತ್ರಜ್ಞಾನದ ಅಭಿವೃದ್ಧಿ, ಅಭಿವೃದ್ಧಿಹೊಂದಿದ ವಾರ್ತಾವಿನಿಮಯ ಸೌಕರ್ಯ, ಕೈಗಾರಿಕೀಕರಣ ಎಂಬಿವುಗಳು ಪ್ರಾಕೃತಿಕ ಸಂಪನ್ಮೂಲಗಳ ಬೇಡಿಕೆಯನ್ನು ಹೆಚ್ಚಿಸಿದುವು. ಇದು ಸಂಪನ್ಮೂಲಗಳ ಅಮಿತವಾದ ಶೋಷಣೆಗೆ ದಾರಿಮಾಡಿತು. ಸಂಪನ್ಮೂಲಗಳ ಶೋಷಣೆ ಎಂದರೆ ಅನಿಯಂತ್ರಿತವಾದ ಬಳಕೆಯಿಂದ ಸಂಪನ್ಮೂಲಗಳ ಪ್ರಮಾಣದಲ್ಲಿ ಉಂಟಾಗುವ ಕಡಿತವಾಗಿದೆ. ಪ್ರಕೃತಿಯನ್ನು ಅವೈಜ್ಞಾನಿಕವಾಗಿ ಶೋಷಣೆ ಮಾಡುವುದರಿಂದ ಹಲವು ಅಮೂಲ್ಯವಾದ ಸಂಪನ್ಮೂಲಗಳು ನಷ್ಟವಾಗುವುದರೊಂದಿಗೆ ಪ್ರಕೃತಿಯ ತನ್ನದೇ ಆದ ಸ್ವಭಾವ ವಿಶೇಷತೆಯಲ್ಲಿ ಬದಲಾವಣೆ ಉಂಟಾಗಲು ಆರಂಭವಾಯಿತು. ಸಂಪನ್ಮೂಲಗಳ ಗುಣಮಟ್ಟವನ್ನು ಬಾಧಿಸುವುದೂ ಸಂಪನ್ಮೂಲ ಶೋಷಣೆಯೇ ಆಗಿದೆ.



*ನಾನು ನನಗಾಗಿ ಹಾಗೂ ನನ್ನ ಮುಂದಿನ ತಲೆಮಾರಿಗಾಗಿ ಹೋರಾಡುತ್ತೇನೆ. ಹಸಿವಿನಿಂದ ನರಳುತ್ತಿರುವ ಸಾವಿರಾರು ಮಕ್ಕಳಿಗೆ ಬೇಕಾಗಿ..... ಭೂಮಿಯಿಂದ ಕಣ್ಮರೆಯಾಗುತ್ತಿರುವ ಸಸ್ಯಜಾಲಗಳಿಗಾಗಿ ನಾನು ಮಾತನಾಡುತ್ತಿದ್ದೇನೆ. ಅವುಗಳಿಗೆ ಭೂಮಿಯಲ್ಲದೆ ಇನ್ನೊಂದು ಸ್ಥಳವಿಲ್ಲ. ಅವರ ಧ್ವನಿಯನ್ನು ಕೇಳುವವರು ಯಾರೂ ಇಲ್ಲ. ನನಗೆ ಉಸಿರಾಡಲು ಭಯವಾಗುತ್ತಿದೆ. ಈ ವಾಯು ಎಷ್ಟರಮಟ್ಟಿಗೆ ವಿಷಯುಕ್ತವಾಗಿದೆ ಎಂದು ನಾನರಿಯೆ.............*

*ನಾನು ಹೊರಗಿಳಿಯಲು ಭಯಪಡುತ್ತೇನೆ.............. ಕಾರಣ, ವಾತಾವರಣದ ಓಝೋನ್ ರಂಧ್ರಗಳು ನನ್ನ ಕಂದಮ್ಮಗಳಿಗೆ ಕಾಣಲು ನೀವು ಉಳಿಸುವಿರಾ. .. ಈ ಮಳೆಕಾಡು, ಮೃಗ, ಪತಂಗಗಳನ್ನು ... ನಿಮ್ಮ ಬಾಲ್ಯದಲ್ಲಿ ನೀವು ಈ ರೀತಿಯಾಗಿ ದುಃಖಿಸಿರುವಿರಾ? ವ್ಯಾಕುಲರಾಗಿರುವಿರಾ?*

*ಭೂಮಿಯನ್ನು ಸಂರಕ್ಷಿಸಲು ನಿಮಗೆ ಇನ್ನೂ ಸಮಯವಿದೆ ಎಂದು ಭಾವಿಸುತ್ತೀರಾ?*

*ನಿಮಗೆ ಸಾಲ್‌ಮನ್ ಮೀನುಗಳನ್ನು ಪುನಃ ಭೂಮಿಗೆ ತರಲು ಸಾಧ್ಯವಿಲ್ಲದಿದ್ದರೆ....*

*ಮರುಭೂಮಿಗಳಾಗಿ ಪರಿವರ್ತನೆಗೊಂಡ ವನಪ್ರದೇಶಗಳನ್ನು ಪೂರ್ವಸ್ಥಿತಿಗೆ ತರಲು ಸಾಧ್ಯವಿಲ್ಲದಿದ್ದರೆ...*

*ದಯಮಾಡಿ ನಿಲ್ಲಿಸಿ... ಇವುಗಳನ್ನು ನಾಶಗೊಳಿಸದಿರಿ.*


ಮೇಲೆ ನೀಡಿರುವುದು 1992ರಲ್ಲಿ ಬ್ರೆಜಿಲ್‌ನ ರಿಯೊ ಡಿ ಜನೈರೊದಲ್ಲಿ ನಡೆದ ವಿಶ್ವಸಂಸ್ಥೆಯ ಪ್ರಥಮ ಭೂಶೃಂಗ ಸಮ್ಮೇಳನದಲ್ಲಿ ಜಾಗತಿಕ ರಾಷ್ಟ್ರಗಳ ಅನೇಕ ಸದಸ್ಯರಿಂದ ತುಂಬಿದ ಸಭೆಯನ್ನು ಒಂದು ನಿಮಿಷ ಸ್ತಬ್ಧಗೊಳಿಸಿದ ಭಾಷಣದ ಅನುವಾದಿತ ಭಾಗಗಳಾಗಿವೆ. ಭಾಷಣಗಾರ್ತಿಯು ಕೇವಲ 12 ವರ್ಷ ಪ್ರಾಯದ ಸೆವರನ್ ಕುಳೀಸ್ ಸುಸುಕಿ ಎಂಬ ಕೆನಡ ದೇಶದ ಹುಡುಗಿಯಾಗಿದ್ದಳು.

ಆ ಹುಡುಗಿಯು ತನ್ನ ಭಾಷಣದಲ್ಲಿ ಯಾವೆಲ್ಲ ವ್ಯಾಕುಲತೆಗಳನ್ನು ಹೇಳಲು ಪ್ರಯತ್ನಿಸಿದ್ದಳು?

- ಮಲಿನಗೊಳ್ಳುತ್ತಿರುವ ವಾಯು
- ಕಣ್ಮರೆಯಾಗುತ್ತಿರುವ ಅರಣ್ಯಗಳು
- ಭೂಮಿಯಿಂದ ಕಣ್ಮರೆಯಾಗುತ್ತಿರುವ ಮೃಗಗಳು
- 
- 



1972 ಜೂನ್ ತಿಂಗಳಿನಲ್ಲಿ ಸ್ಟಾಕ್‌ಹೋಂನಲ್ಲಿ ನಡೆದ ಪರಿಸರ ಸಂರಕ್ಷಣೆ ಹಾಗೂ ಅಭಿವೃದ್ಧಿಯ ಕುರಿತಾದ ವಿಶ್ವಸಂಸ್ಥೆಯ ಸಮ್ಮೇಳನದಲ್ಲಿ ಭಾರತದ ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ನಡೆಸಿದ ಭಾಷಣದ ಪರಿಣಾಮವಾಗಿ ವಿಶ್ವಸಂಸ್ಥೆಯು ಜೂನ್ 5ನ್ನು ವಿಶ್ವ ಪರಿಸರ ದಿನವಾಗಿ ಆಚರಿಸಲು ತೀರ್ಮಾನಿಸಿತು.



ಡೋಡೋವು ಮಾನವನ ಅಮಿತವಾದ ಸಂಪನ್ಮೂಲದ ಶೋಷಣೆಯ ಪರಿಣಾಮವಾಗಿ ವಂಶನಾಶಹೊಂದಿದ ಪಕ್ಷಿಯಾಗಿದೆ. ಹಿಂದೂಮಹಾಸಾಗರದ ಮೌರೀಷ್ಯ ದ್ವೀಪಗಳಲ್ಲಿ ಕಂಡುಬರುತ್ತಿದ್ದ ಈ ಪಕ್ಷಿಯನ್ನು ಮಾಂಸಕ್ಕಾಗಿ ಕೊಂದು ನಿರ್ನಾಮ ಮಾಡಿದುದರಿಂದ ಇದು ಈ ಲೋಕದಿಂದಲೇ ಕಣ್ಮರೆಯಾಗಿದೆ. ಭಾರತದಲ್ಲಿದ್ದ ಅರೋಚ್ ಎಂಬ ಜಾನುವಾರು ವರ್ಗ, ಏಷ್ಯಾದ ಚಿರತೆ ಎಂಬೀ ಮೃಗಗಳು ವಂಶನಾಶಹೊಂದಿದವುಗಳಾಗಿವೆ.



ಕೆಳಗೆ ನೀಡಿರುವ ಚಿತ್ರಗಳನ್ನು ಗಮನಿಸಿರಿ. ಸಂಪನ್ಮೂಲಗಳನ್ನು ನಾವು ಅಜಾಗರೂಕತೆಯಿಂದ ಉಪಯೋಗಿಸಿದರೆ ಮುಂದೇನಾಗಬಹುದು? ಚಿತ್ರಗಳಿಗೆ ಅಡಿಟಪ್ಪಣಿ ಬರೆಯಿರಿ.




...............................................




ವನಭೂಮಿ ಬಂಜರು ಭೂಮಿಯಾಗಿ ಬದಲಾಗಬಹುದು




...............................................




...............................................



ಜಲ, ಮಣ್ಣು, ಪೆಟ್ರೋಲಿಯಂ, ಅರಣ್ಯ ಎಂಬೀ ಸಂಪನ್ಮೂಲಗಳು ಪ್ರಕೃತಿಯಿಂದ ಕಣ್ಮರೆಯಾದರೆ ಏನಾಗಬಹುದು? ಚರ್ಚಿಸಿರಿ.



ಪ್ರತಿ ವರ್ಷವೂ ಸುಮಾರು 3 ದಶಲಕ್ಷ ಕ್ಯೂಬಿಕ್ ಮೀಟರ್ ಮರವನ್ನು ಮಾನವನು ಉಪಯೋಗಿಸುತ್ತಾನೆ ಎಂದು ಲೆಕ್ಕ ಹಾಕಲಾಗಿದೆ. ಪ್ರತಿ ನಿಮಿಷದಲ್ಲಿ ಸುಮಾರು ಒಂದು ಫುಟ್‌ಬಾಲ್ ಮೈದಾನದಷ್ಟು ವಿಸ್ತೀರ್ಣದಲ್ಲಿ ಮಾನವನು ವನವನ್ನು ಕಡಿದು ನಾಶಮಾಡುತ್ತಾನೆ. ಈ ರೀತಿಯಲ್ಲಿ ಮುಂದುವರಿದರೆ 2020ರ ಹೊತ್ತಿಗೆ ಇಂದಿರುವ ವನಭೂಮಿಯ ಅರ್ಧದಷ್ಟು ಭಾಗ ಮಾತ್ರ ಉಳಿಯಬಹುದು ಎಂದು ಇದರ ಕುರಿತಾದ ಅಧ್ಯಯನಗಳು ಸ್ಪಷ್ಟಪಡಿಸುತ್ತವೆ.

## ಸಂಪನ್ಮೂಲಗಳ ಸಂರಕ್ಷಣೆ

ಸಂಪನ್ಮೂಲಗಳ ಸಂರಕ್ಷಣೆಯ ಮೂಲತತ್ವ ಎಂದರೆ ಸಂಪನ್ಮೂಲಗಳನ್ನು ನ್ಯಾಯಯುತವಾಗಿಯೂ ಜಾಗರೂಕತೆಯಿಂದಲೂ ಉಪಯೋಗಿಸುವುದರೊಂದಿಗೆ ಅವುಗಳಿಗೆ ಪುನಃ ಉತ್ಪಾದನೆಗೊಳ್ಳಲಿರುವ ಸಮಯವನ್ನು ನೀಡುವುದು ಎಂಬುದಾಗಿದೆ.













ಕೊಟ್ಟಿರುವ ಪ್ರತಿ ಚಿತ್ರಗಳಲ್ಲಿನ ಸಂದರ್ಭಗಳು ಸಂಪನ್ಮೂಲಗಳ ಸಂರಕ್ಷಣೆಗೆ ಹೇಗೆ ಸಹಕಾರಿಯಾಗಿವೆ ಎಂದು ಚರ್ಚಿಸಿರಿ.

**ಪ್ರಕೃತಿಗಾಗಿ ಈ ದಿನಗಳು**

ಜೂನ್ 5 ವಿಶ್ವಪರಿಸರ ದಿನ. ಎಪ್ರಿಲ್ 22 ಜಾಗತಿಕ ಭೌಮದಿನ.

**ವರ್ಕ್‌ಶೀಟ್**

ಸಂಪನ್ಮೂಲಗಳ ಅಮಿತ ಉಪಯೋಗವನ್ನು ಸೂಚಿಸುವ ಚಟುವಟಿಕೆಗಳು, ಆ ಮೂಲಕ ಬರಿದಾಗುತ್ತಿರುವ ಸಂಪನ್ಮೂಲಗಳು, ಬದಲಿ ವ್ಯವಸ್ಥೆಗಳು ಎಂಬ ರೀತಿಯಲ್ಲಿ ಪಟ್ಟಿಯ (ಪಟ್ಟಿ 12.2) ವಿಭಾಗಗಳನ್ನು ಹೊಂದಿಸಿರಿ. ಹೆಚ್ಚಿನ ಬದಲಿ ವ್ಯವಸ್ಥೆಗಳನ್ನು ಸೇರಿಸಿ ಬರೆಯಿರಿ.

| ಅಮಿತ ಉಪಯೋಗ | ಸಂಪನ್ಮೂಲ | ಬದಲಿ ವ್ಯವಸ್ಥೆಗಳು |
|---|---|---|
|  | ಜಲಸಂಪತ್ತು (ಜಲಾಶಯಗಳು) | • ಸಾರ್ವಜನಿಕ ಸಾರಿಗೆ ಸೌಕರ್ಯಗಳನ್ನು ಹೆಚ್ಚಾಗಿ ಬಳಸುವುದು.<br>• ವಾತಾವರಣ ಮಾಲಿನ್ಯವನ್ನು ಉಂಟುಮಾಡದ ಇಂಧನಗಳನ್ನು ಬಳಸುವುದು.<br>• |
|  | ವನಸಂಪತ್ತು (ಅರಣ್ಯಗಳು) | • ಶುದ್ಧ ಜಲವನ್ನು ಪೋಲುಮಾಡದಿರುವುದು.<br>• ಮಳೆನೀರು ಕೊಯ್ಲಿನಂತಿರುವ ಜಲಸಂರಕ್ಷಣ ವಿಧಾನವನ್ನು ಅನುಸರಿಸುವುದು.<br>• |
|  | ವಾಯುಸಂಪತ್ತು (ವಾತಾವರಣ) | • ವಿದ್ಯುತ್ ಉಪಕರಣಗಳನ್ನು ಹಾಗೂ ಬಲ್ಬುಗಳನ್ನು ಆಗತ್ಯಕ್ಕೆ ಮಾತ್ರ ಉಪಯೋಗಿಸುವುದು.<br>• ನವೀಕರಿಸಲು ಸಾಧ್ಯವಿರುವ ಸಂಪನ್ಮೂಲಗಳಾದ ಸೂರ್ಯಪ್ರಕಾಶ, ಗಾಳಿ ಇತ್ಯಾದಿಗಳನ್ನು ಹೆಚ್ಚಾಗಿ ಆಶ್ರಯಿಸುವುದು.<br>• |
|  | ಶಕ್ತಿ ಸಂಪತ್ತು (ಶಕ್ತಿಯ ಮೂಲಗಳು) | • ವನನಾಶವನ್ನು ತಡೆಗಟ್ಟುವುದು.<br>• ಬಂಜರು ಭೂಮಿಗಳಲ್ಲಿ ಮರ ಗಿಡಗಳನ್ನು ನೆಡುವುದು.<br>• |

ಚಿತ್ರ 12.2

ಭೂಮಿಯಲ್ಲಿ ಪ್ರಾಕೃತಿಕ ಸಂಪನ್ಮೂಲಗಳು ಪರಿಮಿತವಾಗಿದ್ದು ಅವುಗಳನ್ನು ಸಂರಕ್ಷಿಸಬೇಕೆಂದು ತಿಳಿದಿರಲ್ಲವೇ? ನಮಗೆ ಅಗತ್ಯವಾದ ಸಂಪನ್ಮೂಲಗಳನ್ನು ಉಪಯೋಗಿಸುವ ಹಕ್ಕಿದೆ ಆದರೂ ಮುಂದಿನ ತಲೆಮಾರಿಗೂ ಪ್ರಾಕೃತಿಕ ಸಂಪನ್ಮೂಲಗಳು ಅಗತ್ಯವೆಂದು ತಿಳಿದುಕೊಳ್ಳದೆ ಸಂಪನ್ಮೂಲಗಳನ್ನು ಅಮಿತವಾಗಿ ಉಪಯೋಗಿಸಲು ನಮಗೆ ಹಕ್ಕಿಲ್ಲ. 'ಸಂಪನ್ಮೂಲಗಳ ವಿನಿಯೋಗವು ವಿವೇಕಪೂರ್ಣವಾಗಿರಬೇಕು.' ಎಂಬುದು ನಮ್ಮ ಘೋಷಣ ವಾಕ್ಯವಾಗಿರಲಿ.

### ಸಂಪನ್ಮೂಲಗಳ ಸಂರಕ್ಷಣೆಯೂ ಭಾರತೀಯ ಕಾನೂನುಗಳೂ

ಸಂಪನ್ಮೂಲಗಳ ಅಮಿತವಾದ ಶೋಷಣೆಯು ಮಾನವನ ಅಸ್ತಿತ್ವಕ್ಕೇ ಬೆದರಿಕೆ ಉಂಟುಮಾಡಲು ಆರಂಭಿಸಿದಾಗ ಕರುಣೆಯಿಲ್ಲದೆ ಪ್ರಕೃತಿಗೆ ಆಘಾತವನ್ನುಂಟುಮಾಡುವುದನ್ನು ನಿಯಂತ್ರಿಸಬೇಕೆಂಬ ಚಿಂತನೆಗಳಿಂದ ಈ ಕಾನೂನುಗಳು ರೂಪುಗೊಂಡವು.


1. ಪರಿಸರ ಸಂರಕ್ಷಣೆ ಭಾರತದ ಪ್ರಜೆಗಳ ಕರ್ತವ್ಯವೆಂದು ಭಾರತೀಯ ಸಂವಿಧಾನದ 48 ಎ ಅನುಚ್ಛೇದ ಹಾಗೂ 51 ಎಜಿ ಅನುಚ್ಛೇದಗಳು ಉಲ್ಲೇಖಿಸುತ್ತವೆ.
2. ಪರಿಸರ ಸಂರಕ್ಷಣ ನಿಯಮ
3. ಜಲನಿಯಮ
4. ಅರಣ್ಯ ಸಂರಕ್ಷಣ ನಿಯಮ
5. ವಾಯು ನಿಯಮ
6. ರಾಷ್ಟ್ರೀಯ ಪರಿಸರ ಟ್ರಿಬ್ಯೂನಲ್

### ಕೇರಳದಲ್ಲಿ ಸಂಪನ್ಮೂಲ ಸಂರಕ್ಷಣೆ

ಪೆರಿಯಾರ್ ನದಿಯ ಸಂರಕ್ಷಣೆಗಾಗಿ ನಡೆದ ಜನಾಂದೋಲನವು 1999ರಲ್ಲಿ ಜಲ ನಿಗಮದ ಸ್ಥಾಪನೆಗೆ ಕಾರಣವಾಯಿತು. ಈ ರೀತಿಯ ಜನಾಂದೋಲನದ ಮೂಲಕವೂ ಸರಕಾರದ ಹಸ್ತಕ್ಷೇಪದ ಫಲವಾಗಿಯೂ ಅನೇಕ ನಿಯಮಗಳು ಸಂಪನ್ಮೂಲ ಸಂರಕ್ಷಣೆಗೆ ಸಂಬಂಧಿಸಿ ಕೇರಳದಲ್ಲಿ ಜಾರಿಗೆ ಬಂದಿವೆ. ಉದಾಹರಣೆಗೆ ಭತ್ತದ ಬಯಲು ಸಂರಕ್ಷಣ ನಿಯಮ, ಸಿಹಿನೀರು ತಟಾಕ ಸಂರಕ್ಷಣ ನಿಯಮ.

## ಸುಸ್ಥಿರವಾದ ಅಭಿವೃದ್ಧಿ ಸುರಕ್ಷಿತ ಪ್ರಕೃತಿ

ಸುಸ್ಥಿರ ಅಭಿವೃದ್ಧಿಯೆಂದರೆ ಮುಂದಿನ ತಲೆಮಾರಿನವರಿಗೆ ಅವರ ಅವಶ್ಯಕತೆಗಳನ್ನು ನೆರವೇರಿಸುವ ಸಾಮರ್ಥ್ಯದಲ್ಲಿ ಕೊರತೆಯಾಗದಂತೆ ಇಂದಿನ ತಲೆಮಾರಿನವರು ತಮ್ಮ ಆವಶ್ಯಕತೆಗಳನ್ನು ನೆರವೇರಿಸಿಕೊಳ್ಳುವುದಾಗಿದೆ.



*"ಎಲ್ಲರ ಆವಶ್ಯಕತೆಗಳನ್ನು ಪೂರೈಸಲು ಸಾಧ್ಯವಿರುವ ಸಂಪನ್ಮೂಲಗಳು ನಮ್ಮಲ್ಲಿವೆ. ಆದರೆ ಕೇವಲ ಒಬ್ಬರ ಅತಿಯಾದ ಆಗ್ರಹವನ್ನು ನೆರವೇರಿಸಲು ಬೇಕಾದಷ್ಟು ಇಲ್ಲ"*

**ಗಾಂಧೀಜಿ**




ಸಂಪನ್ಮೂಲಗಳನ್ನು ಪುನರ್ಬಳಕೆ ಮಾಡುವುದು, ಅವುಗಳ ಉಪಯೋಗವನ್ನು ಕಡಿಮೆಗೊಳಿಸುವುದು, ಅವುಗಳನ್ನು ಪುನರ್ನಿರ್ಮಿಸಿ ಉಪಯೋಗಿಸುವುದು ಇತ್ಯಾದಿಗಳು ಸುಸ್ಥಿರ ಅಭಿವೃದ್ಧಿಗೆ ತಲುಪಲಿರುವ ಮಾರ್ಗಗಳಾಗಿವೆ.

## ಸುಸ್ಥಿರ ಅಭಿವೃದ್ಧಿಗಾಗಿ ಏನು ಮಾಡಬಹುದು?

### ನಾವೊಂದಾಗಿ



- ಅಡುಗೆಕೋಣೆಯಿಂದ ಹರಿಯುವ ಜಲವನ್ನು ಸಸ್ಯಗಳಿಗುಣಿಸಲು ಉಪಯೋಗಿಸುವುದು.
- ಸಾರ್ವಜನಿಕ ಸ್ಥಳಗಳಲ್ಲಿ ಮರಗಿಡಗಳನ್ನು ನೆಟ್ಟು ಬೆಳೆಸುವುದು.
- ನವೀಕರಿಸಲು ಸಾಧ್ಯವಿರುವ ಚೈತನ್ಯದ ಮೂಲಗಳಾದ ಸೌರಚೈತನ್ಯ, ಗಾಳಿಯಿಂದ ದೊರಕುವ ಚೈತನ್ಯ ಇತ್ಯಾದಿಗಳನ್ನು ಗರಿಷ್ಠ ಪ್ರಮಾಣದಲ್ಲಿ ಉಪಯೋಗಿಸುವುದು.



- ಮಳೆಕೊಯ್ಲು ವ್ಯವಸ್ಥೆಯನ್ನು ಅಳವಡಿಸುವುದು.
- ಪ್ಲಾಸ್ಟಿಕ್ ಚೀಲಗಳಿಗೆ ಬದಲಾಗಿ ಬಟ್ಟೆಚೀಲಗಳನ್ನು ಬಳಸುವುದು.
- 



### ಇಂದಿನಿಂದ ನಾನು


- ಚೈತನ್ಯದ ಬಳಕೆ ಕಡಿಮೆಮಾಡಲು
  - ಲೈಟು, ಫ್ಯಾನುಗಳನ್ನು ಅಗತ್ಯಕ್ಕೆ ಮಾತ್ರ ಉಪಯೋಗಿಸುತ್ತೇನೆ.
  - ಗುಣಮಟ್ಟದ ವಿದ್ಯುತ್ ಉಪಕರಣಗಳನ್ನು ಉಪಯೋಗಿಸುತ್ತೇನೆ.
  - ಸಾಮಾನ್ಯ ಬಲ್ಬುಗಳ ಬದಲು ಸಾಧ್ಯವಾದಷ್ಟು ಮಟ್ಟಿಗೆ ಎಲ್.ಇ.ಡಿ. ಬಲ್ಬುಗಳನ್ನು ಉಪಯೋಗಿಸುತ್ತೇನೆ.
  - 
  - 




- ಈ ವಸ್ತುಗಳನ್ನು ಪುನರ್ಬಳಕೆ ಮಾಡುತ್ತೇನೆ.
  - ಕಾಗದ
  - ಬಾಟ್ಲಿ
  - ವಸ್ತ್ರ
  -
  -



- ಪರಿಸರ ಸಮಸ್ಯೆಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಕೆಲಸಗಳಲ್ಲಿ ನಿರತನಾಗುತ್ತೇನೆ.
- ಅತ್ಯಗತ್ಯಕ್ಕೆ ಮಾತ್ರವೇ ಸಂಪನ್ಮೂಲಗಳನ್ನು ಉಪಯೋಗಿಸುತ್ತೇನೆ.
-
-



## ಕ್ರೋಡೀಕರಣ

- ಪ್ರಕೃತಿಯಿಂದ ಲಭಿಸುವ ಹಾಗೂ ಮಾನವನಿಗೆ ಉಪಯೋಗಕಾರಿಗಳಾದ ವಸ್ತುಗಳು ಸಂಪನ್ಮೂಲಗಳೆಂದು ತಿಳಿಯಲ್ಪಡುತ್ತವೆ.
- ಪ್ರಕೃತಿಯಿಂದ ನೇರವಾಗಿ ಲಭಿಸುವವುಗಳು ಹಾಗೂ ಉಪಯೋಗಿಸಲು ಯೋಗ್ಯವಾದ ಸಂಪನ್ಮೂಲಗಳು ಪ್ರಾಕೃತಿಕ ಸಂಪನ್ಮೂಲಗಳಾಗಿವೆ.
- ಪ್ರಾಕೃತಿಕ ಸಂಪನ್ಮೂಲಗಳಲ್ಲಿ ಕೆಲವು ಎಂದೆಂದಿಗೂ ಲಭ್ಯವಾಗುವವುಗಳು. ಇನ್ನು ಕೆಲವು ಉಪಯೋಗಕ್ಕೆ ಅನುಸಾರವಾಗಿ ಬರಿದಾಗುವವುಗಳು. ಇವುಗಳನ್ನು ಯಥಾಕ್ರಮ ನವೀಕರಿಸಲು ಸಾಧ್ಯವಿರುವವುಗಳು ಹಾಗೂ ನವೀಕರಿಸಲು ಸಾಧ್ಯವಿಲ್ಲದವುಗಳೆಂದು ಕರೆಯುತ್ತಾರೆ.
- ಅನಿಯಂತ್ರಿತವಾದ ಸಂಪನ್ಮೂಲಗಳ ಉಪಯೋಗದಿಂದಾಗಿ ಸಂಪನ್ಮೂಲಗಳ ಅಳತೆ ಹಾಗೂ ಗುಣಮಟ್ಟದಲ್ಲಿ ಉಂಟಾಗುವ ಕಡಿತವು ಸಂಪನ್ಮೂಲಗಳ ಶೋಷಣೆಯಾಗಿದೆ.
- ಸಂಪನ್ಮೂಲಗಳ ಸಂರಕ್ಷಣೆಯೆಂದರೆ ಸಂಪನ್ಮೂಲಗಳನ್ನು ನ್ಯಾಯಯುತವಾಗಿಯೂ ಜಾಗರೂಕತೆಯಿಂದಲೂ ಬಳಸುವುದರೊಂದಿಗೆ ಅವುಗಳಿಗೆ ಪುನಃ ಉತ್ಪಾದಿಸಲ್ಪಡಲು ಸಮಯವನ್ನು ಒದಗಿಸುವುದಾಗಿದೆ.
- ಸುಸ್ಥಿರ ಅಭಿವೃದ್ಧಿಯೆಂದರೆ ಮುಂದಿನ ತಲೆಮಾರಿನವರ ಅವಶ್ಯಕತೆಯನ್ನು ನೆರವೇರಿಸಲು ಅಗತ್ಯವಾದ ಸಂಪನ್ಮೂಲಗಳನ್ನು ಸಂರಕ್ಷಿಸುವುದಾಗಿದೆ.

## ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಪ್ರಕೃತಿಯಿಂದ ನೇರವಾಗಿ ಲಭಿಸುವವುಗಳು ಹಾಗೂ ಉಪಯೋಗಕಾರಿಗಳಾದ ವಸ್ತುಗಳನ್ನು ಪ್ರಾಕೃತಿಕ ಸಂಪನ್ಮೂಲಗಳೆಂದು ತಿಳಿದು ಪಟ್ಟಿಮಾಡುವುದು.
- ಪ್ರಾಕೃತಿಕ ಸಂಪನ್ಮೂಲಗಳನ್ನು ನವೀಕರಿಸಲು ಸಾಧ್ಯವಿರುವವುಗಳು ಹಾಗೂ ನವೀಕರಿಸಲು ಸಾಧ್ಯವಿಲ್ಲದವುಗಳೆಂದು ವರ್ಗೀಕರಿಸುವುದು.
- ಸಂಪನ್ಮೂಲ ಶೋಷಣೆಯೆಂದರೆ ಹೆಚ್ಚುತ್ತಿರುವ ಮಾನವನ ಅಗತ್ಯಗಳು ಹಾಗೂ ಅನಿಯಂತ್ರಿತವಾದ ಉಪಯೋಗದ ಪರಿಣಾಮವಾಗಿದೆ ಎಂಬ ತಿಳುವಳಿಕೆ ಪಡೆಯುವುದು.
- ಅವೈಜ್ಞಾನಿಕ ಹಾಗೂ ಅನಿಯಂತ್ರಿತವಾಗಿ ಸಂಪನ್ಮೂಲಗಳನ್ನು ಉಪಯೋಗಿಸುವುದರಿಂದ ಭವಿಷ್ಯದಲ್ಲಿ ಉಂಟಾಗಬಹುದಾದ ದೋಷಗಳನ್ನು ಗುರುತಿಸುವುದು.
- ಸಂಪನ್ಮೂಲಗಳ ಸಂರಕ್ಷಣೆಯ ಪ್ರಾಧಾನ್ಯವನ್ನು ಕಂಡುಕೊಂಡು ವಿವಿಧ ಪರಿಹಾರ ಮಾರ್ಗಗಳನ್ನು ಸೂಚಿಸುವುದರೊಂದಿಗೆ ಅವುಗಳನ್ನು ಪಟ್ಟಿ ಮಾಡುವುದು.
- ಪ್ರಗತಿಶೀಲ ಅಭಿವೃದ್ಧಿ ಎಂಬ ಸಮೀಪನದ ಪ್ರಾಧಾನ್ಯವನ್ನು ತಿಳಿದು ಅದಕ್ಕಾಗಿ ಗುಂಪಾಗಿಯೂ ವೈಯಕ್ತಿಕವಾಗಿಯೂ ತಮ್ಮನ್ನು ತಾವು ತೊಡಗಿಸಿಕೊಳ್ಳುವುದು.



## ಮೌಲ್ಯನಿರ್ಣಯ ಮಾಡುವ

- ಕೃಷಿಕನಾದ ರಾಘವನು ಪರಂಪರಾಗತ ರೀತಿಯಲ್ಲಿ ಕೃಷಿಮಾಡುತ್ತಾನೆ. ಜೈವಿಕ ಗೊಬ್ಬರವನ್ನು ಬಳಸಿ ಅವನು ಜಾನುವಾರುಗಳನ್ನುಪಯೋಗಿಸಿ ನೆಲವನ್ನು ಉತ್ತು ಹದಗೊಳಿಸಿ ಕೃಷಿ ಮಾಡುತ್ತಾನೆ. ಇಲ್ಲಿ ರಾಘವನು ಯಾವೆಲ್ಲ ವಿಧದ ಪ್ರಾಕೃತಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಕೃಷಿ ಮಾಡಿದ್ದಾನೆ? ಅವುಗಳು ಯಾವುವು ಎಂದು ಪಟ್ಟಿ ಮಾಡಿರಿ. ಪ್ರಾಕೃತಿಕ ಸಂಪನ್ಮೂಲಗಳೆಂದರೇನು?
- ಮರ, ಸೂರ್ಯಪ್ರಕಾಶ, ಮೀನು, ಗಾಳಿ, ಜಾನುವಾರು, ಜಲ ಇತ್ಯಾದಿಗಳು ಕೆಲವು ಪ್ರಾಕೃತಿಕ ಸಂಪನ್ಮೂಲಗಳಾಗಿವೆ.

  ಇವುಗಳನ್ನು ಜೈವಿಕ ಸಂಪನ್ಮೂಲಗಳೆಂದು ಅಜೈವಿಕ ಸಂಪನ್ಮೂಲಗಳೆಂಬುದಾಗಿ ವರ್ಗೀಕರಿಸಿ ಪಟ್ಟಿ ಮಾಡಿರಿ.

| ಜೈವಿಕ ಸಂಪನ್ಮೂಲಗಳು | ಅಜೈವಿಕ ಸಂಪನ್ಮೂಲಗಳು |
|---|---|
| ♦ | ♦ |
| ♦ | ♦ |
| ♦ | ♦ |

- ಎರಡು ಕಾರುಗಳ ವಿಶೇಷತೆಗಳನ್ನು ಕೆಳಗೆ ನೀಡಲಾಗಿದೆ. ಇವುಗಳ ವಿಶೇಷತೆಯನ್ನು ಕಂಡುಕೊಂಡು ಸರಿಯಾದ ಕಾಲಂಗಳಲ್ಲಿ ಬರೆಯಿರಿ.

  ಕಾರು ಎ : ಸೂರ್ಯಪ್ರಕಾಶದಿಂದ ಕಾರ್ಯನಿರ್ವಹಿಸುತ್ತದೆ.

  ಕಾರು ಬಿ : ಪೆಟ್ರೋಲಿನಿಂದ ಕಾರ್ಯನಿರ್ವಹಿಸುತ್ತದೆ.

**ವಿಶೇಷತೆಗಳು**

1. ವಾತಾವರಣ ಮಾಲಿನ್ಯವನ್ನು ಉಂಟುಮಾಡುವುದಿಲ್ಲ.
2. ನವೀಕರಿಸಲು ಸಾಧ್ಯವಿಲ್ಲದ ಇಂಧನವನ್ನು ಸಂಪನ್ಮೂಲವಾಗಿ ಬಳಸಲಾಗುತ್ತದೆ.
3. ವಾತಾವರಣದಲ್ಲಿ ಕಾರ್ಬನ್ ಡೈ ಓಕ್ಸೈಡ್‌ನ ಪ್ರಮಾಣವು ಹೆಚ್ಚುತ್ತದೆ.
4. ಈ ರೀತಿಯ ಕಾರುಗಳನ್ನು ಧಾರಾಳವಾಗಿ ಬಳಸುತ್ತಾರೆ.
5. ಈ ರೀತಿಯ ಕಾರುಗಳನ್ನು ಪರಿಮಿತವಾಗಿ ಉಪಯೋಗಿಸುತ್ತಾರೆ.
6. ನವೀಕರಿಸಲು ಸಾಧ್ಯವಿರುವ ಸಂಪನ್ಮೂಲಗಳನ್ನು ಇಂಧನವಾಗಿ ಬಳಸುತ್ತಾರೆ.

| ಕಾರು ಎ | ಕಾರು ಬಿ |
|---|---|
| ♦ | ♦ |
| ♦ | ♦ |
| ♦ | ♦ |

7 ಇದರಲ್ಲಿ ಯಾವ ಕಾರು ಪರಿಸರ ಸ್ನೇಹಿಯಾಗಿದೆ? ನಿಮ್ಮ ಉತ್ತರವನ್ನು ಸಮರ್ಥಿಸಿರಿ.

- 'ಸಂಪನ್ಮೂಲಗಳು ನಾವು ಸಾಲಪಡೆದವುಗಳಾಗಿವೆ' ಈ ಹೇಳಿಕೆಯನ್ನು ವಿಶ್ಲೇಷಿಸಿ ನಿಗಮನವನ್ನು ಬರೆಯಿರಿ. ಸಂಪನ್ಮೂಲಗಳ ಸಂರಕ್ಷಣೆಗಾಗಿರುವ ಐದು ವಿಧಾನಗಳನ್ನು ಕಂಡುಕೊಂಡು ಪಟ್ಟಿ ತಯಾರಿಸಿರಿ.
- ಕೆಳಗೆ ಕೊಟ್ಟಿರುವ ಚಟುವಟಿಕೆಗಳನ್ನು ಗಮನಿಸಿರಿ. ಇವುಗಳು ಸಂಪನ್ಮೂಲಗಳ ಸಂರಕ್ಷಣೆಗೆ ಹೇಗೆ ಸಹಾಯಕವಾಗುತ್ತವೆ ಎಂಬುದನ್ನು ಕಂಡಕೊಂಡು ಯೋಗ್ಯವಾದ ಕಾಲಂಗಳಲ್ಲಿ ಬರೆಯಿರಿ.

| | |
|---|---|
| 1 . ಸೈಕಲಿನ ಬಳಕೆ | |
| 2 . ಪ್ಲಾಸ್ಟಿಕ್ ಚೀಲಗಳ ಬದಲು ಬಟ್ಟೆ ಚೀಲಗಳ ಬಳಕೆ | |
| 3 . ವಿದ್ಯುತ್ತಿಗಾಗಿ ಸೋಲಾರ್ ಪಾನಲ್‌ಗಳ ಬಳಕೆ | |
| 4 . ಸಾರ್ವಜನಿಕ ಸ್ಥಳಗಳಲ್ಲಿ ಮರಗಿಡಗಳನ್ನು ನೆಡುವುದು. | |



## ಮುಂದುವರಿದ ಚಟುವಟಿಕೆಗಳು

- ವಂಶನಾಶದ ಭೀತಿಯನ್ನು ಎದುರಿಸುತ್ತಿರುವ ಮೃಗಗಳ ಹಾಗೂ ಪಕ್ಷಿಗಳ ಪಟ್ಟಿ ತಯಾರಿಸಿ ಸಮಾಜ ವಿಜ್ಞಾನ ತರಗತಿಯಲ್ಲಿ ಪ್ರದರ್ಶಿಸುವುದು.
- ವಿಶ್ವಪರಿಸರ ದಿನ, ಭೌಮದಿನಗಳನ್ನು ಆಚರಿಸುವುದರೊಂದಿಗೆ ಇದರ ಪ್ರಾಧಾನ್ಯವನ್ನು ಸೂಚಿಸುವ ಚಾರ್ಟುಗಳನ್ನು ತಯಾರಿಸಿ ಪ್ರದರ್ಶನವನ್ನು ಏರ್ಪಡಿಸುವುದು.
- ಶಾಲೆಯ ಹಿತ್ತಿಲಿನ ಲಭ್ಯವಾದ ಸ್ಥಳಗಳಲ್ಲಿ ಗಿಡಗಳನ್ನು ನೆಟ್ಟು ಬೆಳೆಸುವುದು. ಅವುಗಳ ಪರಿಪಾಲನೆಗೆ ಗುಂಪು ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.

## ಸ್ವಮೌಲ್ಯನಿರ್ಣಯ

| | ಪೂರ್ಣವಾಗಿ | ಭಾಗಿಕವಾಗಿ | ಉತ್ತಮ ಪಡಿಸಬೇಕು |
|---|---|---|---|
| ಪ್ರಾಕೃತಿಕ ಸಂಪನ್ಮೂಲಗಳನ್ನು ಗುರುತಿಸಲು ಸಾಧ್ಯವಿದೆ. | | | |
| ನವೀಕರಿಸಲು ಸಾಧ್ಯವಿರುವ ಸಂಪನ್ಮೂಲಗಳು ಹಾಗೂ ನವೀಕರಿಸಲು ಸಾಧ್ಯವಿಲ್ಲದ ಸಂಪನ್ಮೂಲಗಳು ಎಂದು ಪಟ್ಟಿಮಾಡಲು ಸಾಧ್ಯವಿದೆ. | | | |
| ಸಂಪನ್ಮೂಲಗಳ ಶೋಷಣೆಗೆ ಕಾರಣವಾಗುವ ಚಟುವಟಿಕೆಗಳನ್ನು ಗುರುತಿಸಲು ಸಾಧ್ಯವಿದೆ. | | | |
| ಸಂಪನ್ಮೂಲಗಳ ಸಂರಕ್ಷಣೆಯ ಪ್ರಾಧಾನ್ಯವನ್ನು ತಿಳಿದು ವಿವರಿಸಲು ಸಾಧ್ಯವಿದೆ. | | | |
| ಸಂಪನ್ಮೂಲ ಸಂರಕ್ಷಣ ವಿಧಾನಗಳನ್ನು ಕಂಡುಕೊಂಡು ಪಟ್ಟಿ ತಯಾರಿಸಲು ಸಾಧ್ಯವಿದೆ. | | | |
| ಪ್ರಗತಿಶೀಲ ಅಭಿವೃದ್ಧಿಯ ಪ್ರಾಧಾನ್ಯವನ್ನು ವಿವರಿಸಲು ಸಾಧ್ಯವಿದೆ. | | | |